
ಜನಶಕ್ತಿ


ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 | ಸಂಚಿಕೆ 9 | ಪುಟ 16
ಫೆಬ್ರವರಿ 28, 2016 ರೂ. 10/-
web: www.janashakthi.co.in
e-mail : js_weekly@yahoo.com



JNU ಮೇಲೆ ದಾಳಿ ಭಾರತದ ಮೇಲೆ ದಾಳಿ



ಸಿಪಿಐ(ಎಂ) ಕಛೇರಿ ಮೇಲೆ ದಾಳಿ



ಉಪ ಚುನಾವಣೆ : ಎಚ್ಚರಿಕೆ ಗಂಟೆ

ಫೆ. 16 : ಯಶಸ್ವಿ ವಿ.ವಿ. ಬಂದ್

ಬಿಸಿಯೂಟ ನೌಕರರ ಪ್ರತಿಭಟನೆ

ಜವಾಹರಲಾಲ್ ನೆಹರೂ ವಿವಿಯನ್ನು ಕೋಮುವಾದಿಗಳ ಹೊಡೆತಗಳಿಂದ ರಕ್ಷಿಸಿ

ಪ್ರಜಾಪ್ರಭುತ್ವ ಹಕ್ಕುಗಳನ್ನು, ನ್ಯಾಯ ನೀಡಿಕೆ ವ್ಯವಸ್ಥೆಯನ್ನು ಬುಡಮೇಲು ಮಾಡುವ ಪ್ರಯತ್ನಗಳನ್ನು ವಿಫಲಗೊಳಿಸಿ

–ಸಿಪಿಐ(ಎಂ) ಕೇಂದ್ರ ಸಮಿತಿ ಕರೆ

ಬಂಧಿತ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ(ಜೆಎನ್‌ಯು) ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ನೈಯಾ ಕುಮಾರ್‌ಗೆ ಸಾಕಷ್ಟು ಭದ್ರತೆ ನೀಡಬೇಕೆಂಬ ಸುಪ್ರಿಂ ಕೋರ್ಟ್ ನಿರ್ದೇಶನವನ್ನೂ ದಿಲ್ಲಿ ಪೋಲೀಸ್ ಪಾಲಿಸಿಲ್ಲ. ಈ ಪೋಲೀಸರ ಕಣ್ಣೆದುರೇ ಆರೆಸ್ಸೆಸ್–ಬಿಜೆಪಿ ಗೂಂಡಾಗಳು ಪಾಟಿಯಾಲಾ ಹೌಸ್ ಕೋರ್ಟ್ ಆವರಣದಲ್ಲಿ ಮತ್ತೆ ಹಿಂಸಾಚಾರ ನಡೆಸಿ ಕನ್ನೈಯಾ ಅವರಿಗೆ ಹೊಡೆದಿದ್ದಾರೆ. ಇದನ್ನು ನವದೆಹಲಿಯಲ್ಲಿ ಈಗ ಸಭೆ ಸೇರಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಬಲವಾಗಿ ಖಂಡಿಸಿದೆ. **ದೇಶದ ರಾಜಧಾನಿಯಲ್ಲಿ ಕಾನೂನನ್ನು ಜಾರಿಮಾಡಬೇಕಾದ ಪಡೆಯ ಅಧಿಕಾರ ಸಂಪೂರ್ಣವಾಗಿ ಕುಸಿದಿರುವಂತೆ ಕಾಣುತ್ತದೆ, ನ್ಯಾಯಾಂಗದ ಆದೇಶಗಳನ್ನು ಭಂಡತನದಿಂದ ಬುಡಮೇಲು ಮಾಡಲಾಗುತ್ತಿದೆ** ಎಂದು ಅದು ಅಭಿಪ್ರಾಯಪಟ್ಟಿದೆ.

ಜೆಎನ್‌ಯು ವಿದ್ಯಾರ್ಥಿ ಸಂಘದ ಚುನಾಯಿತ ಅಧ್ಯಕ್ಷನನ್ನು ರಾಜದ್ರೋಹದ ಗಂಭೀರ ಆಪಾದನೆಯ ಮೇಲೆ ಬಂಧಿಸಿದ್ದು ಆತ ಇನ್ನೂ ಪೋಲೀಸ್ ಕಸ್ಟಡಿಯಲ್ಲಿ ಇದ್ದಾರೆ. ಈ ಆಪಾದನೆ ಆಧಾರಹೀನ ಎಂದಿರುವ ಸಿಪಿಐ(ಎಂ) ಕೇಂದ್ರ ಸಮಿತಿ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ಆತನ ಹಾಗೂ ಇತರ ವಿದ್ಯಾರ್ಥಿಗಳ ಮೇಲೆ ಹಾಕಿರುವ ರಾಜದ್ರೋಹದ ಆಪಾದನೆಯನ್ನು ಕೈಬಿಡಬೇಕು ಎಂದು ಆಗ್ರಹಿಸಿದೆ.

ದೇಶದ ಪ್ರಮುಖ ಶೈಕ್ಷಣಿಕ ಸಂಸ್ಥೆಗಳಲ್ಲಿ ಭಿನ್ನಮತದ ಬಾಯಿ ಮುಚ್ಚಿಸಲು ಹುನ್ನಾರ

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ವಿರುದ್ಧ ಈ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದ ಕೃಪಾಪೋಷಣೆಯಲ್ಲಿ ಮಾಡುತ್ತಿರುವ ದಾಳಿಗಳ ಬಗ್ಗೆ ಕೂಡ ಸಿಪಿಐ(ಎಂ) ಕೇಂದ್ರ ಸಮಿತಿ ಬಲವಾದ ಖೇದ ವ್ಯಕ್ತಪಡಿಸಿದೆ. ಇನ್ನೂ ತನಿಖೆಯಲ್ಲಿ ಇರುವ, ಅಪರಾಧ ಇನ್ನೂ ಸಾಬೀತಾಗಿರದ ಮತ್ತು ಬಹುಪಾಲು ವಿದ್ಯಾರ್ಥಿಗಳ ಅಭಿಪ್ರಾಯವನ್ನೇನೂ ಬಿಂಬಿಸದ ಒಂದು ಅಪರೂಪದ ಘಟನೆಯನ್ನು ಈಗ ಪ್ರಗತಿಶೀಲ ಮತ್ತು ಪ್ರಜಾಸತ್ತಾತ್ಮಕ ವಿದ್ಯಾರ್ಥಿ ಆಂದೋಲನವನ್ನು ಸದೆ ಬಡಿಯಲು ಹಾಗೂ ಜೆನ್‌ಯುನಂತಹ ಒಂದು ಸಂಸ್ಥೆಯ ಹೆಸರುಗೆಡಿಸಲು ನಗ್ನವಾಗಿಯೇ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ . ಇದು ಆರೆಸ್ಸೆಸ್ ಮತ್ತು ಅದರ ಬಾಲಂಗೋಚಿಗಳ ಬಹು ಕಾಲದ ಹುನ್ನಾರ. ದೇಶದ ಪ್ರಮುಖ ಶೈಕ್ಷಣಿಕ ಸಂಸ್ಥೆಗಳಲ್ಲಿ ಭಿನ್ನಮತದ ಬಾಯಿ ಮುಚ್ಚಿಸಲು ಬಿಜೆಪಿ ಕೇಂದ್ರ ಸರಕಾರ ಪ್ರಭುತ್ವದ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಂಡು ಪ್ರಯತ್ನಗಳನ್ನು ಮಾಡುತ್ತಿರುವ ಹಿನ್ನೆಲೆಯಲ್ಲಿ ಜೆನ್‌ಯು ಆವರಣದ ಮೇಲೆ ಈ ಪ್ರಜಾಪ್ರಭುತ್ವ–ವಿರೋಧಿ ಸರ್ವಾಧಿಕಾರಶಾಹೀ ದಾಳಿ ಗಂಭೀರ ಪರಿಣಾಮಗಳನ್ನು ಬೀರುವಂತದ್ದು ಎಂದು ಸಿಪಿಐ(ಎಂ) ಎಚ್ಚರಿಸಿದೆ.

ಆರೆಸ್ಸೆಸ್/ಬಿಜೆಪಿ ಗೂಂಡಾಗಳು ನ್ಯಾಯಾಲಯದ ಕಲಾಪಗಳನ್ನು ಅಸ್ತವ್ಯಸ್ತಗೊಳಿಸಿ, ಈ ಕೇಸಿನ ಸರಿಯಾದ ವಿಚಾರಣೆ ನಡೆಯದಂತೆ ಮಾಡಿರುವ ರೀತಿಯನ್ನು ಕೂಡ ಸಿಪಿಐ(ಎಂ) ಕೇಂದ್ರ ಸಮಿತಿ ಖಂಡಿಸಿದೆ. ಇಂದಿನ (ಫೆಬ್ರುವರಿ 17) ಅಮಾನುಷ ದಾಳಿ ಕೋರ್ಟ್ ಆವರಣದಲ್ಲಿ ನೆರೆದಿದ್ದ ವಕೀಲರು, ಮಾಧ್ಯಮದವರು, ಜೆನ್‌ಯು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಮೇಲೆ ನಡೆಸಿರುವ ಸತತ ಎರಡನೇ ದಾಳಿ. ದಿಲ್ಲಿಯ ಬಿಜೆಪಿ ಶಾಸಕ ವಿದ್ಯಾರ್ಥಿಗಳನ್ನು ಮತ್ತು ಮಾಧ್ಯಮದವರನ್ನು ದೈಹಿಕವಾಗಿ ಥಳಿಸುತ್ತಿದ್ದವರಿಗೆ ನೇತೃತ್ವ ನೀಡುತ್ತಿದ್ದುದು, ಸ್ವತಃ ಥಳಿಸುತ್ತಿದ್ದುದು ಕ್ಯಾಮರಾದಲ್ಲಿ ಸೆರೆಯಾಗಿದೆ. ಆದರೂ ಆತನ ಮತ್ತು ಇತರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ನೇರವಾಗಿ ಕೇಂದ್ರ ಗೃಹ ಮಂತ್ರಾಲಯದ ಅಡಿಯಲ್ಲಿ ಕೆಲಸ ಮಾಡುವ ದಿಲ್ಲಿ ಪೋಲೀಸರ ಪಕ್ಷಪಾತದ ನಿಲುವನ್ನು ಬಯಲು ಮಾಡುತ್ತಿದೆ. ಇದು ಅತ್ಯಂತ ನಿಂದನೀಯ ಎಂದು ಸಿಪಿಐ(ಎಂ) ಹೇಳಿದೆ. **ಸಾಲದ್ದಕ್ಕೆ , ದಿಲ್ಲಿಯ ಪೋಲೀಸ್ ಕಮಿಶನರ್ ಈ ದುಂಡಾವರ್ತನೆಯನ್ನು ಸಮರ್ಥಿಸುವ ಭಂಡತನ ತೋರಿದ್ದಾರೆ. ಆತನಿಗೆ ತನ್ನ ಹುದ್ದೆಯಲ್ಲಿ ಮುಮದುವರೆಯುವ ಅಧಿಕಾರ ಇಲ್ಲ. ಇದು ದೇಶದಲ್ಲಿ ನ್ಯಾಯ ನೀಡಿಕೆಯ ಪ್ರಕ್ರಿಯೆಯನ್ನು ಬುಡಮೇಲು ಮಾಡುವ ಭಂಡತನವಲ್ಲದೆ ಬೇರೇನೂ ಅಲ್ಲ, ಇಂತಹ ದಮನದ ತಂತ್ರಗಳು ಅತ್ಯಂತ ಸರ್ವಾಧಿಕಾರಶಾಹಿ ಮತ್ತು ಫ್ಯಾಸಿಸ್ಟ್ ಮಾದರಿಯ ಪ್ರವೃತ್ತಿಗಳನ್ನು ನೆನಪಿಗೆ ತರುತ್ತಿವೆ** ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ವಿಫಲತೆಗಳನ್ನು ಮುಚ್ಚಿಕೊಳ್ಳುವ ಪ್ರಯತ್ನ

ಬಿಜೆಪಿ ಸರಕಾರದ ಸರ್ವತೋಮುಖ ವಿಫಲತೆ ಮತ್ತು ಬಹುಪಾಲು ಭಾರತೀಯ ಜನಸಮೂಹಗಳ ಮೇಲೆ ಅದು ಹೇರುತ್ತಿರುವ ಅಭೂತಪೂರ್ವ ಹೊರೆಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆಯಲು ಬಿಜೆಪಿ ಸರಕಾರ ಪ್ರಯತ್ನಿಸುತ್ತಿದೆಯೆಂಬುದು ಸ್ಪಷ್ಟ. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಮತ್ತು ದೇಶದ ಇತರ ಹಲವು ಉನ್ನತ ಶಿಕ್ಷಣ ಸಂಸ್ಥೆಗಳ **ಪ್ರಗತಿಶೀಲ ಮೌಲ್ಯಗಳ ಮೇಲೆ ಕಪೋಲಕಲ್ಪಿತ ಮತ್ತು ಅಸಂಬದ್ಧ ಆಪಾದನೆಗಳ ಆಧಾರದಲ್ಲಿ ಕುರುಡು ದೇಶಭಕ್ತಿಯನ್ನು ಬಡಿದೆಬ್ಬಿಸಿ ಕೋಮುಧ್ರುವೀಕರಣವನ್ನು ಇನ್ನಷ್ಟು ತೀಕ್ಷ್ಣಗೊಳಿಸಲು ಅದು ಪ್ರಯತ್ನಿಸುತ್ತಿದೆ.** ಜೆನ್‌ಯುನ ಈ ಘಟನೆ ಹೈದರಾಬಾದ್ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಆರೆಸ್ಸೆಸ್ ಮತ್ತು ಈ ಸರಕಾರದ ನಗ್ನ ರಾಜಕೀಯ ಹಸ್ತಕ್ಷೇಪದಿಂದಾಗಿ ಒಬ್ಬ ಪ್ರತಿಭಾನ್ವಿತ ದಲಿತ ವಿದ್ಯಾರ್ಥಿ ರೋಹಿತ್ ವೆಮುಲಾನ ದುರಂತಮಯ ಆತ್ಮಹತ್ಯೆಯ ಬೆನ್ನಹಿಂದೆಯೇ ನಡೆದಿದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಗಮನ ಸೆಳೆದಿದೆ.

ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯವನ್ನು ಹಿಂದುತ್ವ ಸರ್ವಾಧಿಕಾರಶಾಹಿ ದಾಳಿಗಳಿಂದ ರಕ್ಷಿಸಲು ಐಕ್ಯತೆಯಿಂದ ಹೋರಾಡಬೇಕು ಹಾಗೂ ದೇಶದಲ್ಲಿ ಪ್ರಜಾಪ್ರಭುತ್ವ ಹಕ್ಕುಗಳನ್ನು ಮತ್ತು ನ್ಯಾಯ ನೀಡಿಕೆ ವ್ಯವಸ್ಥೆಯನ್ನು ಕಿತ್ತು ಹಾಕುವ ಕೋಮುವಾದಿ ಶಕ್ತಿಗಳ ಪ್ರಯತ್ನಗಳನ್ನು ಒಟ್ಟಾಗಿ ವಿಫಲಗೊಳಿಸಬೇಕು ಎಂದು ಎಲ್ಲ ಪ್ರಜಾಪ್ರಭುತ್ವವಾದಿ ಹಾಗೂ ಜಾತ್ಯಾತೀತ ಶಕ್ತಿಗಳಿಗೆ ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ.

ಫೆ.15:ನ್ಯಾಯಾಲಯದಲ್ಲಿ ಕೇಸರಿ ಗೂಂಡಾಗಿರಿ

ಇದಕ್ಕೆ ಮೊದಲು ಫೆಬ್ರುವರಿ 15ರಂದು ಪಾಟಿಯಾಲಾ ಹೌಸ್ ನ್ಯಾಯಾಲಯದಲ್ಲಿ ರಾಜದ್ರೋಹದ ಆಪಾದನೆಯ ಮೇಲೆ ದಿಲ್ಲಿ ಪೋಲೀಸರು ಬಂಧಿಸಿದ್ದ ಜೆನ್‌ಯು ವಿದ್ಯಾರ್ಥಿಸಂಘದ ಅಧ್ಯಕ್ಷ ಕನ್ಹೈಯ್ಯಾ ಕುಮಾರ್ ಅವರನ್ನು ಹಾಜರು ಪಡಿಸುವ ಸಂದರ್ಭದಲ್ಲಿ ವಕೀಲರು ಜೆನ್‌ಯು ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಪತ್ರಕರ್ತರ ಮೇಲೆ ದಾಳಿ ಮಾಡಿ ಅವರನ್ನು ಕೋರ್ಟ್ ಆವರಣದಿಂದ ಹೊರಹಾಕಲು ಪ್ರಯತ್ನಿಸಿದ ಘಟನೆ ನಡೆದಿತ್ತು. ಇದರಲ್ಲಿ ಹಲವರು ಗಾಯಗೊಂಡಿದ್ದರು. ವಾಸ್ತವವಾಗಿ ದಾಳಿಕೋರರು ಕರಿಕೋಟು ಧರಿಸಿದ್ದ ಬಿಜೆಪಿ ಮಂದಿ ಎಂದು ಹೇಳಲಾಗಿದೆ. ಸ್ವತಃ ದಿಲ್ಲಿಯ ಬಿಜೆಪಿ ಎಂಎಲ್‌ಎ ಒ.ಪಿ.ಶರ್ಮ ನ್ಯಾಯಾಲಯದ ಆವರಣದಲ್ಲಿ ಸಿಪಿಐ ಸದಸ್ಯರೊಬ್ಬರ ಮೇಲೆ ಪೋಲೀಸ್ ಅಧಿಕಾರಿಯ ಎದುರೇ ಕೈಮಾಡಿದುದನ್ನು ಹಲವು ಪತ್ರಿಕೆಗಳ ಛಾಯಾಚಿತ್ರಕಾರರು ಸೆರೆಹಿಡಿದಿದ್ದಾರೆ.

ಇದೊಂದು ಆಘಾತಕಾರಿ ಘಟನೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ದೊಡ್ಡ ಸಂಖ್ಯೆಯಲ್ಲಿ ಪೋಲೀಸರನ್ನು ಅಲ್ಲಿ ಇಟ್ಟಿದ್ದರೂ ಅವರು ನಿಷ್ಕ್ರಿಯರಾಗಿದ್ದರು. ಇದನ್ನು ಕೂಡ ಖಂಡಿಸಿರುವ ಸಿಪಿಐ(ಎಂ) ಪೊಲಿಟ್‌ಬ್ಯರೊ ಈ ಕರ್ತವ್ಯಚ್ಯುತಿಯ ಬಗ್ಗೆ ಕೇಂದ್ರ ಗೃಹಮಂತ್ರಿ ಮತ್ತು ದಿಲ್ಲಿ ಪೊಲಿಸ್ ಕಮಿಶನರ್ ಉತ್ತರ ಕೊಡಬೇಕಾಗಿದೆ ಎಂದು ಸಿಪಿಐ(ಎಂ) ಆಗ್ರಹಿಸಿದೆ.

ನ್ಯಾಯಾಲಯದ ಆವರಣದಲ್ಲಿ ಹಿಂಸಾಚಾರ ಮತ್ತು ದಾಳಿಗೆ ಕಾರಣರಾದ ಎಲ್ಲರನ್ನೂ ತಕ್ಷಣ ಬಂಧಿಸಬೇಕು, ಜೆನ್‌ಯು ವಿದ್ಯಾರ್ಥಿಸಂಘದ ಅಧ್ಯಕ್ಷ ಕನ್ಹೈಯಾ ಕುಮಾರ್ ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಮತ್ತು ಆವರ ಮೇಲಿನ ಆಪಾದನೆಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

ಸಿಪಿಐ(ಎಂ) ಕೇಂದ್ರ ಕಚೇರಿ ಮೇಲೆ ಬಲಪಂಥೀಯ ಗೂಂಡಾಗಳ ದಾಳಿ

‘ಗಾಂಧೀಜಿಯವರ ಕೊಲೆಗಡುಕರ ಆರಾಧಕರಿಂದ ನಮಗೆ ದೇಶಪ್ರೇಮದ ಸರ್ಟಿಫಿಕೇಟ್ ಬೇಕಿಲ್ಲ’

–ಸಿಪಿಐ(ಎಂ) ಪೊಲಿಟ್‌ಬ್ಯರೊ

ಫೆಬ್ರುವರಿ 14 ರ ಸಂಜೆ 3.30ರ ವೇಳೆಗೆ ಕೆಲವು ಬಲಪಂಥೀಯ ಶಕ್ತಿಗಳಿಗೆ ವಿಧೇಯರಾಗಿರುವ ಕೆಲವು ಗೂಂಡಾಗಳು ಸಿಪಿಐ(ಎಂ)ನ ಕೇಂದ್ರ ಸಮಿತಿಯ ಕಚೇರಿಯ ಮೇಲೆ ದಾಳಿ ನಡೆಸಿದರು. ಕಚೇರಿಯ ನಾಮಫಲಕದ ಮೇಲೆ’ಪಾಕಿಸ್ತಾನಕ್ಕೆ ಹೋಗಿ’ ಎಂದು ಗೀಚಿದರು. ಕಚೇರಿಯನ್ನು ರಕ್ಷಿಸಲು ಧಾವಿಸಿದ ಸಂಗಾತಿಗಳು ದಾಳಿಕೋರರಲ್ಲಿ ಒಬ್ಬನನ್ನು ಹಿಡಿದು ಪೋಲೀಸರಿಗೆ ಒಪ್ಪಿಸಿದ್ದಾರೆ. ಇದೊಂದು ಹೇಡಿತನದ ದಾಳಿ ಎಂದು ಬಲವಾಗಿ ಖಂಡಿಸಿದ ಸಿಪಿಐ(ಎಂ) ಪೊಲಿಟ್‌ಬ್ಯುರೊ ದಿಲ್ಲಿ ಪೋಲೀಸರು ಈ ಘಟನೆಯ ಆಮೂಲಾಗ್ರ ತನಿಖೆ ನಡೆಸಿ ಅಪರಾಧಿಗಳು ಮತ್ತು ಅವರ ಗುರುಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

ಮಹಾತ್ಮ ಗಾಂಧಿಯವರ ಕೊಲೆ ಮಾಡಿದಾತನನ್ನು ‘ರಾಷ್ಟ್ರೀಯ ವೀರ’ ಎಂದು ಆರಾಧಿಸುವವರು ಸಿಪಿಐ(ಎಂನ್ನು ರಾಷ್ಟ್ರ–ವಿರೋಧಿ ಎಂದು ಹೇಳುವ ಭಂಡತನ ತೋರುತ್ತಿದ್ದಾರೆ. ಇಂತಹವರಿಂದ ನಮಗೇನೂ ದೇಶಪ್ರೇಮದ ಸರ್ಟಿಫಿಕೇಟ್ ಬೇಕಿಲ್ಲ. ಇದು ರಾಜಕೀಯ ದುರುದ್ದೇಶದಿಂದ ಕೂಡಿದ ದಾಳಿ. ಸಿಪಿಐ(ಎಂ) ಈ ಸವಾಲನ್ನು ರಆಜಕೀಯವಾಗಿ ಎದುರಿಸುತ್ತದೆ, ಮತ್ತು ಇಂತಹ ದಾಳಿಗಳಿಂದ ನಮ್ಮನ್ನು ರಕ್ಷಿಸಿಕೊಳ್ಳುತ್ತೇವೆ ಎಂದು ಪೊಲಿಟ್‌ಬ್ಯುರೋ ನೀಡಿರುವ ಹೇಳಿಕೆ ತಿಳಿಸಿದೆ.

ಇದು ಕೋಮುಧ್ರುವೀಕರಣವನ್ನು ತೀಕ್ಷ್ಣಗೊಳಿಸ ಬಯಸುವ ಕೋಮುವಾದಿ ಶಕ್ತಿಗಳ ಕೃತ್ಯ ಎಂಬದು ಸ್ವಯಂವೇದ್ಯ ಎಂದಿರುವ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಇದೀಗ ಅವರ ಬಳಿಯಿರುವ ಏಕೈಕ ಅಸ್ತ್ರ, ಬೇರೆಲ್ಲ ರಂಗಗಳಲ್ಲಿ ಮೋದಿ ಸರಕಾರದ ವಿಫಲತೆಯನ್ನು ಮುಚ್ಚಿಕೊಳ್ಳಲು ಇಂತಹ ಕೃತ್ಯಕ್ಕೆ ಅವರು ಇಳಿದಿದ್ದಾರೆ ಎಂದಿದ್ದಾರೆ. ಅವರ ಉದ್ದೇಶ ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತವನ್ನು ಒಣದು ಉನ್ನತ್ತ ಫ್ಯಾಸಿಸ್ಟ್ ಮಾದರಿಯ ಹಿಂದುರಾಷ್ಟ್ರವಾಗಿ ಪರಿವರ್ತಿಸಿರುವುದು ಎಂದು ಯೆಚುರಿಯವರು ಟೀಕಿಸಿದ್ದಾರೆ.

ಚಂಡೀಗಡದಲ್ಲೂ ದಾಳಿ

ಫೆಬ್ರುವರಿ 17ರಂದು ಚಂಡೀಗಡದಲ್ಲಿ ಸಿಪಿಐ(ಎಂ) ಪಂಜಾಬ್ ರಾಜ್ಯ ಸಮಿತಿಯ ಕಚೇರಿ ‘ಚೀಮಾ ಭವನ’ದ ಮೇಲೆ ಸುಮಾರು 70–80 ಕೇಸರಿ ಪಡೆಗಳ ಗೂಂಡಾಗಳು ಕಲ್ಲು ತೂರಾಟ ನಡೆಸಿದರು, ಸೀತಾರಾಂ ಯೆಚುರಿ, ಪಾಕಿಸ್ತಾನಿ ಏಜೆಂಟ್ ಎಂದು ಒದರಾಡಿದರು. ಇಲ್ಲಿಯೂ ಪೋಲೀಸರು ಮೂಕಪ್ರೇಕ್ಷಕರಾಗಿದ್ದರು.

ಹೆಚ್ಚಿನ ಪಕ್ಷದ ಮುಖಂಡರು ಆಗ ಬೇರೆ ಬೇರೆ ಸಭೆಗಳಲ್ಲಿ ಭಾಗವಹಸಿಲು ಹೋಗಿದ್ದರು. ಅವರೆಲ್ಲ ಹಿಂದಿರುಗುವಷ್ಟರಲ್ಲಿ ಈ ಹೇಡಿತನಕ್ಕಿಳಿದ ಸಂಘ ಪರಿವಾರದ ಗೂಂಡಾಗಳು ಓಡಿ ಹೋದರು.

ಸಿಪಿಐ ಮತ್ತು ಇತರ ಹಲವು ಪಕ್ಷಗಳ ಮುಖಂಡರು ಸ್ಥಳಕ್ಕೆ ಧಾವಿಸಿ ಇದು ಪ್ರಜಾಪ್ರಭುತ್ವದ ಮೇಲಿನ ದಾಳಿ , ತುರ್ತು ಪರಿಸ್ಥಿತಿಯಂತಹ ಸನ್ನಿವೇಶ ಉಂಟಾಗುತ್ತಿದೆ ಎಂದು ಖಂಡಿಸಿದ್ದಾರೆ.

aAiAvEAzAgE EzÀÄ

“ಅದೃಷ್ಟವಶಾತ್ ಅಧಿಕಾರಕ್ಕೆ ಬಂದವರು ತ್ರಿವರ್ಣಧ್ವಜವನ್ನು ಕೊಟ್ಟಿರಬಹುದು. ಆದರೆ ಅದನ್ನು ಹಿಂದುಗಳು ಎಂದೂ ಗೌರವಿಸುವುದಿಲ್ಲ. ತಮ್ಮದಾಗಿಸಿಕೊಳ್ಳುವುದಿಲ್ಲ. ಮೂರು ಎಂಬ ಶಬ್ದವೇ ಕೆಡುಕು. ಮೂರು ಬಣ್ಣ ಇರುವ ಧ್ವಜ ಖಂಡಿತ ತೀರಾ ಕೆಟ್ಟ ಮಾನಸಿಕ ಪರಿಣಾಮ ಬೀರುತ್ತದೆ ಮತ್ತು ದೇಶಕ್ಕೆ ಹಾನಿಕಾರಕ.”

– ಆರೆಸ್ಸೆಸ್‌ನ ಮುಖಪತ್ರಿಕೆ ಆರ್ಗನೈಸರ್ ಅಗಸ್ಟ್ 14, 1947ರ ಸಂಚಿಕೆಯಲ್ಲಿ ತ್ರಿವರ್ಣ ಧ್ವಜದ ಆಯ್ಕೆ ವಿರೋಧಿಸಿದ ಲೇಖನದಿಂದ



ಎಕೆಜಿ ಭವನ, ದಿಲ್ಲಿ


ಚೀಮಾ ಭವನ, ಚಂಡೀಗಡ

ಉಪ ಚುನಾವಣೆ:

ಕಾಂಗ್ರೆಸಿಗೆ ಎಚ್ಚರಿಕೆಯ ಗಂಟೆ!

– ಎಸ್.ವೈ. ಗುರುಶಾಂತ್

ಸಿದ್ಧರಾಮಯ್ಯನವರ ನೇತೃತ್ವದ ಕಾಂಗ್ರೆಸ್ ಸರಕಾರಕ್ಕೆ ಮೂರು ವರುಷಗಳು ತುಂಬಿದ್ದಾಯ್ತು. ಸರಕಾರವೇನೋ ಸಾವಿರ ದಿನಗಳಲ್ಲಿ ಸಾವಿರಾರು ಸಾಧನೆಗಳನ್ನು ಮಾಡಿದೆಯೆಂದು ಅದರ ಪ್ರಮುಖರು ಹೇಳಿಕೊಂಡು ಬೀಗಿದರೂ ವಾಸ್ತವದಲ್ಲಿ ಜನರ ನಡುವೆ ಅಂತಹ ಸಂತೃಪ್ತಿಯಂತೂ ಕಾಣ ಬರುತ್ತಿಲ್ಲ. ಕಳೆದ ಬಿಜೆಪಿಯ ಭ್ರಷ್ಟ, ಜನದ್ರೋಹಿ ಸರಕಾರದ ಅಡಿ ನಲುಗಿದ್ದ ಜನತೆ ಕಾಂಗ್ರೆಸ್‌ನಿಂದ ಅದರಲ್ಲೂ ಸಿದ್ಧರಾಮಯ್ಯನವರ ವೈಯುಕ್ತಿಕ ಪ್ರಭಾವ, ಅಹಿಂದ ಸೂತ್ರಗಳು ಮತ್ತು ಪರ್ಯಾಯದ ಹುಡುಕಾಟದಲ್ಲಿ ಒಂದಿಷ್ಟು ಅಭಿಮಾನ, ಆಶೆ, ಭರವಸೆಗಳನ್ನು ಹೊಂದಿದ್ದು ಸುಳ್ಳಲ್ಲ. ಆದರೆ ವರುಷಗಳು ಕಳೆದಂತೆ ಅದು ಕರಗುತ್ತಿದೆ. ಕೆಲವು ಸ್ಕೀಂಗಳ ಘೋಷಣೆ ಬಿಟ್ಟರೆ ಜನರ ಮೂಲಭೂತ ಪ್ರಶ್ನೆಗಳೇನೂ ಪರಿಹಾರ ಕಂಡಿಲ್ಲ. ಪಕ್ಷದೊಳಗಿನ ಗುಂಪುಗಾರಿಕೆ ಮತ್ತಷ್ಟೂ ಹೆಚ್ಚಾಗುತ್ತಾ ನಾಯಕರು, ಕಾರ್ಯಕರ್ತರ ಮನಸುಗಳು ಭಾರದಿಂದ ಬಳಲುತ್ತಿವೆ. ಇವೆಲ್ಲವುಗಳ ಮಾಪನವೋ ಎಂಬಂತೆ ಇತ್ತೀಚೆಗೆ ರಾಜ್ಯದಲ್ಲಿ ನಡೆದ ವಿಧಾನಸಭಾದ ಮೂರು ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯ ಫಲಿತಾಂಶಗಳು ನಿಚ್ಚಳ ನಿದರ್ಶನವನ್ನು ಒದಗಿಸುತ್ತವೆ.

ಕಾಂಗ್ರೆಸ್‌ಗೆ ಆತಂಕ

ನಿಜ, ಯಾವುದೇ ಉಪ ಚುನಾವಣೆಗಳು ಒಂದು ಸರಕಾರದ ಪೂರ್ಣ ಮೌಲ್ಯ ಮಾಪನದ ಪ್ರತೀಕವೇನಲ್ಲ ಎಂಬುದು ತಿಳಿದ ವಿಚಾರವೇ. ಆದರೆ ಇದು ಒಂದು ಮಟ್ಟಿನಲ್ಲಿ ಆಡಳಿತದ ಬಗೆಗೆ ಜನರ ಇಂಗಿತದ ಸೂಚನೆ, ಅಧಿಕಾರದಲ್ಲಿರುವ ಪಕ್ಷಕ್ಕೆ ಎಚ್ಚರಿಕೆಯ ಸಂಕೇತವೂ ಆಗಿದೆ. ಇದೇ 2016ರ ಫೆಬ್ರವರಿ 13 ರಂದು ನಡೆದ ಮೂರು ಕ್ಷೇತ್ರಗಳ ಫಲಿತಾಂಶ ಗಂಭೀರ ಅಂಶಗಳನ್ನು ಹೊಂದಿದೆ. ಹಾಲಿ ವಿಧಾನಸಭೆಯ ಮೂರು ಸದಸ್ಯರ ಅಕಾಲಿಕ ಮರಣದಿಂದ ಈ ಉಪ ಚುನಾವಣೆ ನಡೆದಿದೆ. ಬೀದರ್ ಉತ್ತರ ಕ್ಷೇತ್ರದಲ್ಲಿ ಬಿಜೆಪಿಯ ಗುರುಪಾದಪ್ಪ ನಾಗಮಾರಪಲ್ಲಿ ಸ್ಥಾನದಲ್ಲಿ ಈಗ ಕಾಂಗ್ರೆಸ್‌ನ ರಹೀಮ್ ಖಾನ್ 22,721 ಮತಗಳ ಅಂತರದಿಂದ, ಬೆಂಗಳೂರಿನ ಹೆಬ್ಬಾಳದಲ್ಲಿ ಹಿಂದೆ ಗೆದ್ದಿದ್ದ ಸ್ಥಾನದಲ್ಲಿ ಬಿಜೆಪಿಯ ವೈ.ಎ.ನಾರಾಯಣಸ್ವಾಮಿ, ದೇವದುರ್ಗದಲ್ಲಿ ಕಾಂಗ್ರೆಸ್‌ನ ವೆಂಕಟೇಶ್‌ನಾಯಕ್ ಬದಲಿಗೆ ಬಿಜೆಪಿಯ ಶಿವನಗೌಡ ಗೆದ್ದಾಗಿದೆ. ಹಿಂದಿನ ಒಟ್ಟು ಸ್ಥಾನಗಳನ್ನು ಪರಿಗಣಿಸಿದರೆ ಸಂಖ್ಯಾ ಬಲದಲ್ಲಿ ಅಂತಹ ವ್ಯತ್ಯಾಸವೇನೂ ಇಲ್ಲವಾದರೂ ದೇವದುರ್ಗದಲ್ಲಿ ಕಾಂಗ್ರೆಸ್ ಸೋತಿರುವುದು ಹಾಗೂ ಮತ್ತೇ ಬಿಜೆಪಿ ಶಕ್ತಿ ಕ್ರೋಢೀಕರಿಸಿಕೊಂಡಿರುವುದು, ಅಲ್ಲದೇ ಪ್ರತಿಷ್ಠೆಯ ಕಣವೆಂದೇ ಗಣಿಸಲ್ಪಟ್ಟಿದ್ದ, ಗೆಲುವಿನ ನಿರೀಕ್ಷೆ ಇರಿಸಿಕೊಳ್ಳಲಾಗಿದ್ದ ಹೆಬ್ಬಾಳದಲ್ಲಿ 19,149 ಮತಗಳ ಭಾರಿ ಅಂತರದಲ್ಲಿ ಸೋತಿರುವುದು ಕಾಂಗ್ರೆಸ್‌ಗೆ ಹಿನ್ನಡೆಯೇ ಆಗಿದೆ. ಹೀಗಾಗಿ ಬಿಜೆಪಿಯ ಸ್ಥಾನಗಳ ಸಂಖ್ಯೆ ಬದಲಾಗದಿದ್ದರೂ ಬೆಂಗಳೂರು ನಗರ ಮತ್ತು ಹೈದ್ರಾಬಾದ್–ಕರ್ನಾಟಕದಲ್ಲಿನ ಗೆಲುವು ಬಾಯಿ ಮಾತಿನಲ್ಲೇ ಹಾರಾಡುತ್ತಿರುವ ಅದಕ್ಕೆ ಮತ್ತಷ್ಟೂ ಶಂಖ ಊದಲು ಇಂಬು ಸಿಕ್ಕಂತಾಗಿದೆ. ತಾನೂ ಬಿಜೆಪಿ–ಕಾಂಗ್ರೆಸ್‌ಗೆ ಪರ್ಯಾಯ ಪ್ರಾದೇಶಿಕ ಶಕ್ತಿ ಎಂದು ಹೇಳಿಕೊಳ್ಳುತ್ತಿದ್ದ ಜಾತ್ಯಾತೀತ ಜನತಾದಳ ಈ ಮೂರೂ ಕ್ಷೇತ್ರಗಳಲ್ಲಿ ಠೇವಣಿಯನ್ನು ಕಳೆದುಕೊಂಡು ತೀವ್ರ ಮುಖಭಂಗಕ್ಕೀಡಾಗಿದೆ.

ಕಾಂಗ್ರೆಸ್‌ನಲ್ಲಿ ಹೆಚ್ಚಾದ ಒಳ ಜಗಳ, ಸಂಕಷ್ಟ

ಯಥಾ ಸಂಖ್ಯಾಸ್ಥಾನಗಳನ್ನು ಕಾಂಗ್ರೆಸ್ ಹೊಂದಿದ್ದರೂ ನಿಜಕ್ಕೂ ಈ ಫಲಿತಾಂಶದ ನಕಾರಾತ್ಮ ಪರಿಣಾಮ ಬಿದ್ದಿರುವುದು ಅದರ ಮೇಲೆಯೇ. ಇತ್ತೀಚೆಗೆ ನಡೆದ ವಿಧಾನ ಪರಿಷತ್‌ನ ಫಲಿತಾಂಶದಲ್ಲಿ ಕಂಡ ಕೊಂಚ ಚೇತರಿಕೆಯ ಹವಾವನ್ನು ಕಾಯ್ದುಕೊಳ್ಳುವ ಸವಾಲು ಸಿದ್ಧರಾಮಯ್ಯನವರಿಗೆ ಇತ್ತು. ಕೆಪಿಸಿಸಿ ಅಧ್ಯಕ್ಷರಾದ ಡಾ.ಜಿ.ಪರಮೇಶ್ವರ್‌ರವರು ಗೃಹ ಮಂತ್ರಿಗಳಾದರಲ್ಲದೇ, ಬೆಂಗಳೂರಿನ ಉಸ್ತುವಾರಿಯನ್ನು ಜಾರ್ಜ್‌ರವರಿಗೆ ನೀಡಿ ಎಲ್ಲವನ್ನೂ ಸರಿಪಡಿಸಿ ಅಭಿವೃದ್ಧಿ ಸಾಧಿಸುವ ಆಶೆಯನ್ನು ಬಿತ್ತಲಾಗಿತ್ತು. ಹಾಗೇ ಇತ್ತೀಚೆಗೆ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ನಡೆಸಿ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಸೆಳೆದು ಲಕ್ಷಾಂತರ ಉದ್ಯೋಗಗಳನ್ನು ಸೃಷ್ಟಿಸುವ ನಿರೀಕ್ಷೆಗಳನ್ನು ಹುಟ್ಟಿಸಲಾಗಿತ್ತು. ಆದರೆ ಉಪಚುನಾವಣೆಗಳಲ್ಲಿ ಇವೆಲ್ಲಾ ಸಿದ್ಧರಾಮಯ್ಯನವರ ಬೆಂಬಲಕ್ಕೆ ಬರಲಿಲ್ಲ. ವಿಶೇಷವಾಗಿ ಹೆಬ್ಬಾಳದಲ್ಲಿ ಕಾಂಗ್ರೆಸ್ ಅಭ್ಯರ್ಥಿಯ ಆಯ್ಕೆ ಮತ್ತು ಅದರ ಒಟ್ಟು ಪ್ರಕ್ರಿಯೆಯೇ ಕಾಂಗ್ರೆಸ್‌ನೊಳಗೆ ಮತ್ತು ಹೊರಗೆ ವಿಪರೀತ ರಂಪವಾಗಿ ಮಾರ್ಪಟ್ಟಿದ್ದು, ಹಿರಿಯ ಕಾಂಗ್ರೆಸ್ ಮುಖಂಡ ಜಾಫರ್ ಷರೀಫ್‌ರ ಮೊಮ್ಮಗ ಅಬ್ದುಲ್ ರಹಮಾನ್ ಷರೀಫ್ ರಿಗೆ ಟಿಕೇಟ್ ಕೊಟ್ಟಿದ್ದು ಭಿನ್ನಮತ ವಿಸ್ತರಣೆಗೊಳ್ಳಲು ಬಳಕೆಯಾಗಿ ಅದು ಚುನಾವಣೆಯಲ್ಲಿ ಪರಿಣಾಮ ಬೀರಲೂ ಕಾರಣವಾಯಿತು.

ಒಂದರ್ಥದಲ್ಲಿ ಹಿಂದೆ ಗಳಿಸಿದ್ದ ಮತಗಳಿಗಿಂತ ಕಡಿಮೆ ಪಡೆದು ಷರೀಫ್ ಸೋಲುಂಡಿದ್ದು ಹೈಕಮಾಂಡ್‌ನ ಸೋಲು ಎಂದೇ ವ್ಯಾಖ್ಯಾನಿಸಲಾಗುತ್ತಿದೆ. ಕಾರಣ ಸಿದ್ಧರಾಮಯ್ಯನವರು ತಮ್ಮ ಬೆಂಬಲಿಗ ಬೈರತಿ ಸುರೇಶನಿಗೆ ಟಿಕೇಟ್ ಕೊಡಿಸಬೇಕೆಂದು ಪಟ್ಟು ಹಿಡಿದಿದ್ದರೆ, ಇದಕ್ಕೆ ಎದುರಾಗಿ ಮಲ್ಲಿಕಾರ್ಜುನ ಖರ್ಗೆ, ಎಸ್.ಎಂ.ಕೃಷ್ಣ ಮತ್ತವರ ಗುಂಪು (ಮೂಲ ಕಾಂಗ್ರೆಸ್ಸಿಗರು?) ಸಿದ್ಧುಗೆ ಗುದ್ದು ಕೊಡಲೆಂದೇ ಭೈರತಿಗೆ ನಿರಾಕರಿಸಿ ಟಿಕೇಟ್ ಷರೀಫ್‌ಗೆ ಕೊಡಿಸಲು ಮುಂದಾದದ್ದು. ಹೀಗಾಗಿಯೇ ವ್ಯವಹಾರಗಳು ಸಲೀಸಾಗಿದ್ದರೂ, ಸಿದ್ದುಗೆ ಝರ್ಕ್ ಕೊಡಬೇಕೆಂದಿರುವ ಹೈಕಮಾಂಡ್‌ಗೂ ಇದು ಒಂದು ಗುದ್ದು. ಎಲ್ಲಾ ನಾಯಕರೂ ಓಡಾಡಿದರೂ, ಬಿಜೆಪಿಯಂತೆಯೇ ಹಣ ಸುರಿದರೂ ಅದು ಪರಿಣಾಮವಾಗಲಿಲ್ಲ. ಜೆಡಿ ಎಸ್ ಸಹ ಮುಸ್ಲಿಂ ಅಲ್ಪಸಂಖ್ಯಾತ ಅಭ್ಯರ್ಥಿಯನ್ನು ಈ ಬಾರಿಯೂ ನಿಲ್ಲಿಸಿ ನಡೆದಿರುವ ಆಟದಲ್ಲಿ ತನ್ನದೂ ಒಂದು ಕೈಚಳಕ ತೋರಿತ್ತು. ಕಾಂಗ್ರೆಸ್ ಪಕ್ಷದೊಳಗಿದ್ದ ಸ್ಥಿತಿಯನ್ನು ಬಿಜೆಪಿ ಬಳಸಿಕೊಂಡಿತಲ್ಲದೇ, ಅಲ್ಲಿ ಮತಗಳ ಮತೀಯ ಕ್ರೋಢಿಕರಣ ತರುವಲ್ಲಿ ಯಶಸ್ವಿಯಾಯಿತು ಎಂಬ ಅಂಶ ಗಮನಿಸಬೇಕಾದುದು. ಇದಕ್ಕೆ ಸಹಾಯಕವಾದುದು ಕೇಂದ್ರದಲ್ಲಿನ ಅಧಿಕಾರ ಮತ್ತು ಯಾರೂ ಸರಿಗಟ್ಟಲಾಗದಷ್ಟು ಅಪಾರ ಹಣ. ಹೆಬ್ಬಾಳದ ಸೋಲಿನ ಫಲಿತಾಂಶದಲ್ಲಿ ಮುಖ್ಯವಾಗಿ ಮೂಲ ಮತ್ತು ವಲಸಿಗ ಕಾಂಗ್ರೆಸ್ಸಿಗರು ಎಂಬ ಕಿತ್ತಾಟದ ಪರಿಣಾಮ ಇಲ್ಲಿ ನಿಚ್ಚಳ.

ಭ್ರಮನಿರಸನ

ಈ ಮೇಲ್ಕಾಣುವ ಕೆಲ ಅಂಶಗಳ ಜೊತೆಯಲ್ಲಿ ಕಾಂಗ್ರೆಸ್ ನ ಮೇಲೆ ಜನರಿಗಿರುವ ನಿರೀಕ್ಷೆಗಳು, ವಿಶ್ವಾಸ ಕುಸಿಯುತ್ತಿದ್ದು ಜನರು ಭ್ರಮನಿರಸನ ಗೊಳ್ಳುತ್ತಿದ್ದಾರೆ ಎಂಬುದುನ್ನು ಗಮನಿಸಬೇಕು. ಆತ್ಮಾವಲೋಕನ ಮಾಡಿಕೊಳ್ಳುವುದಾಗಿ ಹೇಳುವ ಕಾಂಗ್ರೆಸ್ ಇದರತ್ತ ಹೊರಳುವುದೂ ಇಲ್ಲ. ಕಾಂಗ್ರೆಸ್‌ನ ಆರ್ಥಿಕ, ಆಡಳಿತಾತ್ಮಕ ನೀತಿಗಳು ಹಿಂದಿನ ಸರಕಾರಗಳಿಗಿಂತ ಭಿನ್ನವಾಗಿಲ್ಲ. ಭೀಕರ ಬರ, ಬೆಲೆ ಏರಿಕೆ, ಜೀವನ ಅಭದ್ರತೆ ಮುಂತಾದ ವಿಷಯಗಳಲ್ಲಿ ಪರಿಹಾರ ನೀಡುವಲ್ಲಿ ವಿಫಲವಾಗಿದೆ. ದುಡಿಯುವ ಜನರು ಚಳುವಳಿಗಿಳಿದರೆ ದಮನಿಸುವ ಛಾತಿ ತೋರಿದೆ. ಜ್ವಲಂತ ಬೇಡಿಕೆಗಳನ್ನು ಈಡೇರಿಸುವಲ್ಲಿ ನಿರ್ಲಕ್ಷ ವಹಿಸಿದೆ. ಮಂತ್ರಿ ಮಂಡಲದಲ್ಲಿ ಬಹಳಷ್ಟು ಸಚಿವರು ಭ್ರಷ್ಟಾಚಾರ, ಅದಕ್ಷತೆಯ ಹಲವಾರು ಆರೋಪಗಳನ್ನು ಎದುರಿಸುತ್ತಿದ್ದಾರೆ. ಈ ಸಮಯದಲ್ಲೇ ಕಾರ್ಮಿಕ ಸಚಿವ ಪರಮೇಶ್ವರ ನಾಯಕ್ ಪೋಲೀಸ್ ಅಧಿಕಾರಿ ಅನುಪಮ ಶೆಣೈ ವರ್ಗಾವಣೆ ವಿವಾದದಲ್ಲಿ ಗಬ್ಬೆದ್ದು ಹೋಗಿದ್ದೂ ಆಯ್ತು. ಮುಖ್ಯವಾಗಿ ಬಿಜೆಪಿ ತನ್ನ ಪಾತಕಗಳನ್ನು ತೊಳೆದುಕೊಳ್ಳಲು, ಅವುಗಳನ್ನು ಮರೆ ಮಾಚಲು ಹಲವಾರು ಕೃತ್ಯಗಳನ್ನು ಮಾಡಿದರೂ, ಕೋಮು ವಿಭಜನೆ ತರಲು ಸತತ ಧಾಳಿಗಳನ್ನು ನಡೆಸುತ್ತಿದ್ದರೂ ಅದನ್ನು ರಾಜಕೀಯವಾಗಿ, ಆಡಳಿತಾತ್ಮಕವಾಗಿ ಎದುರಿಸಲು ಕಾಂಗ್ರೆಸ್ ಹೆಚ್ಚಿನ ಪ್ರಯತ್ನಗಳನ್ನೇ ಮಾಡುತ್ತಿಲ್ಲ. ಈ ನಡುವೆಯೇ ಬೇರೆ ವಿಷಯಗಳ ಬದಲಿಗೆ ' ಗಿಫ್ಟ್ ವಾಚ್' ನ ವಿಷಯ ಎತ್ತಿ ಅಗಾಧ ಹಗರಣದ ಅನುಮಾನಗಳನ್ನು ಬಿತ್ತಿದ ಜೆಡಿ ಎಸ್‌ನ ಕುಮಾರಸ್ವಾಮಿ ತೋಡಿದ ಖೆಡ್ಡಾಕ್ಕೆ ಸಿದ್ದರಾಮಯ್ಯನವರು ಬಿದ್ದಿದ್ದೂ ಆಯ್ತು, ಅದೇ ಚುನಾವಣೆಯ ವಿಷಯವಾಯಿತು! ಸೋಲಿಗೆ ಕಾರಣವಾಗಿರುವ ಕೆಲ ಅಂಶಗಳಿವು.

ಈ ಉಪ ಚುನಾವಣೆ ಜಿಲ್ಲಾ ಹಾಗೂ ತಾಲೂಕು ಪಂಚಾಯ್ತಿ ಚುನಾವಣೆಗಳ ನಡುವೆ ನಡೆದಿರುವುದು ಮತ್ತು ಅದರಲ್ಲೂ ಇನ್ನೊಂದು ಸುತ್ತಿನ ಮತದಾನ ಬಾಕಿಯಿರುವಾಗ ಗಂಭೀರ ಪರಿಣಾಮ ಬೀರದೇ ಎಂಬ ಚಿಂತೆ ಕಾಂಗ್ರೆಸ್ಸಿಗಿದೆ. ಈ ಚುನಾವಣೆಯಲ್ಲಿ ರಾಜ್ಯ ಸರಕಾರದ ಪ್ರಬಾವ ಮತ್ತು ಸ್ಥಳೀಯ ಅಂಶಗಳೇ ಮುನ್ನೆಲೆಯಲ್ಲಿ ಬರಲಿವೆಯೆಂಬ ನಂಬಿಕೆಯ ಹುಲ್ಲುಕಡ್ಡಿಯೇ ಅದಕ್ಕೆ ಊರುಗೋಲು!

ಅಪಾಯ ತಪ್ಪಿಲ್ಲ

ಇದು ಕಾಂಗ್ರೆಸ್ಸಿಗೂ, ಜಾತ್ಯಾತೀತ ಶಕ್ತಿಗಳಿಗೂ ಎಚ್ಚರಿಕೆಯ ಗಂಟೆ! ಫ್ಯಾಶಿಸ್ಟ್ ಮಾದರಿಯ ಕೋಮುವಾದಿ ಸಂಘಪರಿವಾರ ಮತ್ತು ರಾಜಕೀಯವಾಗಿ ಬಿಜೆಪಿಯು ಮತ್ತೇ ಬಲ ಕ್ರೋಢೀಕರಿಸಿಕೊಂಡು ಅಧಿಕಾರದ ಗದ್ದುಗೆಯತ್ತ ಧಾವಿಸಲು ಹೊರಟಿದೆ. ಇದನ್ನು ಸೋಲಿಸಲೇ ಬೇಕು. ಕೇಂದ್ರ ಮತ್ತು ರಾಜ್ಯ ಸರಕಾರಗಳ ಜನವಿರೋಧಿ ನೀತಿಗಳಿಂದ ರಾಜ್ಯದಲ್ಲಿ ಬೆಳೆಯುತ್ತಿರುವ ಅತೃಪ್ತಿಯನ್ನು ಪರಿಣಾಮಕಾರಿಯಾಗಿ ಬಳಸಲು ಚಾಣಾಕ್ಷತನದಿಂದ ತೊಡಗಿದೆ. ಹೀಗಿರುವಾಗ ಬಿಜೆಪಿಯತ್ತ ಬೆಳೆವ ಜನರ ನಿರೀಕ್ಷೆಗಳು, ರಾಜಕಾರಣದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿಗಳೇ ಪರ್ಯಾಯಗಳು ಎಂಬ ಕ್ರೋಢಿಕರಣ ಪರಿಹಾರವಲ್ಲ, ಅದು ಅಪಾಯಕಾರಿ.

ಈಗಲೂ ಇದೆ ಒಂದು ಅವಕಾಶ

ನೀತಿಗಳಲ್ಲಿ ಒಂದು ಖಚಿತತೆ ಇಲ್ಲದೇ ಸಂದರ್ಭ ಸಾಧಕತನದಲ್ಲೇ ರಾಜಕೀಯ ಮುನ್ನಡೆ ಸಾಧ್ಯ ಎಂದೇ ವಾಸ್ತವಿಕವಾಗಿ ನಂಬಿ ನಡೆದಿರುವ ಜೆಡಿ ಎಸ್ ನ್ನೂ ಕೂಡ ಜನ ಪರ್ಯಾಯವೆಂದು ಪರಿಗಣಿಸುತ್ತಿಲ್ಲ. ಬಿಜೆಪಿಯೊಂದಿಗೆ ಅದು ಸರಕಾರ ರಚಿಸಿ ಹೊರ ಬಂದ ಬಳಿಕ ಜನ ನೀಡಿದ ರಾಜ್ಯವ್ಯಾಪಿ ಬೆಳೆಯುವ ಅವಕಾಶಗಳನ್ನು ನಿರಾಕರಿಸಿ ಕೇವಲ 'ಕಿಂಗ್ ಮೇಕರ್' ತಂತ್ರದಲ್ಲಿ ತೇಲಾಟ–ಮೇಲಾಟದ ರಾಜಕಾರಣಕ್ಕೇ ಸೀಮಿತಗೊಂಡಿದೆ. ಜನರ ಮೂಲಪ್ರಶ್ನೆಗಳಿಗೆ ಗಮನವೇ ಇಲ್ಲ. ಈಗಲೂ ಪರ್ಯಾಯ 'ಹಂಬಲ'ದ ಈ ಪ್ರಾದೇಶಿಕ ಪಕ್ಷ ಠೇವಣಿ ಕಳೆದುಕೊಂಡಿದ್ದರೂ ಎಳ್ಳಷ್ಟೂ ಚಿಂತಿತವಾಗಿಲ್ಲ. ಈಗಲೂ ಅವರಿವರ 'ಕಡತ' ಬಹಿರಂಗ ಪಡಿಸುವ, ವ್ಯಕ್ತಿ ನಿಂದನೆಗಳ 'ಹಾವಿನಾಟ'ದಲ್ಲಿ ತೊಡಗಿದೆ.

ಇದು ಸ್ಥಿತಿ! ಈ ಸಂದರ್ಭದಲ್ಲಿ ನಿಜ ಪರ್ಯಾಯವಿರುವ ಎಡ ಶಕ್ತಿಗಳ ಮೇಲೆ ಹೊಣೆ ಹೆಚ್ಚು. ಅದಕ್ಕಾಗಿ ಮುಂದಿನ ಹಂತದ ಜಿಲ್ಲಾ–ತಾಲೂಕು ಪಂಚಾಯತ್ ಚುನಾವಣೆಗಳಲ್ಲಿ ಗೆಲುವು ನೀಡಿ ಜನ ಹೆಚ್ಚಿನ ಬಲ ತುಂಬಲಿ. ಇರುವ ಅವಕಾಶವನ್ನು ಜನ ಪರಿಣಾಮಕಾರಿಯಾಗಿ ಬಳಸಲಿ.

ಫೆ. 23–25 ಅಖಿಲ ಭಾರತ ಪ್ರತಿಭಟನೆಗೆ ಎಡಪಕ್ಷಗಳ ಕರೆ

'ಜನತೆಯ ಸಂವಿಧಾನಿಕ ಹಕ್ಕುಗಳ ರಕ್ಷಿಸಿ'

ಫೆ. 19ರಂದು ಸಭೆ ಸೇರಿದ ಆರು ಎಡಪಕ್ಷಗಳ ನಾಯಕರು ಫೆ. 23–25 ರಂದು ಜನತೆಯ ಸಂವಿಧಾನಿಕ ಹಕ್ಕುಗಳನ್ನು ರಕ್ಷಿಸಲು ಅಖಿಲ ಭಾರತ ಪ್ರತಿಭಟನೆಗೆ ಕರೆ ನೀಡಿದ್ದಾರೆ. ಸಭೆಯ ನಂತರ ಕೊಟ್ಟ ಜಂಟಿ ಹೇಳಿಕೆ ಎಡ ಮತ್ತು ಪ್ರಗತಿಪರ ಶಕ್ತಿಗಳ ಮೇಲೆ ಆರೆಸ್ಸೆಸ್–ಬಿಜೆಪಿ ಆರಂಭಿಸಿರುವ ದಾಳಿಯನ್ನು ಖಂಡಿಸುತ್ತ, ಇದು 'ದೇಶ–ವಿರೋಧಿ' ಎಂಬ ಹುಸಿ ಆಪಾದನೆಯ ಆಧಾರದ ಮೇಲೆ ಭಾರತದ ಜನತೆಯ ಸಂವಿಧಾನಿಕ ಹಕ್ಕುಗಳ ಮೇಲೆ ದಾಳಿ ಎಂಬುದು ಸ್ಪಷ್ಟ ಎಂದಿದೆ.

ಜೆ.ಎನ್.ಯು. ಮೇಲೆ ದಾಳಿಯನ್ನು ಖಂಡಿಸುತ್ತಾ, ಆರೆಸ್ಸೆಸ್ ಬಿಜೆಪಿ–ಎನ್.ಡಿ.ಎ. ಸರಕಾರದ ಬೆಂಬಲದಿಂದ ನಡೆಸುತ್ತಿರುವ ಈ ದಾಳಿ, ಉಚ್ಚ ಶಿಕ್ಷಣದ ಸಂಸ್ಥೆಗಳಲ್ಲಿ ಕೋಮುವಾದಿ ಶಕ್ತಿಗಳ ವಿಶಾಲ ಹುನ್ನಾರದ ಭಾಗ. ಈ ವ್ಯವಸ್ಥಿತ ದಾಳಿಯ ವಿನ್ಯಾಸವನ್ನು ಎಫ್.ಟಿ.ಐ.ಐ., ಐ.ಐ.ಟಿ.–ಚೆನ್ನೈ, ರೋಹಿತ್ ವೆಮುಲಾ ಆತ್ಮಹತ್ಯೆಗೆ ಕಾರಣವಾದ ಹೈದರಾಬಾದ್ ಕೇಂ.ವಿ.ವಿ., ಈಗ ಜಾಧವಪುರ ವಿ.ವಿ.ಗಳ ವಿದ್ಯಮಾನಗಳಲ್ಲಿ ಕಾಣಬಹುದು ಎಂದಿದೆ ಎಡಪಕ್ಷಗಳ ಹೇಳಿಕೆ.

ಆರೆಸ್ಸೆಸ್–ಬಿಜೆಪಿ ಭಾರತದ ಜನತೆಯ ಸಂವಿಧಾನಿಕ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ದಾಳಿ ನಡೆಸುತ್ತಿದ್ದು, ಜನತೆಯಲ್ಲಿ ಕೋಮುವಾದಿ ಧ್ರುವೀಕರಣ ತಂದಿಟ್ಟು ಜನರ ಗಮನವನ್ನು ಮೋದಿ ಸರಕಾರದ ವೈಫಲ್ಯಗಳು ಮತ್ತು ಅದು ಹೊರಿಸುತ್ತಿರುವ ಆರ್ಥಿಕ ಹೊರೆಗಳಿಂದ ಬೇರೆಡೆಗೆ ಸೆಳೆಯುವುದೇ ಆಗಿದೆ.

ಜೆ.ಎನ್.ಯು. ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯ್ಯ ಕುಮಾರ್ ಅವರನ್ನು ಬಿಡುಗಡೆ ಮಾಡಬೇಕು ಮತ್ತು ಎಲ್ಲಾ ವಿದ್ಯಾರ್ಥಿಗಳ ವಿರುದ್ಧ ದೇಶದ್ರೋಹದ ಕೇಸುಗಳನ್ನು ವಾಪಸು ತೆಗೆದುಕೊಳ್ಳಬೇಕು. ವಿದ್ಯಾರ್ಥಿಗಳ ವಿರುದ್ಧ ಯಾವುದೇ ರೀತಿಯ ದ್ವೇಷ ಸಾಧನೆ ಮಾಡಬಾರದು. ಎಲ್ಲಾ ಕೇಸುಗಳು ಸುಳ್ಳು ಹಾಗೂ ಸೃಷ್ಟಿಸಿದ ಪುರಾವೆಗಳ ಮೇಲೆ ಆಧಾರಿತವಾಗಿದ್ದು, ಇವುಗಳಲ್ಲಿ ತೊಡಗಿದವರ ಮತ್ತು ಅದನ್ನು ಪ್ರಚಾರ ಮಾಡಿದವರನ್ನು ಕಾನೂನು ಪ್ರಕಾರ ಶಿಕ್ಷಿಸಬೇಕು ಎಂದು ಹೇಳಿಕೆ ಆಗ್ರಹಿಸಿದೆ.

ಕೋರ್ಟುಗಳಲ್ಲಿ ಹಿಂಸಾಚಾರ ಸೇರಿದಂತೆ ಜನರ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲೆ ಎಲ್ಲಾ ದಾಳಿಗಳನ್ನು ಬಯಲು ಮಾಡಲು, ಫೆ. 23–25 ವರೆಗೆ ಜನತೆಯ ಸಂವಿಧಾನಿಕ ಹಕ್ಕುಗಳನ್ನು ರಕ್ಷಿಸಲು ಪ್ರಚಾರಾಂದೋಲನ ಮತ್ತು ಅಖಿಲ ಭಾರತ ಪ್ರತಿಭಟನೆಗೆ ಹೇಳಿಕೆಯಲ್ಲಿ ಕರೆ ನೀಡಲಾಗಿದೆ. ಸೆಕ್ಯುಲರ್, ಪ್ರಜಾಸತ್ತಾತ್ಮಕ ಮತ್ತು ಪ್ರಗತಿಪರ ಶಕ್ತಿಗಳು ಈ ಪ್ರತಿಭಟನೆಯಲ್ಲಿ ಭಾಗವಹಿಸಬೇಕೆಂದು ಎಡ ಪಕ್ಷಗಳು ಕರೆಕೊಟ್ಟಿವೆ.

ಸಿಪಿಐ(ಎಂ), ಸಿಪಿಐ, ಆರ್.ಎಸ್.ಪಿ., ಫಾರ್ವರ್ಡ್ ಬ್ಲಾಕ್, ಎಸ್.ಯು.ಸಿ.ಐ.(ಸಿ) ಮತ್ತುಸಿಪಿಐ(ಎಂ.ಎಲ್.)–ಲಿಬರೇಶನ್ – ಹೇಳಿಕೆ ಕೊಟ್ಟಿರುವ ಆರು ಎಡ ಪಕ್ಷಗಳು

ಕಾರ್ಮಿಕ ಲೋಕ

●ಕೆ. ಮಹಾಂತೇಶ್

ಬೀಡಿ ಕಾರ್ಮಿಕರಿಗೆ ತುಟ್ಟಿ ಭತ್ಯೆ ಜಾರಿಗೆ ಆಗ್ರಹ :

ಬೀಡಿ ಕಾರ್ಮಿಕರಿಗೆ ಕಾನೂನುಬದ್ಧವಾಗಿ ಪಾವತಿಸಿಬೇಕಾಗಿದ್ದ ತುಟ್ಟಿಭತ್ಯೆಯನ್ನು ಪಾವತಿ ಮಾಡಬೇಕಾಗಿಲ್ಲ ಎಂದು ಕಾರ್ಮಿಕ ಮಂತ್ರಿಗಳ ಮುತುವರ್ಜಿಯಲ್ಲಿ ಅಧಿಸೂಚನೆಯನ್ನು ಹೊರಡಿಸಲಾಗಿದೆ. 2014 ವರ್ಷದ ಗ್ರಾಹಕರ ಬೆಲೆ ಸೂಚ್ಯಂಕವು 425 ಪಾಯಿಂಟ್ಸ್ ಹೆಚ್ಚಳವಾಗಿದೆ. (ಬೆಲೆ ಏರಿಕೆ ಲೆಕ್ಕದ ಪ್ರಕಾರ ಸರಕಾರದ ಪ್ರಕಟಣೆ) ಅದ್ದರಿಂದ ಬೀಡಿ ಕಾರ್ಮಿಕರಿಗೆ ದಿನಕ್ಕೆ 0.03 ಪೈಸೆಯಂತೆ 425 ಪಾಯಿಂಟ್ಸ್‌ಗೆ ದಿನಕ್ಕೆ ರೂ 14.71 ಪೈಸೆ ಹೆಚ್ಚುವರಿಯಾಗಿ ಪಾವತಿ ಮಾಡಬೇಕಾಗಿದೆ. ಅದರಂತೆ ತಿಂಗಳಿಗೆ ರೂ.382.50 ಪೈಸೆ ಪಾವತಿಸಬೇಕಾಗಿದೆ. ಆದರೆ ಕಾರ್ಮಿಕ ಮಂತ್ರಿಗಳು ಬೀಡಿ ಮಾಲೀಕರೊಂದಿಗೆ ಶಾಮಿಲಾಗಿ ಸದರಿ ತುಟ್ಟಿಭತ್ಯೆಯನ್ನು ಪಾವತಿಸಬೇಕಾಗಿಲ್ಲ ಎಂದು ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಈ ಅಧಿಸೂಚನೆಯನ್ನು ಕಾರ್ಮಿಕ ಸಂಘಗಳ ಅಭಿಪ್ರಾಯವನ್ನು ಪಡೆಯದೆ ಏಕಪಕ್ಷೀಯವಾಗಿ ಮಾಲೀಕರ ಮನವಿಯಂತೆ ಮಾಡಲಾಗಿದೆ. ರಾಜ್ಯದಲ್ಲಿ 23 ಜಿಲ್ಲೆಗಳಲ್ಲಿ 10 ಲಕ್ಷ ಬೀಡಿ ಕಾರ್ಮಿಕರು ದುಡಿಯುತ್ತಿದ್ದೂ, ಬಡ ಕಾರ್ಮಿಕರ ಬಾಯಿಗೆ ಮಣ್ಣು ಹಾಕಿ ಬಡಾ ಬೀಡಿ ಮಾಲೀಕರಿಗೆ ಅನುಕೂಲ ಮಾಡಿದ್ದಾರೆ. ಸುಮಾರು 350 ಕೋಟಿಗಿಂತಲೂ ಅಧಿಕವಾದ ಈ ಪ್ರಕರಣದಲ್ಲಿ ಭಾರಿ ಕೋಟಿಗಳ ಭ್ರಷ್ಟಾಚಾರ ನಡೆದಿದೆ. ಕಾರ್ಮಿಕ ಸಚಿವರು ಭ್ರಷ್ಟಾಚಾರಕ್ಕೆ ಬಲಿಯಾಗಿ ಬಡ ಬೀಡಿ ಕಾರ್ಮಿಕರಿಗೆ ಅನ್ಯಾಯ ಮಾಡಿದ್ದಾರೆಂಬುದು ಸ್ಪಷ್ಟವಾಗುತ್ತದೆ. ಇದಲ್ಲದೆ ಲಕ್ಷಾಂತರ ಸಂಖ್ಯೆಯಲ್ಲಿರುವ ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ ಕಲ್ಪಿಸಿಯೇ ಕೊಪ್ಪಾ ಕಾನೂನು ಜಾರಿಗೆ ಮುಂದಾಗಬೇಕಿದೆ.

ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಕೆಗೆ ಆಗ್ರಹ

ಕಳೆದ ಒಂದು ತಿಂಗಳಿಂದ ಹೋರಾಟ ನಿರತರಾಗಿರುವ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅತಿಥಿ ಉಪನ್ಯಾಸಕರ ವೇತನ ಭತ್ಯೆ, ಸೇವಾ ಭದ್ರತೆ ಮತ್ತು ಕಾಯಂಮಾತಿ ಪ್ರಶ್ನೆಗಳು ಕುರಿತು ಸರಕಾರ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಲು ಮುಂದಾಗಬೇಕು ಎಂದು ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಕರ್ನಾಟಕ ರಾಜ್ಯ ಸಮಿತಿ ಆಗ್ರಹಿಸಿದೆ.

ಪ್ರತಿವರ್ಷವೂ ಉನ್ನತ ಶಿಕ್ಷಣ ಪಡೆದಿದ್ದರೂ ಅತಿಥಿ ಉಪನ್ಯಾಸಕರೆಂಬ ಹಣೆ ಪಟ್ಟಿಯನ್ನು ಹಚ್ಚಿಕೊಂಡು ಭವಿಷ್ಯದ ಯುವಜನರಿಗೆ ಶಿಕ್ಷಣ ನೀಡಲು ಶ್ರಮಿಸುತ್ತಿರುವ ಇವರಿಗೆ ಆದರೆ ನಿಗದಿತ ಅವಧಿಯಲ್ಲಿ ವೇತನ, ರಜಾ ಸೌಲಭ್ಯ ಹಾಗೂ ಸೇವಾ ಭದ್ರತೆ ನೀಡದೇ ದುಡಿಸಲಾಗುತ್ತಿದೆ. ಹೀಗೆ ಪ್ರತಿ ವರ್ಷ ಅತಂತ್ರರಾಗಿ ಬದುಕು ಸಾಗಿಸುತ್ತಿರುವ ಅತಿಥಿ ಉಪನ್ಯಾಸಕರ ಈ ಸ್ಥಿತಿಗೆ ಸರಕಾರ ಹಾಗೂ ಉನ್ನತ ಶಿಕ್ಷಣ ಇಲಾಖೆ ಅನುಸರಿಸುತ್ತಿರುವ ನೀತಿಗಳೇ ಕಾರಣ. ಈ ಬಗ್ಗೆ ಉಪನ್ಯಾಸಕರು ಮುಂದಿಟ್ಟಿರುವ ನ್ಯಾಯಬದ್ಧ ಬೇಡಿಕೆಗಳಾದ ಸಮಾನ ಕೆಲಸಕ್ಕೆ ಸಮಾನವೇತನ, ವಿಶೇಷ ನಿಯಮಾವಳಿಗಳ ಮೂಲಕ ಕಾಯಂಮಾತಿಯಂತಹ ಪ್ರಶ್ನೆಗಳನ್ನು ಬಗೆಹರಿಸಲು ಸಾಧ್ಯವಿದ್ದರೂ ಸರಕಾರ ತನ್ನ ಇಚ್ಛಾ ಶಕ್ತಿಯನ್ನು ಪ್ರದರ್ಶಿಸದೆ ತನ್ನ ಜವಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಅಲ್ಲದೆ ಇದೀಗ ಹೋರಾಟ ನಿರತ ಉಪನ್ಯಾಸಕರನ್ನು ಕೆಲಸದಿಂದ ತೆಗೆದು ಹಾಕುವಂತಹ ಕ್ರಮಕ್ಕೆ ಮುಂದಾಗಿರುವುದು ತೀವ್ರ ಖಂಡನೀಯ. ಇಂತಹ ಕ್ರಮದಿಂದ ಉನ್ನತ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿ ಸಮುದಾಯ ಹಾಗೂ ಅದಕ್ಕೆ ಶ್ರಮಿಸುತ್ತಿರುವ ಅಧ್ಯಾಪಕ ಸಮೂಹ ಹಾಗೂ ಶಿಕ್ಷಣ ವ್ಯವಸ್ಥೆ ಮೇಲೆ ಗಂಭೀರ ಪರಿಣಾಮ ಬೀರುತ್ತದೆ. ಆದ್ದರಿಂದ ಸರಕಾರ ಹೋರಾಟ ನಿರತ ಕರ್ನಾಟಕ ರಾಜ್ಯ ಪ್ರಥಮ ದರ್ಜೆ ಸರಕಾರಿ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘದ ಪದಾಧಿಕಾರಿಗಳೊಂದಿಗೆ ಕೂಡಲೇ ಮಾತುಕತೆ ನಡೆಸಿ ಸಮಸ್ಯೆ ಇತ್ಯರ್ಥ–ಕ್ಕೆ ಸರಕಾರ ಮುಂದಾಗಬೇಕು ಎಂದು ಸಿಐಟಿಯು ಆಗ್ರಹಿಸಿದೆ.

108 ಅಂಬ್ಯೂಲೆನ್ಸ್ ನೌಕರರ ಹೋರಾಟಕ್ಕೆ ಬೆಂಬಲ



ರಾಜ್ಯ ಸರಕಾರದ ಆರೋಗ್ಯ ಇಲಾಖೆಯು ಹೈದ್ರಾಬಾದ್ ಮೂಲದ ಜಿವಿಕೆ ಕಂಪನಿ ಮೂಲಕ 108 ತುರ್ತು ಸೇವೆ ಸಲ್ಲಿಸುತ್ತಿರುವ ನೌಕರರು ಕಳೆದ ತಿಂಗಳ 24 ರಿಂದ ಮುಷ್ಕರ ನಿರತರಾಗಿದ್ದಾರೆ. ಜಿವಿಕೆ ಸಂಸ್ಥೆಯು ನೌಕರರಿಗೆ ನೀಡಬೇಕಾದ ಹೆಚ್ಚುವರಿ ಕೆಲಸದ ಭತ್ಯೆಯನ್ನು ಕೂಡಲೇ ನೌಕರರ ಖಾತೆಗೆ ವರ್ಗಾಯಿಸಬೇಕು, ನೀಡಲಾಗುತ್ತಿರುವ ವೇತನ ಹೆಚ್ಚಳ ಮಾಡಬೇಕು ಮತ್ತು ವಜಾ ಮಾಡಿರುವ ಎಲ್ಲಾ ನೌಕರರನ್ನು ಮರುನೇಮಕ ಮಾಡಿಕೊಳ್ಳಬೇಕು. ರಜಾ ಸೌಲಭ್ಯ ನೀಡಬೇಕು ಎಂಬುದು ಮುಷ್ಕರ ನಿರತರ ಪ್ರಮುಖ ಬೇಡಿಕೆಯಾಗಿದೆ. ಆದರೆ ರಾಜ್ಯ ಸರಕಾರದಿಂದ ಹಣ ಪಡೆದುಕೊಂಡಿರುವ ಜಿವಿಕೆ ಕಂಪನಿಯು ಅದನ್ನು ನೌಕರರಿಗೆ ನೀಡದೇ ಮೋಸ ಮಾಡಿದೆ. ಮಾತ್ರವಲ್ಲ ಕಾನೂನು ಬಾಹಿರ ಮುಚ್ಚಳಿಕೆಯನ್ನು ನೌಕರರಿಂದ ಬರೆಸಿಕೊಂಡು ಸಹಾ ಹೆಚ್ಚುವರಿ ಭತ್ಯೆಯನ್ನು ನೀಡಿಲ್ಲ. ಈ ಬಗ್ಗೆ ಹಲವಾರು ಬಾರಿ ನೌಕರರು ಮನವಿ ಸಲ್ಲಿಸಿದ್ದಾಗ್ಯೂ ಸರಕಾರ ಹಾಗೂ ಸಂಸ್ಥೆಯು ಕ್ರಮವಹಿಸದೇ ಇದುದರಿಂದ ಅನಿವಾರ್ಯವಾಗಿ ನೌಕರರು ಹೋರಾಟದ ಹಾದಿ ತುಳಿದಿದ್ದಾರೆ. ಆದರೆ ಸಮಸ್ಯೆ ಬಗೆಹರಿಸಬೇಕಾದ ಕಂಪನಿಯು ಪ್ರಮುಖ 153 ನೌಕರರರನ್ನು ಕೆಲಸದಿಂದ ವಜಾಗೊಳಿಸುವ ನೌಕರರ ವಿರೋಧಿ ಕ್ರಮ ಕೈಗೊಂಡಿದೆ. ಸಂಸ್ಥೆಯಲ್ಲಿ ಪೈಲಟ್ಸ್‌ಗಳು ಹಾಗೂ ಸ್ಟಾಫ್ ನರ್ಸಗಳ ಮೇಲಾಗುತ್ತಿರುವ ಕಿರುಕುಳ, ಕಾರ್ಮಿಕ ಕಾನೂನುಗಳ ಉಲ್ಲಂಘನೆಗಳ ಬಗ್ಗೆ ಆರೋಗ್ಯ ಇಲಾಖೆ ನನಗೂ ಇದಕ್ಕೂ ಸಂಬಂಧವಿಲ್ಲದಂತೆ ಕಣ್ಣು ಮುಚ್ಚಿಕೂತಿದೆ. ಸಾಲದೆಂಬಂತೆ ಮುಷ್ಕರ ನಿರತರ ಮೇಲೆ 'ಎಸ್ಮಾ' ಕಾನೂನನ್ನು ಪ್ರಯೋಗಿಸುವ ಬೆದರಿಕೆ ಹಾಕುತ್ತಾ ನೌಕರರ ಬಲವನ್ನು ಕುಂದಿಸಲು ಪ್ರಯತ್ನಿಸಿದೆ. ಆದರೂ ನೌಕರರು ಒಗ್ಗಟ್ಟಿನಿಂದ ತಮ್ಮ ಹೋರಾಟವನ್ನು ಮುಂದುವರೆಸುತ್ತಿರುವುದು ಅಭಿನಂದನಾರ್ಹ ಸಂಗತಿ. ಆದ್ದರಿಂದ ಸರಕಾರ ಹಾಗೂ ಜಿವಿಕೆ ಕಂಪನಿಯು ಹೋರಾಟ ನಿರತರ ಮೇಲೆ ಬೆದರಿಕೆ ಒಡ್ಡುವ ಕ್ರಮವನ್ನು ಕೈಬಿಟ್ಟು ಕೂಡಲೇ ಮುಷ್ಕರ ನಿರತರ ಜೊತೆ ಮಾತುಕತೆ ನಡೆಸಿ ಸಮಸ್ಯೆ ಬಗೆಹರಿಸಲು ಮುಂದಾಗಬೇಕೆಂದು ಸಿಐಟಿಯು ಆಗ್ರಹಿಸಿದೆ

ಹೋರಾಟ ನಿರತ ಸ್ಥಳಕ್ಕೆ ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್, ರಾಜ್ಯ ಉಪಾಧ್ಯಕ್ಷರಾದ ಎಸ್. ವೀರಸ್ವಾಮಿ, ರಾಜ್ಯ ಕಾರ್ಯದರ್ಶಿಗಳಾದ ಕೆ. ಎನ್. ಉಮೇಶ ಹಾಗೂ ಕೆ. ಮಹಾಂತೇಶ ಭೇಟಿ ನೀಡಿ ಬೆಂಬಲಿಸಿ ಮಾತನಾಡಿದರು.

ಈ ವಾರ ಚರಿತ್ರೆಯಲ್ಲಿ

ಫೆಬ್ರುವರಿ 18, 1745

ಫ್ರೆಂಚ್ ವಿಜ್ಞಾನಿ ಅಲೆಸಾಂಡ್ರೊ ವೋಲ್ಟಾ



ವಿದ್ಯುತ್ತನ್ನು ರಾಸಾಯನಿಕವಾಗಿ ತಯಾರಿಸ ಬಹುದೆಂಬ ಪ್ರಮುಖ ಸಂಶೋಧನೆ ಮಾಡಿದ ಇಟಾಲಿಯನ್ ವಿಜ್ಞಾನಿ. ವಿದ್ಯುತ್ ಬ್ಯಾಟರಿ ಮತ್ತು ಮೀಥೇನ್ ಎಂಬ ರಾಸಾಯನಿಕದ ಆವಿಷ್ಕಾರ ಮಾಡಿದ ವೋಲ್ಟಾ ಇಲೆಕ್ಟ್ರೋಕೆಮಿಸ್ಟ್ರಿ (ವಿದ್ಯುತ್ ರಸಾಯನ ಶಾಸ್ತ್ರ) ಎಂಬ ವಿಜ್ಞಾನದ ವಿಭಾಗವನ್ನೇ ಆರಂಭಿಸಿದ. ಆತ ಪಾವಿಯ ವಿಶ್ವವಿದ್ಯಾಲಯದಲ್ಲಿ ಪ್ರಾಯೋಗಿಕ ಭೌತಶಾಸ್ತ್ರದ ಮುಖ್ಯಸ್ಥನಾಗಿದ್ದ. ಆತನ ಗೌರವಾರ್ಥ ವಿದ್ಯುತ್ ಸಾಮರ್ಥ್ಯವನ್ನು ಅಳತೆ ಮಾಡುವ ಮಾನಕಕ್ಕೆ ಆತನ ಹೆಸರು ('ವೋಲ್ಟ್') ಇಡಲಾಗಿದೆ.

ಕನಿಷ್ಟ ವೇತನ ಅಧಿಸೂಚನೆಗೆ ಆಗ್ರಹ

ಇತ್ತೀಚಿಗೆ ತ್ರಿಪಕ್ಷೀಯವಾಗಿರುವ ಪ್ರಾತಿನಿಧ್ಯ ಹೊಂದಿರುವ ಅಂದರೆ, ಸರಕಾರ– ಮಾಲೀಕರು ಮತ್ತು ಕಾರ್ಮಿಕರ ಪ್ರತಿನಿಧಿಗಳನ್ನು ಒಳಗೊಂಡಿರುವ ಕನಿಷ್ಟ ವೇತನ ಸಲಹಾ ಮಂಡಳಿ ಪ್ರತಿ ತಿಂಗಳಿಗೆ ರೂ.10,010/– ವಲಯ 1ರಲ್ಲಿ ನಿಗದಿ ಮಾಡಿ ಶಿಫಾರಸ್ಸು ಮಾಡಿರುವುದನ್ನು ಸಾಮಾನ್ಯ ಪ್ರಕ್ರಿಯೆಯಲ್ಲಿ 8 ಉದ್ಯೋಗಗಳ ಕಾರ್ಮಿಕರಿಗೆ ಸಂಭಂದಿಸಿದಂತೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ನಂತರದಲ್ಲಿ ಸುಮಾರು 24 ಉದ್ಯೋಗಳಿಗೆ ಕನಿಷ್ಟ ವೇತನವನ್ನು ಪರಿಷ್ಕರಿಸಿ ಕರಡು ಪ್ರಕಟಿಸಲಾಗಿದೆ. ಆದರೆ ಕೈಗಾರಿಕಾ ಮಾಲೀಕರ ಒತ್ತಡಕ್ಕೆ ಸರಕಾರ ಮಣಿದು ಅದನ್ನು ಅಧಿಸೂಚನೆಯಾಗಿ ಪ್ರಕಟಿಸಿಲ್ಲ ಇಂದಿನ ದುಬಾರಿ ಬೆಲೆ ಏರಿಕೆಯ ದಿನಗಳಲ್ಲಿ ಕಾರ್ಮಿಕರಿಗೆ ಅನ್ಯಾಯ ಮಾಡಲಾಗಿದೆ. ಈ ಹಿಂದೆ ಕಾರ್ಮಿಕ ಚಳುವಳಿ ಮೂಲಕ ಕನಿಷ್ಟ ವೇತನ ಪರಿಷ್ಕರಣೆಗಾಗಿ ಸಮಿತಿಯನ್ನು ರಚಿಸಿದ್ದರೂ ಮಂತ್ರಿಗಳ ನಿರಾಸಕ್ತಿಯಿಂದಾಗಿ ಯಾವುದೇ ಪ್ರಗತಿ ಆಗಿರುವುದಿಲ್ಲ. 2015 ರ ಬೆಲೆ ಏರಿಕೆಗೆ ಅನುಸಾರವಾಗಿ ಸದ್ಯ ದೇಶದಾದ್ಯಂತ ಎಲ್ಲಾ ಕಾರ್ಮಿಕರಿಗೆ ಕನಿಷ್ಟ ವೇತನ ರೂ.15000/– ನಿಗದಿ ಪಡಿಸಬೇಕು ಎಂಬುದು ಕಾರ್ಮಿಕ ಚಳವಳಿ ಆಗ್ರಹವಾಗಿದೆ. ಇದೀಗ ಕೇಂದ್ರ ಸರಕಾರದ ಏಳನೇ ವೇತನ ಆಯೋಗ ನೀಡಿರುವ ಶಿಫಾರಸ್ಸು ಅನ್ವಯವೇ ಕನಿಷ್ಟ ವೇತನ 18.000 ನಿಗದಿಪಡಿಸಬೇಕು. ಹೀಗಿರುವಾಗ ಕನಿಷ್ಟ ವೇತನ ಸಲಹಾ ಮಂಡಳಿ ಮಾಡಿರುವ ಶಿಫಾರಸ್ಸನ್ನು ತಡೆಹಿಡಿಯುತ್ತಿರುವ ಕ್ರಮ ಸರಿಯಲ್ಲ ಎಂಬುದು ಸಿಐಟಿಯು ಅಭಿಪ್ರಾಯವಾಗಿದೆ.

ಮೇಲ್ಕಂಡ ಬೇಡಿಕೆಗಳ ಜೊತೆ ಗುತ್ತಿಗೆ ಕಾರ್ಮಿಕ ಪದ್ಧತಿ ರದ್ದು ಮತ್ತು ಸಮಾನ ಕೆಲಸಕ್ಕೆ ಸಮಾನವೇತನ, ಗ್ರಾಮ ಪಂಚಾಯತಿ ನೌಕರರಿಗೆ ಅನುಮೋದನೆ ಮತ್ತು ಕಾಯಂಯಾತಿ, ತೋಟ ಕಾರ್ಮಿಕರ ಸಮಸ್ಯೆಗಳು, ಸ್ಕೀಂ ನೌಕರರರನ್ನು ಶಡ್ಯೂಲ್ ಪಟ್ಟಿಗೆ ಸೇರಿಸಿ ಕನಿಷ್ಟವೇತನ ನಿಗದಿ ಮಾಡುವುದು ಮತ್ತು ಅಸಂಘಟಿತ ಕಾರ್ಮಿಕರಿಗೆ ಸರಕಾರವೇ ಭವಿಷ್ಯನಿಧಿ ಜಾರಿ ಮಾಡುವುದು ಸೇರಿದಂತೆ ಇತರೆ ಬೇಡಿಕೆಗಳಿಗಾಗಿ ಮಾರ್ಚ 11 ರಂದು ಬೃಹತ್ ವಿಧಾನ ಸೌಧ ಚಲೋ ನಡೆಸಲು ಸಿಐಟಿಯು ರಾಜ್ಯ ಸಮಿತಿ ತೀರ್ಮಾನಿಸಿದೆ.

ದೆಹಲಿ ಪೊಲೀಸ್ ಆಯುಕ್ತ ಬಿಎಸ್ ಬಸ್ಸಿಯವರಿಗೆ (ನಿವೃತ್ತರಾದ ಮೇಲೆ) ಯಾಕೆ ಮಾಹಿತಿ ಹಕ್ಕು ಅಧಿಕಾರಿ ಮಾಡ್ತಾರೆ ಗೊತ್ತಾಯ್ತಾ? ಜಶೋದಾಬೆನ್ ಮತ್ತೆ ಅರ್ಜಿ ಹಾಕಿದ್ದಾರೆ ಮಾಹಿತಿ ಹಕ್ಕಿನಲ್ಲಿ! ಅದಕ್ಕೆ ತನ್ನೆದುರೇ ನಡೆದ ಘಟನೆಯಾದರೂ "ದ್ವೇಷಪ್ರೇಮಿ"ಗಳ ಹಿಡಿಯದೇ ಕನ್ಯಯ್ಯರನ್ನು ಇನ್ನಿತರೇ ವಿದ್ಯಾರ್ಥಿ ಮುಖಂಡರನ್ನು ಬಂಧಿಸಲು ಆದೇಶಿಸಿದ್ದು, ಸಂಘಪರಿವಾರದ ಗಲಾಟೆ ಕೋರರಿಗೆ ರಕ್ಷಣೆ ನೀಡಿದ್ದು, ಬಿಜೆಪಿ ಶಾಸಕ ಒಪಿ ಶರ್ಮ ಮೊನ್ನೆ ದೆಹಲಿಯಲ್ಲಿ ವಿದ್ಯಾರ್ಥಿಗಳ ಥಳಿಸಿದರೂ ಅವರನ್ನು ರಕ್ಷಿಸಿದ್ದು, ಕೋರ್ಟ ಆವರಣದಲ್ಲಿ ನ್ಯಾಯ ವ್ಯವಸ್ಥೆಯ ಮರ್ಯಾದೆ ಭಂಗ ಮಾಡಿದ ಆರೋಪಿ ವಕೀಲರನ್ನು ಹಿಡಿಯದಿರುವುದು, ಹೀಗೆ ರಕ್ಷಣಾತ್ಮಕ ಆಟ ಆಡಿದ ಬಸ್ಸಿಯವರು ಈಗ ಮಾನ್ಯ ಪ್ರಧಾನಿ ಮೋದಿಯವರನ್ನು ಅವರ ಹೆಂಡತಿಯು ಕೋರಿದ ಮಾಹಿತಿ ಹಕ್ಕಿನಿಂದ ಬಚಾವ್ ಮಾಡಬೇಕಲ್ಲ ಅದಕ್ಕೆ ಅದಕ್ಕೋಸ್ಕರ, ಅದಕ್ಕಾಗಿಯೇ ಈ ಆಲೋಚನೆ.. ಅಷ್ಟೂ ಋಣ ತೀರಿಸಿಲ್ಲವೆಂದರೆ ಹೇಗೆ? ಈಗ ಬಸ್ಸಿಯವರಿಗೂ ಒಳ್ಳೆ ಹುದ್ದೆ, ಸಹಾಯ ಮಾಡಬೇಡವೇ?

– ಯಮುನಾ ಗಾಂವ್ಕರ್



ಬೆಂಗಳೂರು

ಸಿಪಿಐ(ಎಂ) ಕೇಂದ್ರ ಕಛೇರಿ ಮೇಲಿನ ಹೇಯ ದಾಳಿ ಖಂಡಿಸಿ

ರಾಜ್ಯದ ವಿವಿಧೆಡೆ ಪ್ರತಿಭಟನೆ



ಸಿಪಿಐ(ಎಂ) ಕೇಂದ್ರ ಕಛೇರಿಯ ಮೇಲೆ ದಾಳಿ ನಡೆಸಿರುವ, ಕೋರ್ಟ್ ಆವರಣದಲ್ಲಿ ಪತ್ರಕರ್ತರು, ವಿದ್ಯಾರ್ಥಿಗಳ ಮೇಲೆ ದಾಳಿ ನಡೆಸಿರುವ, ಸಿಪಿಐ(ಎಂ) ರಾಷ್ಟ್ರೀಯ ಕಾರ್ಯದರ್ಶಿ ಸೀತಾರಾಮ್ ಯೆಚುರಿಗೆ ಬೆದರಿಕೆ ಕರೆಗಳನ್ನು ಮಾಡಿರುವ ಗೂಡಾಂಗಳನ್ನು ಬಂಧಿಸುವಂತೆ ಮತ್ತು ಈ ರೀತಿಯ ಕೃತ್ಯಗಳಿಗೆ ಬೆಂಬಲ ನೀಡುತ್ತಿರುವ ಬಿಜೆಪಿಯ ವರ್ತನೆಯನ್ನು ಖಂಡಿಸಿ ಸಿಪಿಐ(ಎಂ) ಪಕ್ಷದ ವತಿಯಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಪ್ರತಿಭಟನೆಗಳು ನಡೆದಿದೆ.

ತುಮಕೂರು ನಗರದ ಬಿಎಸ್‌ಎನ್‌ಎಲ್ ಕಛೇರಿ ಎದುರು ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಿ. ಉಮೇಶ್ ಕೇಂದ್ರದಲ್ಲಿ ಆಡಳಿತಕ್ಕೆ ಬಂದು ಒಂದುವರೆ ವರ್ಷಗಳೂ ಕಳೆದರೂ ಸಹ ದೇಶದ ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುವಲ್ಲಿ ವಿಫಲವಾಗಿರುವ ನರೇಂದ್ರ ಮೋದಿ ಸರ್ಕಾರ ದೇಶದಲ್ಲಿನ ಭ್ರಷ್ಟಾಚಾರವನ್ನು ತಡೆಯಲು ಸರ್ಕಾರದ ಕೈಯಲ್ಲಿ ಸಾಧ್ಯವಾಗಿಲ್ಲ. ದೇಶಭಿಮಾನದ ಬಗ್ಗೆ ಪಾಠ ಮಾಡುವ ಜನ ದೇಶದ ಗಡಿಕಾಯುವ ಯೋಧರಿಗೆ ಬೇಕಾದ ಅಗತ್ಯ ಸಲಕರಣೆಗಳನ್ನು ನೀಡಲು ಸಾಧ್ಯವಾಗಿಲ್ಲ, ಅವರ ಸಾವುಗಳನ್ನು ತಡೆಯಲು ಬೇಕಾದ ಕ್ರಮಗಳನ್ನು ಕೈಗೊಳ್ಳಲು ವಿಫಲವಾಗಿದೆ. ಪಾರ್ಲಿಮೆಂಟಿನ ಒಳಗೆ ಮತ್ತು ಹೊರಗೆ ನಿರಂತರವಾಗಿ ಚಳುವಳಿ ನಡೆಸುತ್ತಿರುವ ಸಿಪಿಐ(ಎಂ) ಪಕ್ಷದ ಕಛೇರಿ ಮೇಲೆ ದಾಳಿ ನಡೆಸಲಾಗುತ್ತಿದೆ ಈ ರೀತಿಯ ಗೊಡ್ಡು ಬೆದರಿಕೆಗಳಿಗೆ ಸಿಪಿಐ(ಎಂ) ಹೆದರುವುದಿಲ್ಲ ಎಂದರು.

ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯರಾದ ಸೈಯದ್‌ಮುಜೀಬ್, ಜಿಲ್ಲಾ ಕಾರ್ಯದರ್ಶಿ ಎನ್. ಕೆ.ಸುಬ್ರಮಣ್ಯ ಮಾತನಾಡಿದರು. ಪ್ರತಿಭಟನೆಯಲ್ಲಿ ಸಿಪಿಐ(ಎಂ) ಪಕ್ಷದ ಸಿ.ಅಜ್ಜಪ್ಪ, ಇ. ಶಿವಣ್ಣ, ಜಿ. ದರ್ಶನ್, ರಾಮಚಂದ್ರು, ಶ್ರೀಧರ್, ಮಂಜುನಾಥ್, ಪುಟ್ಟೇಗೌಡ, ಮಂಜುನಾಥ್, ಮುತ್ತುರಾಜ್, ನಾರಾಯಣಸ್ವಾಮಿ, ನಗರ ಕಾರ್ಯದರ್ಶಿ ರಾಘವೇಂದ್ರ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.

ಬೆಂಗಳೂರಿನಲ್ಲಿ ಸಿಪಿಐ(ಎಂ) ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಮಿತಿಗಳು ಪ್ರತಿಭಟನೆ ಸಂಘಟಿಸಿದ್ದವು. ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ವಿಜೆಕೆ ನಾಯರ್, ಎಸ್. ವರಲಕ್ಷ್ಮೀ, ಬೆಂ.ಉತ್ತರ ಜಿಲ್ಲಾ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಬೆಂ. ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆ.ಎನ್.ಉಮೇಶ್ ಸೇರಿದಂತೆ ಹೆಚ್.ಎನ್.ಗೋಪಾಲಗೌಡ, ಗೌರಮ್ಮ, ಲೀಲಾವತಿ, ಗೋಪಾಲಕೃಷ್ಣ, ಚಂದ್ರಪ್ಪ ಹೊಸ್ಕೆರಾ, ಪ್ರತಾಪ್ ಸಿಂಹ, ವಿ. ಕೋದಂಡರಾಮ್ ಮುಂತಾದ ಮುಖಂಡರು ಭಾಗವಹಿಸಿದ್ದರು.

ಫೆ. 19: ಬಿಸಿಯೂಟ ಕಾರ್ಮಿಕರ ವಿಧಾನಸೌಧ ಚಲೋ

ಮೂರು ವರ್ಷಕೊಮ್ಮೆ ಸಂಘಟಿತ ಹಾಗೂ ಅಸಂಘಟಿತ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೌಕರರಿಗೆ ಬೆಲೆ ಏರಿಕೆ ಆಧಾರದಲ್ಲಿ ಕನಿಷ್ಟ ಕೂಲಿ ಹಾಗೂ ಇತರ ಸವಲತ್ತುಗಳು ಹೆಚ್ಚಾಗುತ್ತದೆ. ಆದರೆ ಬಿಸಿಯೂಟ ನೌಕರರಿಗೆ ವೇತನ ಹೆಚ್ಚಳ ಮಾಡುತ್ತಿಲ್ಲ.

ಕಳೆದ ಏಳು ವರ್ಷಗಳಿಂದ ವೇತನ ಹೆಚ್ಚಳ ಮಾಡದ ಕೇಂದ್ರ ಸರ್ಕಾರದ ಕ್ರಮ ಖಂಡಿಸಿ, ಕನಿಷ್ಠ ಕೂಲಿ ಜಾರಿಗಾಗಿ, ಕೆಲಸದ ಖಾಯಮಾತಿಗಾಗಿ, ದಲಿತ ಮಹಿಳೆಯರಿಂದ ಅಡುಗೆ ಮಾಡಸದೇ ಇರುವುದನ್ನು ಖಂಡಿಸಿ, ಲೈಂಗಿಕ ಕಿರುಕುಳ, ಹಾಜರಾತಿ ಆಧಾರದಲ್ಲಿ ಕೆಲಸದಿಂದ ಕೈಬಿಡುವ ಕ್ರಮ ಖಂಡಿಸಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ ಸಾವಿರಾರು ಬಿಸಿಯೂಟ ನೌಕರರು ಫೆಬ್ರವರಿ 19ರಂದು ಬೆಂಗಳೂರಿನಲ್ಲಿ 'ವಿಧಾನಸೌಧ ಚಲೋ' ಪ್ರತಿಭಟನೆ ನಡೆಸಿ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು.

ಬಿಸಿಯೂಟ ಯೋಜನೆಯಡಿಯಲ್ಲಿ 14 ವರ್ಷಗಳಿಂದ ರಾಜ್ಯದಲ್ಲಿ ಒಂದು ಲಕ್ಷ 19 ಸಾವಿರ ಮಹಿಳೆಯರು ಶಿಕ್ಷಣ ಇಲಾಖೆಯಲ್ಲಿ ದುಡಿಯುತ್ತಿದ್ದಾರೆ. ಪ್ರತಿದಿನ ಬೆಳಿಗ್ಗೆ 9.30 ರಿಂದ 3.30ರವರೆಗೆ ಶಾಲೆಯಲ್ಲಿ ಅಡುಗೆ ಮಾಡುವುದರೆ ಜೊತೆಗೆ ಇತರ ಕೆಲಸಗಳನ್ನು ನಿರ್ವಹಿಸುತ್ತಾರೆ.

ಸರ್ಕಾರದ ರಾಷ್ಟ್ರೀಯ ಹಬ್ಬಗಳು, ಗ್ರಾಮದಲ್ಲಿ ನಡೆಯುವ ಸಭೆ–ಸಮಾರಂಭ, ಬೇಸಿಗೆ ರಜೆ, ದಸರಾ ರಜೆ ಅಲ್ಲದೆ ಚುನಾವಣಾ ಸಮಯದಲ್ಲಿ ಮತದಾನ ದಿನ ಮತ್ತು ಅದರ ಹಿಂದಿನ ದಿನ ಬಿಸಿಯೂಟ ನೌಕಕರಿಂದ ಅಡುಗ ಮಾಡಿಸಿಕೊಳ್ಳುತ್ತಾರೆ ಮತ್ತು ರಾತ್ರಿಹೊತ್ತ ಸಹ ಅಲ್ಲಿಯೇ ಉಳಿದುಕೊಳ್ಳುತ್ತಾರೆ. ಈ ರೀತಿ ಹೆಚ್ಚುವರಿ ಕೆಲಸ ಮಾಡಿಸಿಕೊಂಡರೂ ಸಹ ಹೆಚ್ಚುವರಿ ವೇತನ ನೀಡುವುದಿಲ್ಲ. ಕಳೆದ ಏಳು ವರ್ಷಗಳಿಂದ ವೇತನ ಏರಿಕೆ ಮಾಡಿಲಿಲ್ಲ. ಜೊತೆಗೆ ಕೆಲಸದ ಭದ್ರತೆಯೂ ಇಲ್ಲ.

ಶಾಲೆಗಳ ವಿಲೀನದಿಂದ ಮತ್ತು ಕಡಿಮೆ ಹಾಜರಾತಿಯಿಂದ ನೂರಾರು ಬಿಸಿಯೂಟ ನೌಕರರು ಕೆಲಸ ಕಳೆದುಕೊಳ್ಳುತ್ತಿದ್ದಾರೆ. ಬೇರೆ ರಾಜ್ಯಗಳಲ್ಲಿ 25 ವಿದ್ಯಾರ್ಥಿಗಳಿಗೆ ಒಬ್ಬರು ಅಡುಗೆಯವರು 25 ರಿಂದ 50 ವಿದ್ಯಾರ್ಥಿಗಳಿಗೆ ಇಬ್ಬರು ಅಡುಗೆಯವರು ಇದ್ದುದನ್ನು ತೆಗೆದು 25 ರಿಂದ 100 ಜನರಿಗೆ ಇಬ್ಬರು ಮಾತ್ರ ಆಡುಗೆಯವರು ಇರಬೇಕೆಂದು ಆದೇಶಿಸಲಾಗಿದೆ. 500ರೂ. ಸಂಭಾವನೆ ಹೆಚ್ಚಿಸುವ ನೆಪದಲ್ಲಿ ಅಡುಗೆಯವರಿಗೆ ಮೀಸಲಾತಿ ಆಧಾರದಲ್ಲಿ ಕೆಲಸದಿಂದ ತೆಗೆದು ಅವರಿಗೆ ಕೊಡುವ ಸಂಬಳವನ್ನು ಉಳಿದವರಿಗೆ ಹೆಚ್ಚಿಸಲಾಗಿದೆ.

ತ್ರೀಪಕ್ಷೀಯ ಸಮಿತಿಯಾದ 45ನೇ ಐಎಲ್‌ಸಿ (ಭಾರತೀಯ ಕಾರ್ಮಿಕ ಸಮ್ಮೇಳನ) ಸ್ಕೀಂಗಳಲ್ಲಿ ಕೆಲಸ ಮಾಡುವವರನ್ನು ಉದ್ಯೋಗಿಗಳೆಂದು, ಕನಿಷ್ಠ ಕೂಲಿ ಹೆಚ್ಚಿಸಬೇಕೆಂದು, ಸಾಮಾಜಿಕ ಭದ್ರತೆ ಕೊಡಬೇಕೆಂದು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದರೂ ಸಹ ಬಿಸಿಯೂಟ ನೌಕರರನ್ನು ಖಾಯಂ ಮಾಡುತ್ತಿಲ್ಲ,

ತಮ್ಮ ಬೇಡಿಕೆಗಳನ್ನು ಈಡೇರಿಸಬೇಕೆಂದು ಬಿಸಿಯೂಟ ನೌಕರರು ರಾಜ್ಯ ಮಟ್ಟದ ಹೋರಾಟ ಮುಂಚಿತವಾಗಿ ವಿವಿಧ ಜಿಲ್ಲೆಗಳಲ್ಲಿ ಕರ್ನಾಟಕ ರಾಜ್ಯ ಅಕ್ಷರದಾಸೋಹ ನೌಕರರ ಸಂಘ(ಸಿಐಟಿಯು)ದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಬೆಂಗಳೂರಿನಲ್ಲಿ ಸಾವಿರಾರು ನೌಕರರು ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದ್ದಾರೆ.



ಪ್ರತಿಭಟನೆಯಲ್ಲಿ ಅಧ್ಯಕ್ಷರಾದ ಎಸ್.ವರಲಕ್ಷ್ಮೀ, ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ, ಖಜಾಂಚಿ ಬಿ.ಎಸ್.ನಾಗರತ್ನ ಸೇರಿದಂತೆ ಸಾವಿರಾರು ನೌಕರರ ಭಾಗವಹಿಸಿದ್ದರು.

ನಾಳಿನ ಕಾರ್ಯಕ್ರಮಗಳು

ಬಿಡುಗಡೆಯ ರಂಗ ಸಂಚಾರ: ಸಮುದಾಯ ರೆಪರ್ಟರಿಯ ರಂಗ ನಾಟಕ, ಬೀದಿನಾಟಕ, ಕಾವ್ಯರಂಗ

ಫೆ 21 –22:	ಹಾಸನ;
ಫೆ. 23–24:	ಹುಣಸೂರು;
ಫೆ. 23–25:	ಎಡಪಕ್ಷಗಳ ಅಖಿಲ ಭಾರತ ಪ್ರತಿಭಟನೆ
ಫೆ.25–26 :	ಮೈಸೂರು,
ಫೆ. 27– 29	ಮೃತ್ಯುಂಜಯ ನಾಟಕ: ಕಲಾಗ್ರಾಮ, ರಂಗಶಂಕರ, ರವೀಂದ್ರ ಕಲಾಕ್ಷೇತ್ರ, ಬೆಂಗಳೂರು.
ಫೆ. 29:	ಸಮಾರೋಪ, ರವೀಂದ್ರಕಲಾ ಕ್ಷೇತ್ರ, ಬೆಂಗಳೂರು.
ಮಾರ್ಚ್ 01:	ಪಂಚಾಯತಿ ನೌಕರರ ಅನಿರ್ದಿಷ್ಟಾವಧಿ ಧರಣಿ, ಜಿಲ್ಲಾ ಪಂಚಾಯತಿ ಕಛೇರಿ ಬಳಿ
ಮಾರ್ಚ್ 01:	ರಸ್ತೆ ಸಾರಿಗೆ ಕಾರ್ಮಿಕರ ದೆಹಲಿ ಚಲೋ
ಮಾರ್ಚ್ 11:	ಕಾರ್ಮಿಕರ ವಿಧಾನಸೌಧ ಚಲೋ, ಸಿಐಟಿಯು

ಜನಶಕ್ತಿ
ಕನ್ನಡ ವಾರಪತ್ರಿಕೆ

ಚಂದಾ ವಿವರ

ವಾರ್ಷಿಕ ಚಂದಾ : ರೂ.350.00
ದ್ವೈವಾರ್ಷಿಕ ಚಂದಾ : ರೂ.700.00

ಚಂದಾದಾರರು ಸಂರ್ಕಿಸಿ :
ಕ್ರಿಯಾ ಪ್ರಕಾಶನ, ಸೂರಿ ಭವನ
ನಂ.50/5, 2ನೇ 'ಬಿ' ಮೈನ್, 16ನೇ ಕ್ರಾಸ್,
ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ : 080–22234369
ಫೋನ್ : 9448578021, 9483966467

ಅತಿಥಿ ಅಂಕಣ



ಸಮಾಜದಲ್ಲಿ ದಲಿತರ ಬಗ್ಗೆ ಏಕಿಷ್ಟು ಅಸಹನೆ?

ಅಭಿವೃದ್ಧಿ ಅನ್ನುವುದು ಕೇವಲ ವರಮಾನದ, ಉತ್ಪಾದನೆಯ, ಬಂಡವಾಳದ, ಉದ್ಯೋಗದ ಪ್ರಶ್ನೆ ಮಾತ್ರವಲ್ಲ. ಡಾ. ಬಿ. ಆರ್. ಅಂಬೇಡ್ಕರ್ ಮತ್ತೆ ಮತ್ತೆ ತಮ್ಮ ಬರಹಗಳಲ್ಲಿ ಹೇಳಿದಂತೆ ಅದು ಘನತೆಯಿಂದ ಕೂಡಿದ ಬದುಕಿಗೆ ಸಂಬಂಧಿಸಿದ ಸಂಗತಿಯಾಗಿದೆ. ಒಂದು ವೇಳೆ ದಲಿತರು ಸಾವಿರಾರು ವರ್ಷಗಳಿಂದ ಸಿಲುಕಿಕೊಂಡಿರುವ ದುಸ್ಥಿತಿ ಮೌಲ್ಯಗಳ ಸಂಕೋಲೆಯಿಂದ ವಿಮೋಚನೆ ಪಡೆಯುವುದು ಸಾಧ್ಯವಾಗಿದ್ದಿದ್ದರೆ ಅವರ ಸಾಕ್ಷರತೆಯ ಪ್ರಮಾಣವು ಸಾಮಾನ್ಯ ಜನಸಂಖ್ಯೆಯ ಸಾಕ್ಷರತಾ ಪ್ರಮಾಣಕ್ಕೆ ಯಾವತ್ತೋ ಸಮನಾಗ ಬೇಕಾಗಿತ್ತು.

● ಪ್ರೊ.ಟಿ.ಆರ್.ಚಂದ್ರಶೇಖರ

ಮನುಷ್ಯರಿಗೆ ಧರ್ಮ, ಸಂಪ್ರದಾಯ, ಜಾತಿ, ವರ್ಗ, ವರ್ಣ, ಲಿಂಗ ಮುಂತಾದ ಪೂರ್ವಗ್ರಹ ಪೀಡಿತ ಉಪಾಧಿಗಳ ಗೊಡವೆಯಿಲ್ಲದೆ ಬದುಕುವುದು ಸಾಧ್ಯವಿಲ್ಲವೆ? ಅದು ಅಷ್ಟು ಕಠಿಣವಾದ ಸಂಗತಿಯೇ? ನಾಗರಿಕರನ್ನು ಯಾವ ಲಾಂಛನಗಳನ್ನೂ ಅವರಿಗೆ ಆರೋಪಿಸದೆ ಮನುಷ್ಯರನ್ನಾಗಿ, ವ್ಯಕ್ತಿಗಳನ್ನಾಗಿ ಏಕೆ ನಮಗೆ ಒಪ್ಪಿಕೊಳ್ಳುವುದು ಸಾಧ್ಯವಾಗುವುದಿಲ್ಲ? ಗುರುತು ಅನ್ನುವುದು ಮನುಷ್ಯರಿಗೆ ಅಷ್ಟು ಮುಖ್ಯವೇ? ಆದರೆ ಗುರುತು ಅನ್ನುವುದು ಒಂದಿರಲು ಸಾಧ್ಯವಿಲ್ಲ ತಾನೆ? ಆದರೆ ಅವೆಲ್ಲವನ್ನೂ ಮೀರಿ ಮನುಷ್ಯ ಅನ್ನುವ ಒಂದು ಗುರುತನ್ನು ಇಟ್ಟುಕೊಂಡು ಬದುಕನ್ನು ಸಾಗಿಸುವುದು ನಮಗೆ ಸಾಧ್ಯವಿಲ್ಲವೆ? ಒಂದು ಧರ್ಮದ, ಜಾತಿಯ, ಲಿಂಗದ, ಪ್ರದೇಶದ, ಸಮೂಹದ ಸದಸ್ಯರನ್ನಾಗಿ ಮಾತ್ರವೇ ನಮಗೆ ಮನುಷ್ಯರು ಸಲ್ಲಬೇಕೆ? ಕಳೆದ ಕೆಲವು ವರ್ಷಗಳಿಂದ ನಮ್ಮ ಸಮಾಜದಲ್ಲಿ ದಲಿತರ ಬಗ್ಗೆ ತೀವ್ರ ಅಸಹನೆ ವ್ಯಕ್ತವಾಗುತ್ತಿದೆ. ಅದಕ್ಕೆ ಕೆಲವು ನಿದರ್ಶನಗಳು ಇಲ್ಲಿವೆ:

ಕಾಂಗ್ರೆಸ್ಸಿನ ಉಪಾಧ್ಯಕ್ಷ ರಾಹುಲ್ ಗಾಂಧಿ ದಲಿತರ ಕೇರಿಯಲ್ಲಿ ತಂಗಿದ ಸಂಗತಿ ಬಗ್ಗೆ ಬಾಬಾ ರಾಮದೇವ್ ಮಾಡಿದ ಟೀಕೆ ಇರಬಹುದು, ದಲಿತರಿಗೆ ನೀಡುತ್ತಿರುವ ಮೀಸಲಾತಿ ಬಗ್ಗೆ ಆರ್.ಎಸ್.ಎಸ್ ಮುಖ್ಯಸ್ಥ ಮೋಹನ್ ಭಾಗವತ್ ನೀಡಿದ ಹೇಳಿಕೆ ಇರಬಹುದು, ಹರಿಯಾಣದಲ್ಲಿ ದಲಿತ ಮಕ್ಕಳು ಬೆಂಕಿಗೆ ಆಹುತಿಯಾದಾಗ ಅದರ ಬಗ್ಗೆ ಕೇಂದ್ರ ಸಚಿವ ನಿವೃತ್ತ ಜನರಲ್ ವಿ. ಕೆ. ಸಿಂಗ್ ಮಾಡಿದ ನಾಯಿ ಮರಿಯ ಉದಾಹರಣೆಯಿರಬಹುದು, ಮಾಸಿಕ ಋತುಚಕ್ರದ ಕಾರಣವಾಗಿ, ದಲಿತ ಮಹಿಳೆಯರಿರಲಿ, ಸಾಮಾನ್ಯ ಮಹಿಳೆಯರು ದೇವಾಲಯವನ್ನು ಪ್ರವೇಶಿಸುವುದಕ್ಕೆ ನಿಷೇಧ ಹೇರುವ ಬಗೆಗಿನ ಚರ್ಚೆಯಾಗಲಿ(ಕೇರಳ, ಮಹಾರಾಷ್ಟ್ರ), ಪವಿತ್ರ–ಅಪವಿತ್ರ ಎಂಬ ನಂಬಿಕೆಗಳಾಗಲಿ, ರೋಹಿತ್ ವೆಮುಲನ ಜಾತಿಯ ಬಗೆಗಿನ ವಿಚಾರಣೆಯಾಗಲಿ, ವಿಧವೆಯರನ್ನು ಅಪಮಾನ ಮಾಡುವ ರೀತಿಯಲ್ಲಿರುವ ಸುಮಂಗಲಿಯರಿಗೆ ಉಡಿ ತುಂಬುವ ಮಠಗಳಲ್ಲಿನ ಕಾರ್ಯಕ್ರಮಗಳಾಗಲಿ, 'ನಮ್ಮ ದೇಶದಲ್ಲಿ ಮಹಿಳೆಯರ(ಮಹಿಳೆಯರನ್ನು ದಲಿತರಿಗೆ ಸಮನಾಗಿ ಕಾಣುವ ಸಂಪ್ರದಾಯದ ಹಿನ್ನೆಲೆಯಲ್ಲಿ) ಆಟಾಟೋಪ ಹೆಚ್ಚಾಗಿದೆ' ಅನ್ನುವ ಸ್ವಾಮೀಜಿಯೊಬ್ಬರ ಮಾತಾಗಲಿ ಮುಂತಾದವು ಏನನ್ನು ಸೂಚಿಸುತ್ತವೆ? ಈ ಅಖಿಲ ಭಾರತೀಯ ಸಂಸ್ಕೃತಿಯ ಬಗ್ಗೆ ಮಾತನಾಡುತ್ತಿರುವವರಿಗೆ ರೋಹಿತ್ ವೆಮುಲನ ಆತ್ಮಹತ್ಯೆಗಿಂತ ಅವನ ಜಾತಿ ಮೂಲವನ್ನು ಹುಡುಕುವುದು ಆದ್ಯತೆಯ ಸಂಗತಿಯಾಗಿದೆ.

ಈ ಬಗೆಯ ಪೂರ್ವಗ್ರಹ ಪೀಡಿತ ಮಾತುಗಳ ಬಗ್ಗೆ ಯಾರನ್ನೋ ಗುರಿ ಮಾಡಿಕೊಂಡು ಟೀಕಿಸುವುದರಿಂದ ಯಾವುದೇ ಪ್ರಯೋಜನವಿಲ್ಲ. ಏಕೆಂದರೆ ನಮ್ಮ ಸಮಾಜದಲ್ಲಿನ ಉನ್ನತ ವರ್ಣ/ವರ್ಗಗಳ ಚಿಂತನೆಯ ಕ್ರಮವೇ ಪೂರ್ವಗ್ರಹದ್ದಾಗಿದೆ. ಹೀಗೆ ಉಪಾಧಿಗಳಿಂದ, ಗುರುತುಗಳ ಆಧಾರದ ಮೇಲೆ ಜನರನ್ನು ವರ್ಗೀಕರಿಸುವುದರಿಂದ ಸಮಾಜದಲ್ಲಿ ಅಸಹನೆಯು ಹೆಚ್ಚಾಗುತ್ತದೆ. ಅಸಹನೆಯ ಬಗ್ಗೆ ಸಾಹಿತಿಗಳು, ಬರಹಗಾರರು, ಕಲಾವಿದರು, ವಿದ್ವಾಂಸರು ಮುಂತಾದವರು ನಡೆಸುತ್ತಿರುವ ಚರ್ಚೆಯಿಂದ ಅಥವಾ ಅವಾರ್ಡ್ ವಾಪಸಿಯಿಂದ ಅಸಹನೆ ಅಧಿಕವಾಗುತ್ತಿಲ್ಲ. ಅನಾದಿ ಕಾಲದಿಂದ ಹರಿದುಕೊಂಡು ಬಂದಿರುವ ತಾರತಮ್ಯವಾದಿ, ಪೂರ್ವಗ್ರಹವಾದಿ ಮತ್ತು ಸಂಕುಚಿತವಾದಿ ಗುಣದ ಚೌಕಟ್ಟಿನಿಂದ ಹೊರ ಬರುವುದು ನಮ್ಮ ಸಮಾಜಕ್ಕೆ ಇಂದಿಗೂ ಸಾಧ್ಯವಾಗಿಲ್ಲ. ದಲಿತರ ಬಗ್ಗೆ ನಡೆದಿರುವ ಅಸಹನೆಯ ಅಭಿಪ್ರಾಯಗಳನ್ನು ಇದಕ್ಕೆ ನಿದರ್ಶನವಾಗಿ ನೋಡಬಹುದು. ದಲಿತರಿಗೆ ನೀಡುತ್ತಿರುವ ಮೀಸಲಾತಿ, ರಿಯಾಯಿತಿ, ಸೌಲಭ್ಯಗಳು, ಸವಲತ್ತುಗಳು ಮುಂತಾದವುಗಳ ಬಗ್ಗೆ ಸಮಾಜದ ಉನ್ನತ ವರ್ಗಕ್ಕೆ ಅಸಹನೆ ಮತ್ತು ಅಸೂಯೆಯಿದೆ. ಅದರ ಫಲಶ್ರುತಿಯೆಂದೇ ಮೇಲಿನ ಹೇಳಿಕೆಗಳನ್ನು ನಾವು ಪರಿಶೀಲಿಸಬೇಕು.

ಎಷ್ಟು ವರ್ಷಗಳ ಕಾಲ ಅವರಿಗೆ ಇಂತಹ ಸೌಲಭ್ಯಗಳನ್ನು ಮುಂದುವರಿಸುವುದು? ಇದರ ಬಗ್ಗೆ ಡಾ. ಬಿ. ಆರ್. ಅಂಬೇಡ್ಕರ್ ರೂಪಿಸಿದ ಸಂವಿಧಾನದಲ್ಲಿ ಹತ್ತು ವರ್ಷಗಳ ಕಾಲಮಿತಿಯನ್ನು ಅದಕ್ಕೆ ಹೇರಿರಲಿಲ್ಲವೇ ಎಂಬ ಮಾತುಗಳನ್ನು ಅಖಿಲ ಭಾರತೀಯ ಸಂಸ್ಕೃತಿಯ ಪ್ರತಿಪಾದಕರು ಬಹಿರಂಗವಾಗಿ ಅಲ್ಲದಿದ್ದರೂ ಒಳಗೊಳಗೆ ಹೇಳಿಕೊಳ್ಳುತ್ತಿರುವುದು ಕೇಳಿ ಬರುತ್ತದೆ. ದಲಿತರ ವಿಚಾರಗಳನ್ನೇ, ಅಭಿಪ್ರಾಯಗಳನ್ನೇ, ಅವುಗಳ ಸಂದರ್ಭದ ಚೌಕಟ್ಟಿನಿಂದ ಬೇರ್ಪಡಿಸಿ ಅಥವಾ ತಿರುಚಿ ಅವರ ವಿರುದ್ಧವೇ ತಿರುಗಿಸಿ ಖುಷಿ ಪಡುವುದು ಅಖಿಲ ಭಾರತೀಯ ಸಂಸ್ಕೃತಿವಾದಿಗಳ ಒಂದು ತಂತ್ರವಾಗಿದೆ. ನಮ್ಮ ದೇಶದಲ್ಲಿ ಆಳುವ ಬಲಪಂಥೀಯ ಪಕ್ಷಗಳು ತಮ್ಮ ಅಸ್ತಿತ್ವಕ್ಕೆ ದಕ್ಕೆ ಬಂದಾಗಲೆಲ್ಲ ಅವು ಧರ್ಮದ ಮೊರೆ ಹೋಗುತ್ತಿರುವುದಕ್ಕೆ ನಿದರ್ಶನಗಳು ಯಥೇಚ್ಛವಾಗಿ ದೊರೆಯುತ್ತವೆ ಮತ್ತು ಅವು ಇಂದು ಹಸಿ ಹಸಿಯಾಗಿ ಮತ್ತು ಹಸಿರಾಗಿ ನಮ್ಮ ಮುಂದೆ ಅಂಡಲೆಯುತ್ತಿವೆ. ನಮ್ಮ ದೇಶದಲ್ಲಿ ಧರ್ಮ ಮತ್ತು ಜಾತಿಗಳನ್ನು ಬಳಸಿಕೊಂಡೇ ಇಂದು ಬಲಪಂಥೀಯರು ರಾಜಕಾರಣ ನಡೆಸುತ್ತಿದ್ದಾರೆ. ಮುಸ್ಲಿಮರಿಗೆ ಉದ್ಯೋಗದಲ್ಲಿ ಮೀಸಲಾತಿ ನೀಡುವುದರ ಬಗೆಗಿನ ಒತ್ತಾಯವು ವೋಟ್ ಬ್ಯಾಂಕ್ ರಾಜಕಾರಣವಾಗಿ, ಅಲ್ಪಸಂಖ್ಯಾತರ ಅತಿಯಾದ ಓಲೈಕೆಯಾಗಿ ಕಾಣುತ್ತದೆ. ಹಾಗಾದರೆ ಬಾಬರಿ ಮಸೀದಿಯನ್ನು ಉರುಳಿಸಿದ್ದು, ಅಲ್ಲಿ ಮಂದಿರವನ್ನು ಕಟ್ಟುವ ಘೋಷಣೆ, ಮಾಂಸಾಹಾರದ ರಾಜಕಾರಣ, ಬಹುಸಂಖ್ಯಾತರ ಓಲೈಕೆ ಮುಂತಾದವುಗಳನ್ನು ಏನನ್ನಬೇಕು!

ಅಖಿಲ ಭಾರತೀಯ ಸಂಸ್ಕೃತಿ, ವೈದಿಕ ಸಮುದಾಯ, ಸನಾತನ ಧರ್ಮ, ಹಿಂದಿನಿಂದ ನಡೆದುಕೊಂಡು ಬರುತ್ತಿರುವ ಸಂಪ್ರದಾಯ ಮುಂತಾದ ಪರಿಕಲ್ಪನೆಗಳು ಇಂದು ಹೆಚ್ಚಾಗಿ ಕೇಳಿ ಬರುತ್ತಿವೆ. ಮಹಿಳೆಯರಿಗೆ ದೇವಾಲಯವನ್ನು ಪ್ರವೇಶಿಸುವುದಕ್ಕೆ ನಿಷೇಧ ಹೇರುತ್ತಿರುವುದು ಅವರ ಮಾಸಿಕ ಋತುಚಕ್ರದ ಕಾರಣಕ್ಕಾಗಿ ಅಲ್ಲ, ಅದು ಅನಾದಿ ಕಾಲದಿಂದ ನಡೆದುಕೊಂಡು ಬಂದಿರುವ ಪವಿತ್ರ ಸಂಪ್ರದಾಯ ಅನ್ನುವ ಕಾರಣಕ್ಕೆ ಎಂದು ವಿಚಿತ್ರವಾಗಿ ದೇವಸ್ಥಾನವಾದಿಗಳು ತಮ್ಮ ನಿಲುವನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಇವೆಲ್ಲವೂ ಹೇಳಿಕೇಳಿ ಅಖಂಡ ಪರಿಭಾವನೆಗಳು. ಒಂದು ಸಮೂಹವಾಗಿ ಇಲ್ಲಿ ಜನರನ್ನು ನೋಡಲಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಯಾವತ್ತೂ ಕೂಡ ಜನರು ಅಖಂಡ ಸಮೂಹವಾಗಿ ಬದುಕಿಲ್ಲ ಅಥವಾ ಹಾಗೆ ಅಖಂಡ ಸಮೂಹವಾಗಿ ಬದುಕಲು ಸಂಪ್ರದಯವಾದಿಗಳು ಬಿಟ್ಟಿಲ್ಲ. ಸಮೂಹವಾಗಿ ಭಾರತೀಯರನ್ನು ನೋಡಬೇಕು ಎಂದು ಪ್ರತಿಪಾದಿಸುವ ಅಖಂಡಪರವಾದಿಗಳೂ ಸಹ ವಾಸ್ತವದಲ್ಲಿ ಬಿಡಿ ಬಿಡಿಯಾಗಿಯೇ ಜನರನ್ನು ನೋಡುತ್ತಿದ್ದಾರೆ. ಮೇಲಿನ ಹೇಳಿಕೆ, ಟೀಕೆ, ಅಭಿಪ್ರಾಯಯಗಳಲ್ಲಿ ಇದನ್ನು ಗುರುತಿಸುವುದು ನಮಗೆ ಕಷ್ಟವಾಗಬಾರದು.

ದಲಿತರ ಅಭಿವೃದ್ಧಿಯ ಬಗ್ಗೆ ಎಲ್ಲರಿಗೂ ಕಾಳಜಿಯಿರುವಂತೆ ಕಾಣುತ್ತದೆ. ಆದರೆ ಶತಶತಮಾನಗಳಿಂದ ಶೋಷಣೆಗೆ ಒಳಗಾದ ದಲಿತರಲ್ಲಿ 'ದುಸ್ಥಿತಿ ಮೌಲ್ಯಗಳು' ರಕ್ತಗತವಾಗಿ ಬಿಟ್ಟಿವೆ. ಅಭಿವೃದ್ಧಿಯನ್ನು ಹಕ್ಕನ್ನಾಗಿ, ತಮ್ಮ ಶಾಸನಾತ್ಮಕ ಪಾಲನ್ನಾಗಿ ಪರಿಭಾವಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಸರ್ಕಾರಗಳು ಅವರಿಗೆ ನೀಡುತ್ತಿರುವ ಸಂವಿಧಾನಾತ್ಮಕ ಸವಲತ್ತುಗಳು ಅವರಲ್ಲಿ ರಕ್ತಗತವಾಗಿರುವ ದುಸ್ಥಿತಿ ಮೌಲ್ಯಗಳನ್ನು ತೊಡೆದು ಹಾಕುವ ಕೆಲಸ ಮಾಡುತ್ತಿಲ್ಲ. ಅಖಿಲ ಭಾರತೀಯ ಸಂಸ್ಕೃತಿ ಪ್ರತಿಪಾದಕರು ದಲಿತರಿಗೆ ಸರ್ಕಾರ ನೀಡುತ್ತಿರುವ ಸವಲತ್ತುಗಳ ಬಗ್ಗೆ ಮಾತ್ರ ಪ್ರಶ್ನೆಗಳನ್ನು ಕೇಳುತ್ತಿದ್ದಾರೆ. ಆದರೆ ಅವರು ಸಿಲುಕಿಕೊಂಡಿರುವ ದುಸ್ಥಿತಿ ಮೌಲ್ಯಗಳ ಸಂಕೋಲೆಯಿಂದ ಹೊರ ಬರಲು ಏನು ಮಾಡಬೇಕು ಎಂಬುದರ ಬಗ್ಗೆ ಚಿಂತಿಸುತ್ತಿಲ್ಲ. ಅಭಿವೃದ್ಧಿ ಅನ್ನುವುದು ಕೇವಲ ವರಮಾನದ, ಉತ್ಪಾದನೆಯ, ಬಂಡವಾಳದ, ಉದ್ಯೋಗದ ಪ್ರಶ್ನೆ ಮಾತ್ರವಲ್ಲ. ಡಾ. ಬಿ. ಆರ್. ಅಂಬೇಡ್ಕರ್ ಮತ್ತೆ ಮತ್ತೆ ತಮ್ಮ ಬರಹಗಳಲ್ಲಿ ಹೇಳಿದಂತೆ ಅದು ಘನತೆಯಿಂದ ಕೂಡಿದ ಬದುಕಿಗೆ ಸಂಬಂಧಿಸಿದ ಸಂಗತಿಯಾಗಿದೆ.

ಒಂದು ವೇಳೆ ದಲಿತರು ಸಾವಿರಾರು ವರ್ಷಗಳಿಂದ ಸಿಲುಕಿಕೊಂಡಿರುವ ದುಸ್ಥಿತಿ ಮೌಲ್ಯಗಳ ಸಂಕೋಲೆಯಿಂದ ವಿಮೋಚನೆ ಪಡೆಯುವುದು ಸಾಧ್ಯವಾಗಿದ್ದಿದ್ದರೆ ಅವರ ಸಾಕ್ಷರತೆಯ ಪ್ರಮಾಣವು ಸಾಮಾನ್ಯ ಜನಸಂಖ್ಯೆಯ ಸಾಕ್ಷರತಾ ಪ್ರಮಾಣಕ್ಕೆ ಯಾವತ್ತೋ ಸಮನಾಗ ಬೇಕಾಗಿತ್ತು. ಆದರೆ 2011ರ ಜನಗಣತಿ ಪ್ರಕಾರ ಕರ್ನಾಟಕದಲ್ಲಿ ದಲಿತೇತರರ ಸಾಕ್ಷರತಾ ಪ್ರಮಾಣ ಶೇ ಶೇ78.56ರಷ್ಟಿದ್ದರೆ ಪ. ಜಾ. ಸಾಕ್ಷರತಾ ಪ್ರಮಾಣ ಶೇ65.32ರಷ್ಟಿದ್ದರೆ ಪ.ಪಂ. ಗಳ ಸಾಕ್ಷರತಾ ಪ್ರಮಾಣ ಶೇ 62.08. ಸಮಾಜದಲ್ಲಿ ಪ. ಜಾ ಮತ್ತು ಪ. ಪಂಗಳ ಜನರಿಗೆ ಸಮಾನ ಅವಕಾಶಗಳು ಇದ್ದಿದ್ದರೆ ಅವರ ಸಾಕ್ಷರತಾ ಪ್ರಮಾಣ ಸಾಮಾನ್ಯ ಜನರ ಸಾಕ್ಷರತಾ ಪ್ರಮಾಣಕ್ಕೆ ಸಮನಾಗಿದ್ದಿರ ಬೇಕಾಗಿತ್ತು. ಇಲ್ಲಿರುವ ಅಂತರವು ಸಮಾಜದಲ್ಲಿರುವ ಅಸಮಾನತೆಯ ಪ್ರಮಾಣವನ್ನು ತೋರಿಸುತ್ತದೆ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಏನೆಲ್ಲ ರಕ್ಷಣೆ, ಪೋಷಣೆ, ರಿಯಾಯಿತಿ, ಸವಲತ್ತುಗಳನ್ನು ನೀಡಿದ್ದರೂ ಏಕೆ ಸಾಕ್ಷರತೆಗೆ ಸಂಬಂಧಿಸಿದಂತೆ ದಲಿತರ ಸ್ಥಿತಿ ಕೆಳಮಟ್ಟದಲ್ಲಿದೆ? ಅಸ್ಪೃಶ್ಯತೆಯನ್ನು ಸಂವಿಧಾನಾತ್ಮಕವಾಗಿ, ಶಾಸನಾತ್ಮಕವಾಗಿ ನಿಷೇಧಿಸಿರಬಹುದು. ಆದರೆ ಅದು ಮೇಲೆ ತಿಳಿಸಿರುವ ಹೇಳಿಕೆಗಳಿಂದ, ಟೀಕೆಗಳಿಂದ, ಅಭಿಪ್ರಾಯಗಳಿಂದ ತಿಳಿದು ಬರುವ ಸಂಗತಿಯೆಂದರೆ ಅಸ್ಪೃಶ್ಯತೆಯ ಭಾವನೆ ನಮ್ಮ ಸಮಾಜದ ಉನ್ನತ ವರ್ಗದಲ್ಲಿ ಮನೆ ಮಾಡಿಕೊಂಡಿದೆ. ಉದಾಹರಣೆಗೆ ಬಾಡಿಗೆಗೆ ಮನೆಯನ್ನು ದಲಿತರಿಗೆ ಕೊಡುವುದಿಲ್ಲ ಅನ್ನುವುದು ಅನವಶ್ಯಕವಾಗಿ(ಸುದ್ದಿ ಮಾಧ್ಯಮಗಳ ಮೂಲಕ) ಸಮಸ್ಯೆಗಳಿಗೆ ಕಾರಣವಾಗಬಹುದು. ಅದಕ್ಕೆ ಸವರ್ಣೀಯರು ಕಂಡುಕೊಂಡ ದಾರಿ ಯಾವುದು ಗೊತ್ತೇ? ಮಾಂಸಾಹಾರಿಗಳಿಗೆ ಮನೆಯನ್ನು ಕೊಡುವುದಿಲ್ಲ ಎಂಬ ಕ್ರಮದ ಮೂಲಕ ದಲಿತರಿಗೆ ಮನೆಯನ್ನು ಬಾಡಿಗೆ ಕೊಡುವ ಸನ್ನಿವೇಶದಿಂದ ತಪ್ಪಿಸಿಕೊಳ್ಳುವ ದಾರಿ ಹಿಡಿಯಲಾಗಿದೆ. ಹೀಗೆ ನೂರಾರು ರೀತಿಯಲ್ಲಿ ದಲಿತರನ್ನು ಅವಮಾನ ಮಾಡಲಾಗುತ್ತಿದೆ. ನಮ್ಮ ಸಮಾಜವು ಸಾಮಾನ್ಯ ಮಹಿಳೆಯರಿಗೆ ಸ್ವಾತಂತ್ರ್ಯವನ್ನು, ಸ್ವಾಯತ್ತತೆಯನ್ನು ನೀಡಲು ಸಿದ್ಧವಿಲ್ಲ. ಇನ್ನು ದಲಿತ ಮಹಿಳೆಯರ ಬಗ್ಗೆ ಸಮಾನತೆಯ ನೆಲೆಯಲ್ಲಿ, ಘನತೆಯ ನೆಲೆಯಿಂದ ನೋಡುವ ಕ್ರಮವೆಲ್ಲಿ ಸಾಧ್ಯ!

ಇಂದು ಸಾಮಾಜಿಕ ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಮಾನವ ಹಕ್ಕುಗಳು, ಮಹಿಳೆಯರ ಸ್ವಾಯತ್ತತೆ ಮುಂತಾದವು ಮೂಲೆಗೆ ಸರಿದು ಸ್ಮಾರ್ಟ್ ಸಿಟಿಗಳು, ಮೇಕ್ ಇನ್ ಇಂಡಿಯಾ, ವಿದೇಶಿ ಬಂಡವಾಳ, ಎನ್ ಐ ಆರ್‌ಗಳು, ಸ್ಟ್ರಾಟ್ ಅಪ್‌ಗಳು ಆದ್ಯತೆಯ ಸಂಗತಿಗಳಾಗಿವೆ. ಬಡವರಿಗೆ, ದಲಿತರಿಗೆ, ದುಡಿಯುವ ಮಹಿಳೆಯರಿಗೆ ಅನುಕೂಲವಾಗುವಂತಹ ಆಹಾರ ಭದ್ರತೆಯಾಗಲಿ, ಅಂಗನವಾಡಿಗಳ ಸುಧಾರಣೆಗಳಾಗಲಿ, ರೇಗಾ ಆಗಲಿ ಮುಖ್ಯವಾಗಿಲ್ಲ. ಏಕೆಂದರೆ ಇಂದು ಸರ್ಕಾರಕ್ಕೆ ಮಧ್ಯಮ ವರ್ಗದ ಮತ್ತು ಕೆಳ ಮಧ್ಯಮ ವರ್ಗದ ಆಶೋತ್ತರಗಳನ್ನು ಈಡೇರಿಸುವುದು ಆದ್ಯತೆಯ ಸಂಗತಿಯಾಗಿದೆ. ಭಾರತ ಸರ್ಕಾರದ ಯಾವ ಮಂತ್ರಿಯೂ ಬಡತನದ ಬಗ್ಗೆ, ಹಸಿವಿನ ಬಗ್ಗೆ, ವಲಸೆಯ ಬಗ್ಗೆ, ಅಪೌಷ್ಟಿಕತೆಯ ಬಗ್ಗೆ ಮಾತನಾಡುತ್ತಿಲ್ಲ. ಬಡತನ ನಿವಾರಣೆ, ಹಸಿವಿನ ನಿವಾರಣೆ, ಅಪೌಷ್ಟಿಕತೆಯನ್ನು ತೊಡೆದು ಹಾಕುವುದು ಮುಂತಾದವು ಇಂದು ಎಡಪಂಥೀಯರ ಕಾರ್ಯಕ್ರಮಗಳಾಗಿ ಕಾಣುತ್ತವೆ. ಇವುಗಳಿಗೆ ಆದ್ಯತೆಯನ್ನು ನೀಡುವುದರಿಂದ ಅರುಣ್ ಜೇಟ್ಲಿ ಅವರ ಜಿಡಿಪಿಯ ಬೆಳವಣಿಗೆ ಪ್ರಮಾಣ ಎರಡಂಕಿ ಗುರಿಯ ಸಾಧನೆ ಸಾಧ್ಯವಾಗುವುದಿಲ್ಲ ಎಂಬುದು ಸರ್ಕಾರದ ನೀತಿಯಾಗಿರುವಂತೆ ಕಾಣುತ್ತದೆ. ಇಂದು ಅಭಿವೃದ್ಧಿಯನ್ನು ಜಿಡಿಪಿ ಏರಿಕೆಗೆ ಸಂವಾದಿಯನ್ನಾಗಿ ಮಾಡಲಾಗಿದೆ. ಸಾಮಾಜಿಕ ನ್ಯಾಯ, ಮಾನವ ಅಭಿವೃದ್ಧಿ, ಸಮಾನತೆ ಮುಂತಾದ ವಿಚಾರಗಳು ಬಂದರೆ ನೀತಿ ಆಯೋಗದ ಉಪಾಧ್ಯಕ್ಷರಾದ ಅರವಿಂದ ಪಾಣಿಗಾರಿಯಾ ಅವರಿಗೆ ಎಲ್ಲಿಲ್ಲದ ಕೋಪ ಬರುತ್ತದೆ. ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಪ್ರತಿಪಾದಕರಾದ ಅಮರ್ತ್ಯ ಸೇನ್, ಜೀನ್ ಡ್ರೀಜ್ ಮುಂತಾದವರ ಬಗ್ಗೆ ಪಾಣಿಗಾರಿಯಾ ಮತ್ತು ಹಣಕಾಸು ಸಚಿವಾಲಯದ ಸಲಹೆಗಾರರಾದ ಅರವಿಂದ ಸುಬ್ರಮಣ್ಯಮ್ ಅವರಿಗೆ ಭಿನ್ನಾಭಿಪ್ರಾಯಕ್ಕೆ ಪ್ರತಿಯಾಗಿ ಅಸಹನೆಯಿದೆ.

ಬಡತನಕ್ಕೆ ಬಡವರೆ ಕಾರಣ, ದಲಿತರ ದುಸ್ಥಿತಿಗೆ ದಲಿತರೇ ಕಾರಣ, ಲಿಂಗ ಅನುಪಾತದಲ್ಲಿನ ಕುಸಿತಕ್ಕೆ ಮಹಿಳೆಯರೇ ಕಾರಣ ಅನ್ನುವ ಪ್ರಮೇಯಗಳು ಇಂದು ಚಾಲ್ತಿಯಲ್ಲಿವೆ. ಈ ಬಗೆಯ ಧೋರಣೆಯು ದಲಿತರ ಪ್ರಗತಿಗೆ ಮಾರಕವಾಗಿ ಪರಿಣಮಿಸಿವೆ. ಒಂದು ವರ್ಗಕ್ಕೆ ಸಂಬಂಧಿಸಿದಂತೆ ಘನತೆಯ ಬಗ್ಗೆ ಮಾತನಾಡುವುದು ಮತ್ತೊಂದು ವರ್ಗ ಬಗ್ಗೆ ಅಸಹನೆಯಿಂದ ಮತ್ತು ಅಸಹ್ಯವಾಗಿ ಮಾತನಾಡುವುದು ದೇಶದಲ್ಲಿ ಅಸಮಾನತೆಯನ್ನು ಉಲ್ಬಣಗೊಳಿಸುತ್ತದೆ ವಿನಾ ಸಾಮಾಜಿಕ ಬದುಕನ್ನು ಸಮೃದ್ಧಗೊಳಿಸುವುದಿಲ್ಲ. ಆರ್ಥಿಕತೆಯ ಸಮೃದ್ಧತೆಗಿಂತ ಜನರ ಬದುಕಿನ ಸಮೃದ್ಧತೆ ಮುಖ್ಯ. ಇಂದು ದೇಶದ ಬಗ್ಗೆ ಅಭಿಮಾನದಿಂದ ಮಾತನಾಡುವುದು ಸರಿ. ಆದರೆ ಜನರನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಆನುಷಂಗಿಕ ಮಾಡುವುದು ಅಪಾಯಕಾರಿಯಾದುದು. ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳನ್ನು ಅಭಿವೃದ್ಧಿಯ ಅಡಿಪಾಯಗಳನ್ನಾಗಿ ಮಾಡಿಕೊಳ್ಳದಿದ್ದರೆ ಮತ್ತು ಸಮಾಜದಲ್ಲಿನ ಉನ್ನತ ವರ್ಗ–ವರ್ಣದ ಮಂದಿ ತಮ್ಮ ತಾರತಮ್ಯವಾದಿ–ಪೂರ್ವಗ್ರಹವಾದಿ ಧೋರಣೆಯನ್ನು ಬದಲಾಯಿಸಿಕೊಳ್ಳದಿದ್ದರೆ ದಲಿತರ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. ■

ಸ್ವಯಂಘೋಷಿತ 'ದೇಶಭಕ್ತರು'ಗಳ ನಿಜಬಣ್ಣ ಬಯಲಿಗೆ ತಂದ ಈ ಹತ್ತು ದಿನಗಳು



ಒಂದು ಸುಳ್ಳನ್ನು ಮತ್ತೆ–ಮತ್ತೆ ಹೇಳಿದರೆ ಅದು ಸತ್ಯವಾಗಿ ಬಿಡುತ್ತದೆ ಎಂಬ ತಮ್ಮ ಹೀರೋ ಹಿಟ್ಲರನ ಅಪಪ್ರಚಾರ ಮಂತ್ರಿಯ ಸೂಕ್ತಿಗೆ ಭಂಡತನದಿಂದ ಅಂಟಿಕೊಂಡಿರುವ ನಮ್ಮ ದೇಶದ 'ಅಚ್ಛೇ ದಿನ್'ವಾಲಾಗಳನ್ನು ಜೆಎನ್‌ಯು ಪ್ರಸಂಗ ಈ ಹತ್ತು ದಿನಗಳಲ್ಲಿ ಬಟ್ಟ ಬಯಲಾಗಿಸಿದೆ. ಆದರೂ ಅವರ 'ಪಾಕಿಸ್ತಾನೀ ಏಜೆಂಟ್'ಗಳು, 'ದೇಶದ್ರೋಹಿಗಳು' ಇತ್ಯಾದಿ ಆಲಾಪನೆಗಳು ಮುಂದುವರೆಯುತ್ತಲೇ ಇವೆ. ಅದರ ಪ್ರತೀಕವೋ ಎನ್ನುವಂತೆ ಈಗ ಎಬಿವಿಪಿ ತ್ಯಜಿಸಿರುವ ಜೆಎನ್‌ಯುನ ಮೂವರು ಕೂಡ 'ಮನುಸ್ಮೃತಿ' ಎಂದು ಕರೆದಿರುವ ಮಾನವ ಸಂಪನ್ಮೂಲ ಮಂತ್ರಿಗಳು ಎಲ್ಲ ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ದೇಶಪ್ರೇಮ ತುಂಬಲು ಕೇಂದ್ರ ಸ್ಥಳದಲ್ಲಿ 207 ಅಡಿಯ ಕಂಬದಲ್ಲಿ 35 ಕೆ.ಜಿ.ತೂಕದ ಬೃಹತ್ ತ್ರಿವರ್ಣ ಬಾವುಟವನ್ನು ಕಡ್ಡಾಯವಾಗಿ ಹಾರಿಸಬೇಕು ಎಂದು ಫೆಬ್ರುವರಿ 18 ರಂದು ನಿರ್ದೇಶನ ನೀಡಿದ್ದಾರಂತೆ. ತಮ್ಮ ಹಸಿ ಸುಳ್ಳನ್ನು ತಾವೇ ನಂಬಲಾರಂಭಿದಂತಿರುವ ಈ 'ನಿರ್ದೇಶನ'ದ ಹಿಂದಿನ ಹತ್ತು ದಿನಗಳ ಒಂದು ಪಕ್ಷಿನೋಟ ಇಲ್ಲಿದೆ.

ಫೆಬ್ರುವರಿ 9, 2016: ಜವಾಹರಲಾಲ್ ವಿಶ್ವ ವಿದ್ಯಾಲಯ (ಜೆಎನ್‌ಯು)ದ ಕೆಲವರು 'ಅಂಚೆ ಕಚೇರಿಯಿಲ್ಲದ ಒಂದು ದೇಶ' ಎಂಬ ಹೆಸರಲ್ಲಿ ಒಂದು ಸಾಂಸ್ಕೃತಿಕ ಸಂಜೆ ಕಾರ್ಯಕ್ರಮವನ್ನು ಏರ್ಪಡಿಸಿರುವುದಾಗಿ ಪ್ರಕಟಿಸಿದ್ದರು. ಇದು ಕಾಶ್ಮೀರದ ಪ್ರಶ್ನೆ ಕುರಿತಾದ್ದಾಗಿತ್ತು. ಈಬಗ್ಗೆ ವಿವಿ ಆವರಣದಲ್ಲಿ ಪೋಸ್ಟರುಗಳನ್ನು ಹಚ್ಚಲಾಗಿತ್ತು. ವಿವಿ ಅಧಿಕಾರಿಗಳು ಇದಕ್ಕೆ ಅನುಮತಿಯನ್ನೂ ಕೊಟಿದ್ದರು. ಆದರೆ ಕಾರ್ಯಕ್ರಮ ಆರಂಭವಾಗಬೇಕಾಗಿದ್ದ ಹದಿನೈದು ನಿಮಿಷಗಳ ಮೊದಲು ಅನುಮತಿಯನ್ನು ರದ್ದು ಮಾಡಲಾಯಿತು. ಕಾರ್ಯಕ್ರಮ ನಡೆಯಬೇಕಾಗಿದ್ದ ಸ್ಥಳಕ್ಕೆ ವಿದ್ಯುತ್ ಸರಬರಾಜನ್ನೂ ನಿಲ್ಲಿಸಲಾಯಿತು. ಹೈದರಾಬಾದಿನಲ್ಲಿ ಆದಂತೆ ಎಬಿವಿಪಿ ದೂರಿಗೆ ತಲೆಬಾಗಿ ಇದನ್ನು ಮಾಡಲಾಗಿತ್ತು ಎನ್ನಲಾಗಿದೆ.

ವಿದ್ಯಾರ್ಥಿಗಳು ಕಾರ್ಯಕ್ರಮ ನೋಡಲು ಸಾಕಷ್ಟು ಸಂಖ್ಯೆಯಲ್ಲಿ ಬಂದಿದ್ದರು. ಇದರಿಂದ ಕುಪಿತರಾದ ಆರೆಸ್ಸೆಸ್–ಎಬಿವಿಪಿ ಮಂದಿ ಗಲಭೆ ಆರಂಭಿಸಿದರು. ಇದಕ್ಕೆ ಪ್ರತಿ–ಗಲಭೆಯೂ ಆರಂಭವಾಯಿತು.

ಈ ಕಾರ್ಯಕ್ರಮವನ್ನು ಜೆಎನ್‌ಯು ವಿದ್ಯಾರ್ಥಿ ಸಂಘ ಏರ್ಪಡಿಸಿರಲಿಲ್ಲ, ಆದರೆ ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿ ಕನ್ಹೈಯಾ ಕುಮಾರ್ ವಿವಿ ಆವರಣದಲ್ಲಿ ವಿದ್ಯಾರ್ಥಿಗಳ ನಡುವೆ ಗಲಬೆ ನಡೆಯುತ್ತಿದ್ದಾಗ ಮಧ್ಯಪ್ರವೇಶಿಬೇಕಾಗಿತ್ತು.


ಎಬಿವಿಪಿ 'ದೇಶಭಕ್ತಿ'ಯ ಹೆಸರಲ್ಲಿ ಭಿನ್ನಮತ ವ್ಯಕ್ತಪಡಿಸುವ ಹಕ್ಕನ್ನು ಪ್ರಶ್ನಿಸುತ್ತಿತ್ತು. ಪ್ರಜಾಸತ್ತಾತ್ಮಕ ಚರ್ಚೆಗಳ ಪರಂಪರೆಯಿರುವ ಈ ವಿಶ್ವವಿದ್ಯಾಲಯದಲ್ಲಿ ಸಹಜವಾಗಿಯೇ ಕಾರ್ಯಕ್ರಮದ ಸಂಘಟಕರ ಜೊತೆಗೆ ಈ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ಕಾರ್ಯಕ್ರಮ ನಡೆಸುವ ಅವರ ಹಕ್ಕನ್ನು ವಿದ್ಯಾರ್ಥಿ ಸಂಘದ ಅಧ್ಯಕ್ಷರು ಸೇರಿದಂತೆ ಅಲ್ಲಿಗೆ ಬಂದಿದ್ದ ಎಐಎಸ್‌ಎಫ್ ಮತ್ತು ಎಸ್‌ಎಫ್‌ಐ ಸಂಘಟನೆಗಳು ಬೆಂಬಲಿಸಿದವು.

ಎಬಿವಿಪಿ ಎಬ್ಬಿಸಿದ 'ರಾಷ್ಟ್ರ–ವಿರೋಧಿ'ಗಳೆಂಬ ಗಲಭೆಗಳ ನಡುವೆ 'ಪಾಕಿಸ್ತಾನ ಜಿಂದಾಬಾದ್'' ಮತ್ತಿತರ ದೇಶ–ವಿರೋಧಿ ಘೋಷಣೆಗಳು ಕೇಳಬಂದವು ಎಂದು ಪೋಲಿಸರಿಗೆ ದೂರು ನೀಡಲಾಯಿತು.

***

ಈ ಘಟನೆಯನ್ನು ಬಳಸಿಕೊಂಡು ಜೆಎನ್‌ಯು ನಲ್ಲಿನ ಎಡ ಒಲವಿನ ಸಂಘಟನೆಗಳು ದೇಶದ್ರೋಹಿಗಳು ಎಂಬ ಅಬ್ಬರದ ಪ್ರಚಾರ ಆರಂಭವಾಯಿತು.

ಫೆಬ್ರುವರಿ 11 ರಂದು ಪೂರ್ವ ದಿಲ್ಲಿಯ ಬಿಜೆಪಿ ಎಂಪಿಯಿಂದ ಮಾನವ ಸಂಪನ್ಮೂಲ ಮಂತ್ರಿಗೆ ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ಆಗ್ರಹ. ಪೋಲೀಸರಿಗೂ ದೂರು



ವ್ಯಂಗ್ಯಚಿತ್ರ: ಮಂಜುಲ್

'ಭಾರತ ಮಾತೆಗೆ ಅವಮಾನ ಮಾಡುವುದನ್ನು ಸಹಿಸೆವು' ಎಂದು ಸ್ಮೃತಿ ಇರಾನಿ ಗುಡುಗಿದರು.

ಸಂಜೆ ಜೆಎನ್‌ಯು ನಲ್ಲಿ ವಿದ್ಯಾರ್ಥಿಗಳ ಒಂದು ದೊಡ್ಡ ಸಭೆ ನಡೆಯಿತು. ಅದರಲ್ಲಿ ಮಾತಾಡುತ್ತ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯಾ ಕುಮಾರ್ ಸಂಘದ ನಿಲುವನ್ನು ಸ್ಪಷ್ಟ ಪಡಿಸಿದರು. ಅದೇ ವೇಳೆಗೆ ಜೆಎನ್‌ಯು ವಿರುದ್ಧ, ಎಡ ಪಂಥೀಯ ಸಂಘಟನೆಗಳ ವಿರುದ್ಧ ಸಂಘ ಪರಿವಾರದ ವಿಷಮಯ ಅಪಪ್ರಚಾರದ ಹೂರಣವನ್ನು ತೆರೆದಿಟ್ಟರು.

***

ಫೆಬ್ರುವರಿ 12: ರಾಷ್ಟ್ರ–ವಿರೋಧಿ ಚಟುವಟಿಕೆಗಳನ್ನು ನಡೆಸುವವರ ವಿರುದ್ಧ ಉಗ್ರ ಕ್ರಮಗಳನ್ನು ಕೈಗೊಳ್ಳಲು ದಿಲ್ಲಿ ಪೋಲಿಸರಿಗೆ ಹೇಳಿರುವುದಾಗಿ ಕೇಂದ್ರ ಗೃಹ ಮಂತ್ರಿ ಉದ್ಗಾರ.

ದಿಲ್ಲಿ ಪೊಲೀಸರಿಂದ ಒಂದು ಓಪನ್ ಎಫ್‌ಐಆರ್. ಅಂದರೆ ಯಾರನ್ನು ಬೇಕಾದರೂ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು, ದೇಶ–ವಿರೋಧಿ ಘೋಷಣೆ ಕೂಗಿದರು ಎಂದು ಹೇಳಿ ಬಂಧಿಸಬಹುದು. ಹೀಗೆ ಬಂಧಿಸಬಹುದಾದ ವಿದ್ಯಾರ್ಥಿ ಮುಖಂಡರ ಪಟ್ಟಿ ತಯಾರಿಸಲಾಯಿತು ಎನ್ನಲಾಗಿದೆ.

ಜೆಎನ್‌ಯು ಆವರಣದೊಳಕ್ಕೆ ಬಂದು ಹಾಸ್ಟೆಲುಗಳಿಗೆ ನುಗ್ಗಲು ದಿಲ್ಲಿ ಪೋಲೀಸರಿಗೆ ಉಪಕುಲಪತಿಯ ಅನುಮತಿ. ಇದರಿಂದಾಗಿ ವಿವಿ ಆವರಣದಲ್ಲೆಲ್ಲ ಪೋಲೀಸ್ ಬೂಟುಗಾಲುಗಳ ಸದ್ದು

ಕನ್ಹೈಯಾ ಕುಮಾರ್ ಬಂಧನ. ಅವರ ಮೇಲೆ ದೇಶ–ವಿರೋಧಿ ಘೋಷಣೆಗಳನ್ನು ಕೂಗಿದ, ಭಾಷಣ ಮಾಡಿದ, ಕ್ರಿಮಿನಲ್ ಪಿತೂರಿ ನಡೆಸಿದ ರಾಜದ್ರೋಹದ ಆಪಾದನೆಯ ಮೇಲೆ ಈ ಬಂಧನ ನಡೆಸಲಾಯಿತು.

ಘಟನೆಯ ಬಗ್ಗೆ ವಿವಿ ತನಿಖೆ ನಡೆಯುವ ವರೆಗೆ ಎಂಟು ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸದಂತೆ ತನಿಖೆಯ ಮೊದಲೇ ಡಿಬಾರ್ ಮಾಡಲಾಯಿತು. ಈ ಕ್ರಮವನ್ನೂ ಉಪಕುಲಪತಿಗಳು ಕೇಂದ್ರ ಸರಕಾರದ ಒತ್ತಡದಿಂದ ಕೈಗೊಂಡರು ಎನ್ನಲಾಗಿದೆ.

***

ಫೆಬ್ರುವರಿ 13: ಕನ್ಹೈಯರನ್ನು ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಎದುರು ಹಾಜರು ಪಡಿಸಲಾಯಿತು,. ಟಿವಿ ಚಾನೆಲ್ ಒಂದು ಕೊಟ್ಟಿದ್ದ ವಿಡಿಯೋ ಆಧಾರದ ಮೇಲೆ, ಅದರ ವಿಶ್ವಾಸಾರ್ಹತೆಯನ್ನೂ ಪರೀಕ್ಷಿಸದೆ ದಿಲ್ಲಿ ಪೋಲೀಸ್ ಕನ್ಹೈಯ ಅವರ 'ಭಯೋತ್ಪಾದಕ' ಇತ್ಯಾದಿ ಸಂಪರ್ಕಗಳ ಬಗ್ಗೆ ತನಿಖೆ ನಡೆಸಲು ಆತನ ಕಸ್ಟಡಿ ಬೇಕು ಎಂದು ಮ್ಯಾಜಿಸ್ಟ್ರೇಟರನ್ನು ಕೇಳಿತು.

ಫೆಬ್ರುವರಿ 9ರ ಕಾರ್ಯಕ್ರಮದಲ್ಲಿ ಕೇಳಬಂದ ಘೋಷಣೆಗಳನ್ನು ತಾನೂ ಒಪ್ಪುವದಿಲ್ಲ, ವಿವಿ ಸಂಘದ ಅಧ್ಯಕ್ಷನಾಗಿ ಗಲಭೆ ನಡೆಯುತ್ತಿದ್ದಾಗ ತಾನು ಮಧ್ಯಪ್ರವೇಶಿಸಬೇಕಾಗಿತ್ತು, ಅದನ್ನಷ್ಟೇ ಮಾಡಿದ್ದು ಎಂದು ಕನ್ಹೈಯ ಮ್ಯಾಜಿಸ್ಟ್ರೇಟರ ಮುಂದೆ ಹೇಳಿದರು, ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ತಾನು ಎಬಿವಿಪಿಯನ್ನು ಸೋಲಿಸಿದ್ದರಿಂದಾಗಿ ತನ್ನ ಮೇಲೆ ಗೂಬೆ ಕೂರಿಸುವ ಪ್ರಯತ್ನ ಇದು ಎಂದೂ ಅವರು ಹೇಳಿದರು.

ಆದರೂ ಕನ್ಹೈಯ ಅವರನ್ನು ಮೂರು ದಿನಗಳ ಪೋಲೀಸ್ ಕಸ್ಟಡಿಗೆ ಒಪ್ಪಿಸಲಾಯಿತು.

***

ಕನ್ಹೈಯ ಬಂಧನಕ್ಕೆ ವಿದ್ಯಾರ್ಥಿಗಳು ಮತ್ತು ಜೆಎನ್‌ಯು ಅಧ್ಯಾಪಕರಿಂದಲೂ ವ್ಯಾಪಕ ಪ್ರತಿಭಟನೆ. ರಾಜಕೀಯ ಪಕ್ಷಗಳಿಂದಲೂ ಪ್ರತಿಭಟನೆ.

ವಿವಿಯ ಆಡಳಿತ ಕಚೇರಿಯ ಬಳಿ ದೊಡ್ಡ ಸಂಖ್ಯೆಯಲ್ಲಿ ಸೇರಿದ ಜೆಎನ್‌ಯು ವಿದ್ಯಾರ್ಥಿಗಳು ಸೋಮವಾರ(ಫೆ.15)ದೊಳಗೆ ಕನ್ಹೈಯರನ್ನು ಬಿಡುಗಡೆ ಮಾಡದಿದ್ದರೆ ಮುಷ್ಕರ ನಡೆಸಲು ನಿರ್ಧರಿಸಿದರು.



ವಿವಿಯ ವಿವಿಧ ವಿಭಾಗಗಳ ಮಾಜಿ ಡೀನ್‌ಗಳು ಬಂಧನವನ್ನು ಖಂಡಿಸುತ್ತ ಒಂದು ಹೇಳಿಕೆ ನೀಡಿ ಕನ್ಹೈಯ ಮೇಲಿನ ಆಪಾದನೆ ಯಾರೂ ನಂಬಲು ಸಾಧ್ಯವಿಲ್ಲದಂತದ್ದು, ಈ ಹಿಂದೆ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷರನ್ನು 1975–77ರ ತುರ್ತು ಪರಿಸ್ತಿತಿಯಲ್ಲಷ್ಟೇ ಬಂಧಿಸಲಾಗಿತ್ತು, ಈಗಿನ ಕ್ರಮಗಳು ಆ ಕರಾಳ ದಿನಗಳನ್ನು ನೆನಪಿಸುತ್ತವೆ ಎಂದರು.

ಜೆಎನ್‌ಯು ಅಧ್ಯಾಪಕರ ಸಂಘ ಒಂದು ತುರ್ತು ಸಭೆ ನಡೆಸಿ ವಿದ್ಯಾರ್ಥಿಗಳನ್ನು ಬೆಂಬಲಿಸಿತು, ವಿವಿ ಆವರಣದಲ್ಲಿ ದೊಡ್ಡ ಪ್ರಮಾಣದಲ್ಲಿ ಪೋಲೀಸ್ ಪಡೆಗಳನ್ನು ನಿಲ್ಲಿಸಿ ಬಿಗುವಿನ ವಾತಾವರಣವನ್ನು ಉಲ್ಬಣಗೊಳಿಸುವ ಪ್ರಯತ್ನ ನಡೆಯುತ್ತಿದೆ ಎಂದು ಅದು ಆತಂಕ ವ್ಯಕ್ತ ಪಡಿಸಿತು.

***

ಈ ನಡುವೆ ಸಾಮಾಜಿಕ ಮಾಧ್ಯಮಗಳಲ್ಲಿ ಎಬಿವಿಪಿ ಕಾರ್ಯಕರ್ತರೇ ಭಾರತ–ವಿರೋಧಿ ಘೋಷಣೆಗಳನ್ನು ಕೂಗುತ್ತಿರುವಂತೆ ಕಾಣುವ ವೀಡಿಯೋ ಒಂದು ಕಾಣಿಸಿಕೊಂಡಿತು.

***

ಸಿಪಿಐ(ಎಂ)ನ ಸೀತಾರಾಮ್ ಯೆಚೂರಿ, ಸಿಪಿಐನ ಡಿ.ರಾಜ ಮತ್ತು ಜೆಡಿ(ಯು)ನ ಕೆ.ಸಿ.ತ್ಯಾಗಿಯವರಿದ್ದ ನಿಯೋಗ ಗೃಹಮಂತ್ರಿ ರಾಜನಾಥ ಸಿಂಗ್ ಅವರನ್ನು



ಭೇಟಿ ಮಾಡಿ ಜೆಎನ್‌ಯುನಲ್ಲಿ ಉಂಟಾಗಿರುವ ಬಿಗಿ ವಾತಾವರಣದ ಬಗ್ಗೆ ಹೇಳಿದರು. ಕನ್ಹೈಯರನ್ನು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಆಗ್ರಹಿಸಿದರು.

ಈ ನಿಯೋಗ ದಿಲ್ಲಿ ಮುಖ್ಯಮಂತ್ರಿ ಕೇಜ್ರಿವಾಲ್‌ರನ್ನು ಭೇಟಿ ಮಾಡಿ ಫೆಬ್ರುವರಿ 9ರ ಘಟಮೆಯ ಬಗ್ಗೆ ಪೋಲೀಸರು ಮುಂದಿಟ್ಟಿರುವ ಸಾಕ್ಷ್ಯ ನಂಬಲರ್ಹವೇ ಎಂದು ತನಿಖೆ ನಡೆಸಬೇಕು ಎಂದು ಕೋರಿತು.

ಈ ಕೋರಿಕೆಯ ಮೇರೆಗೆ ಮತ್ತು ಎಬಿವಿಪಿಯವರೇ ಭಾರತ–ವಿರೋಧಿ ಘೋಷಣೆ ಕೂಗುವ ವೀಡಿಯೋದ ಬಗ್ಗೆ ಮ್ಯಾಜಿಸ್ಟ್ರೇಟ್ ತನಿಖೆಗೆ ಮುಖ್ಯಮಂತ್ರಿಗಳ ಆದೇಶ

***

ಫೆಬ್ರುವರಿ 14: ಜೆಎನ್‌ಯು ನಲ್ಲಿನ ಫೆ.9ರ ಘಟನೆಗೆ ಪಾಕಿಸ್ತಾನದ ಭಯೋತ್ಪಾದಕ ಸಂಘಟನೆ ಎಲ್‌ಇಟಿಯ ಹಫೀಝ್ ಸಯೀದ್‌ನ ಬೆಂಬಲ ಇತ್ತು, ಇದು ದೇಶ ಅರ್ಥ ಮಾಡಿಕೊಳ್ಳಬೇಕಾದ ಸತ್ಯ ಎಂದು ಗೃಹಮಂತ್ರಿಗಳು ಒಂದು ಹೊಸ ಬಿರುಗಾಳಿ ಎಬ್ಬಿಸಿದರು.

ಹಿಂದಿನ ದಿನ ಮೇಲೆ ಹೇಳಿದ ನಿಯೋಗ ಅವರನ್ನು ಭೇಟಿಯಾಗಿದ್ದಾಗ ಈ ಬಗ್ಗೆ ಅವರೇನೂ ಹೇಳಿರಲಿಲ್ಲ, ಆದ್ದರಿಂದ ಇದಕ್ಕೆ ಪುರಾವೆ ಕೊಡಿ ಎಂದು ಪ್ರತಿಪಕ್ಷಗಳ ಮುಖಂಡರು ಮತ್ತು ಇತರರು ಆಗ್ರಹಿಸಿದರು. ಅದಕ್ಕೆ ಮಾನ್ಯ ಗೃಹಮಂತ್ರಿಗಳು ಹಫೀಝ್‌ನ ಟ್ವಿಟರ್ ಖಾತೆ. ಹಾಗೆಂದಿದೆ ಎಂದರು. ಇತರ ಬಿಜೆಪಿ ಮುಖಂಡರು ಮತ್ತೆ 'ರಾಷ್ಟ್ರ–ವಿರೋಧ' ,"ಭಯೋತ್ಪಾದಕರಿಗೆ ಬೆಂಬಲ' ಇತ್ಯಾದಿ ಸಮೂಹ ಆಲಾಪನೆ ಆರಂಭಿಸಿದರು.

ಆದರೆ ಇದು ಎಲ್ಲೆಡೆಗಳಿಂದ ಪ್ರತಿಭಟನೆಗಳು ಬರುತ್ತಿದ್ದಾಗ ಬಿಜೆಪಿ ಮುಖಂಡತ್ವ ಸೃಷ್ಟಿಸಲು ಪ್ರಯತ್ನಿಸಿದ ಗಾಳಿ ಎಂದು ದೇಶಕ್ಕೆ ಬೇಗನೇ ಅರ್ಥವಾಯಿತು. ಇದು ಒಂದು ಕಪಟ ಖಾತೆ ಎಂದು ಬಯಲಾಯಿತು.

ಅವರ ಗೃಹ ಮಂತ್ರಾಲಯದ ವಕ್ತಾರರು ಮಂತ್ರಿಗಳಿಗೆ ವಿವಿಧ ಮೂಲಗಳಿಂದ ಈ ಮಾಹಿತಿ ಸಿಕ್ಕಿತ್ತು ಎಂದು ತಮ್ಮ ಮಂತ್ರಿಗಳನ್ನು ಹೇಳಿಕೆಯನ್ನು ಸಮರ್ಥಿಸಿ ಕೊಳ್ಳಲು ಹೆಣಗಿದರೂ ದೇಶದ ಗೃಹ ಮಂತ್ರಿಗಳು ಹೀಗೆ ನಗೆಪಾಟಲಾದುದನ್ನು ತಪ್ಪಿಸಲು ಸಾಧ್ಯವಾಗಲಿಲ್ಲ.



ಗೃಹಮಂತ್ರಿಗಳಿಗೆ ಒಂದು ವಿಶ್ವಾಸಾರ್ಹ ಪಕ್ಷಿಮೆದುಳಿನಿಂದ ಎಲ್ಲ ರಾಷ್ಟ್ರ–ವಿರೋಧಿ ಚಟುವಟಿಕೆಗಳ ಮಾಹಿತಿ ಸಿಗುತ್ತದೆ

***

ಫೆಬ್ರುವರಿ 14: ಜೆಎನ್‌ಯುನಲ್ಲಿ ಮೋದಿ ಸರಕಾರದ ಕ್ರಮಗಳನ್ನು ಪ್ರತಿಭಟಿಸಿ ವಿವಿ ಮುಖ್ಯ ದ್ವಾರದಿಂದ ಸುಮಾರು ಎರಡು ಕಿ.ಮೀ. ಉದ್ದದ ಮಾನವ ಸರಪಳಿಯಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರಲ್ಲದೆ, ಕಹರ್ಷ ಮಂದರ್, ತೀಸ್ತ ಸೆಟಲ್‌ವಾಡ್‌ರಂತಹ ಪ್ರತಿಷ್ಠಿತ ನಾಗರಿಕರೂ ಭಾಗವಹಿಸಿದರು.

'ರೋಹಿತ್ ಕೊಲೆಗಡುಕರಿಂದ ನಮಗೆ ದೇಶಪ್ರೇಮದ ಪಾಠ ಬೇಕಿಲ್ಲ' ಎಂಬ ಘೋಷಣೆ ಮೊಳಗಿತು.

ಜೆಎನ್‌ಯು ಅಧ್ಯಾಪಕರ ಸಂಘ ಈ ಸಂದರ್ಭದಲ್ಲಿ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಹೈದರಾಬಾದ್ ವಿವಿ ಮತ್ತಿತರ 40 ಕೇಂದ್ರೀಯ ವಿಶ್ವವಿದ್ಯಾಲಯಗಳ ಅಧ್ಯಾಪಕರ ಸಂಘಗಳ ಸಂದೇಶಗಳನ್ನು ಓದಿದರು. ಇವರೆಲ್ಲ ಜೆಎನ್‌ಯು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರಿಗೆ ಬೆಂಬಲ ವ್ಯಕ್ತಪಡಿಸಿದರು, ಕನ್ಹೈಯ ಕುಮಾರ್ ಬಿಡುಗಡೆಗೆ ಆಗ್ರಹಿಸಿದರು.


***

ಫೆಬ್ರುವರಿ 15: ಜೆಎನ್‌ಯುನಲ್ಲಿ ವಿದ್ಯಾರ್ಥಿಗಳ ಅನಿರ್ದಿಷ್ಟ ಕಾಲದ ತರಗತಿ ಬಹಿಷ್ಕಾರ ಆರಂಭ. ವಿವಿಯ ಆಡಳಿತ ಕಚೇರಿಯ ಎದುರು 200ಕ್ಕೂ ಹೆಚ್ಚು ವಿದಾರ್ಥಿಗಳ ಮತಪ್ರದರ್ಶನ, 2000 ವಿದ್ಯಾರ್ಥಿಗಳು ಸಹಿ ಹಾಕಿದ ಮನವಿ ಪತ್ರವನ್ನು ಉಪಕುಲಪತಿಗಳಿಗೆ **ಪುಟ 11 ನೋಡಿ**

ಕ್ಯಾಂಪಸ್‌ನಲ್ಲಿ ಪೋಲೀಸ್ ಬೂಟುಗಾಲುಗಳ ಆರ್ಭಟ



ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷರನ್ನು ರಾಜದ್ರೋಹದ ಆಪಾದನೆಯ ಮೇಲೆ ಬಂಧಿಸಿರುವುದು ಅಫ್ಜಲ್ ಗುರುವಿನ ನೇಣು ಶಿಕ್ಷೆಯ ವಾರ್ಷಿಕದ ಸಂದರ್ಭದಲ್ಲಿ ಒಂದು ಸಣ್ಣ ವಿದ್ಯಾರ್ಥಿ ಗುಂಪಿನ ಪ್ರತಿಭಟನೆಗೆ ಒಂದು ಮಿತಿಮೀರಿದ ಪ್ರತಿಕ್ರಿಯೆಯಂತೆ ಕಾಣುತ್ತದೆ.



ಆದರೆ ಇದು ಅಧಿಕಾರಶಾಹಿ ಅತಿ-ಕ್ರಿಯೆಯಲ್ಲ, ಬದಲಿಗೆ, ಬಿಜೆಪಿ ಸರಕಾರದಿಂದ ಒಂದು ಉದ್ದೇಶಪೂರ್ವಕವಾದ ರಾಜಕೀಯ ಮಧ್ಯಪ್ರವೇಶವಿದು. ಆದ್ದರಿಂದ ಇದರ ವಿರುದ್ಧ, ಜೆಎನ್‌ಯು ಉಳಿಸುವ ಸಮರ, ಹಿಂದುತ್ವ ಸರ್ವಾಧಿಕಾರಶಾಹಿಯ ವಿರುದ್ಧದ ವ್ಯಾಪಕ ಸಮರದ ಒಂದು ಭಾಗ.

ಪ್ರಕಾಶ ಕಾರಟ್

ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶೈಕ್ಷಣಿಕ ಸಂಸ್ಥೆಗಳನ್ನು ಆರೆಸ್ಸೆಸ್-ಬಿಜೆಪಿಯ ರಾಜಕೀಯ-ಸೈದ್ಧಾಂತಿಕ ಪ್ರಾಬಲ್ಯದೊಳಕ್ಕೆ ತರುವ ಕೆಲಸ ಭರದಿಂದ ಸಾಗಿದೆ. ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ (ಜೆಎನ್‌ಯು) ಮತ್ತು ಅಲ್ಲಿನ ವಿದ್ಯಾರ್ಥಿ ಸಮುದಾಯದ ಮೇಲೆ ದಾಳಿಯ ಇತ್ತೀಚಿನ ಪ್ರಸಂಗ ಕೇಂದ್ರ ಸರಕಾರದ ವ್ಯಾಪ್ತಿಯೊಳಗೆ ಬರುವ ಇತರ ಶೈಕ್ಷಣಿಕ ಸಂಸ್ಥೆಗಳಲ್ಲಿನ ಇತ್ತೀಚಿನ ಘಟನೆಗಳ ಹಿನ್ನೆಲೆಯಲ್ಲಿ ಸುಮಾರಾಗಿ ನಿರೀಕ್ಷಿತವೇ ಆಗಿತ್ತು. ಜೆಎನ್‌ಯು ಆರೆಸ್ಸೆಸ್-ಹಿಂದುತ್ವ ಪಡೆಗಳು ಹೇಳುವುದಕ್ಕೆಲ್ಲ ತದ್ವಿರುದ್ಧವಾಗಿರುವುದರಿಂದ ಅದು ದಾಳಿಯ ಒಂದು ಪ್ರಧಾನ ಗುರಿಯಾಗಿದೆ.

ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯ ಕುಮಾರ್ ಅವರನ್ನು ರಾಜದ್ರೋಹದ ಆಪಾದನೆಯ ಮೇಲೆ ಬಂಧಿಸಿರುವುದು ಅಫ್ಜಲ್ ಗುರುವಿನ ನೇಣು ಶಿಕ್ಷೆಯ ವಾರ್ಷಿಕದ ಸಂದರ್ಭದಲ್ಲಿ ಒಂದು ಸಣ್ಣ ವಿದ್ಯಾರ್ಥಿ ಗುಂಪಿನ ಪ್ರತಿಭಟನೆಗೆ ಒಂದು ಮಿತಿಮೀರಿದ ಪ್ರತಿಕ್ರಿಯೆಯಂತೆ ಕಾಣುತ್ತದೆ. ಆದರೆ ಇದು ಅಧಿಕಾರಶಾಹಿ ಅತಿ-ಕ್ರಿಯೆಯಲ್ಲ, ಬದಲಿಗೆ, ಬಿಜೆಪಿ ಸರಕಾರದಿಂದ ಒಂದು ಉದ್ದೇಶಪೂರ್ವಕವಾದ ರಾಜಕೀಯ ಮಧ್ಯಪ್ರವೇಶವಿದು. ಆರೆಸ್ಸೆಸ್ ಮತ್ತು ಅದರ ವಿದ್ಯಾರ್ಥಿ ಅಂಗ ಎಬಿವಿಪಿಗೆ ಇದು ಜೆಎನ್‌ಯು ಕ್ಯಾಂಪಸ್ಸಿನಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳನ್ನು ಮೂಲೆಗೊತ್ತಲು ಬಳಸಬಹುದಾದ ಒಂದು ಅತ್ಯುತ್ತಮ ಪ್ರಶ್ನೆಯಾಗಿ ಕಂಡಿದೆ. ಜೆಎನ್‌ಯುವನ್ನು 'ರಾಷ್ಟ್ರ-ವಿರೋಧಿ' ಶಕ್ತಿಗಳ ಒಂದು ಬಿಲ ಎಂದು ಚಿತ್ರಿಸುವುದು ಆರೆಸ್ಸೆಸ್-ಬಿಜೆಪಿಯ ಪ್ರಚಾರದ ಬಹುಕಾಲದ ಆಶಯ.

ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಎಬಿವಿಪಿ ಬಯಕೆಯಂತೆ ಮತ್ತು ಒಬ್ಬ ಕೇಂದ್ರ ಮಂತ್ರಿಯ ಹಸ್ತಕ್ಷೇಪದಿಂದ ರೋಹಿತ್ ವೇಮುಲ ಮತ್ತು ಇತರ ನಾಲ್ಕು ದಲಿತ ವಿದ್ಯಾರ್ಥಿಗಳನ್ನು ಅವಮಾನತು ಮಾಡಿದಂತೆ, ಜೆಎನ್‌ಯು ನಲ್ಲೂ ಎಬಿವಿಪಿ ಪ್ರಚೋದನೆಯಿಂದ ಕೇಂದ್ರ ಗೃಹ ಮಂತ್ರಿ ರಾಜನಾಥ ಸಿಂಗ್ ಜೆಎನ್‌ಯುನಲ್ಲಿ 'ರಾಷ್ಟ್ರ-ವಿರೋಧಿ' ಚಟುವಟಿಕೆಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಪೋಲೀಸರಿಗೆ ನಿರ್ದೇಶನ ಕೊಡುವಂತಾಗಿದೆ. ಮಾನವ ಸಂಪನ್ಮೂಲ ಮಂತ್ರಿಗಳು ಭಾರತ ಮಾತೆಗೆ ಯಾವ ಅಪಮಾನವನ್ನೂ ಸಹಿಸುವುದಿಲ್ಲ ಎಂದು ಸಾರಿದರು.

ಪೋಲೀಸರು ವಿದ್ಯಾರ್ಥಿ ಸಂಘದ ಅಧ್ಯಕ್ಷರನ್ನು ರಾಜದ್ರೋಹದ ಆಪಾದನೆಯ ಮೇಲೆ ಬಂಧಿಸಿದ್ದಾರೆ. ಇದೊಂದು ಕರಾಳ ಕಲಮು. ರಾಜದ್ರೋಹ ಎಂದರೆ "ಕಾನೂನು ಪ್ರಕಾರ ಸ್ಥಾಪಿಸಿದ ಸರಕಾರದ ವಿರುದ್ಧ ದ್ವೇಷ ಅಥವ ತಿರಸ್ಕಾರವನ್ನು ತರುವಂತಹ ಅಥವ ತರಲು ಯತ್ನಿಸುವಂತಹ, ಅಥವ ಅಸಮಾಧಾನವನ್ನು ಉದ್ರೇಕಿಸುವಂತಹ, ಅಥವ ಉದ್ರೇಕಿಸಲು ಯತ್ನಿಸುವಂತಹ" ಕ್ರಿಯೆ ಎಂದು ಇದು ನಿರೂಪಿಸುತ್ತದೆ. ವಿದ್ಯಾರ್ಥಿ ಸಂಘದ ಅಧ್ಯಕ್ಷರನ್ನು ಮಾತ್ರವಲ್ಲ, ಪ್ರಧಾನ ಕಾರ್ಯದರ್ಶಿಯನ್ನು ಮತ್ತು ಎಡ ವಿದ್ಯಾರ್ಥಿ ಸಂಘಟನೆಗಳ ಇತರ ಮುಖಂಡರನ್ನೂ ಎಫ್‌ಐಆರ್‌ನಲ್ಲಿ ಹೆಸರಿಸಲಾಗಿದೆ.

1962ರಷ್ಟು ಹಿಂದೆಯೇ ಸುಪ್ರಿಂ ಕೋರ್ಟ್ ಹಿಂಸಾಚಾರ ಅಥವ ಸಾರ್ವಜನಿಕ ಅವ್ಯವಸ್ಥೆಯನ್ನು ಪ್ರಚೋದಿಸಿದರೆ ಮಾತ್ರವೇ ರಾಜದ್ರೋಹದ ಆಪಾದನೆ ಅನ್ವಯವಾಗುತ್ತದೆ ಎಂದು ಸ್ಪಷ್ಟಪಡಿಸಿದ್ದರೂ ದಂಡ ಸಂಹಿತೆಯ ವಸಾಹತುಶಾಹೀ ಆಳ್ವಿಕೆಯ ಈ ಅಂಶವನ್ನು ಪ್ರತಿಭಟನೆಗಳನ್ನು, ಪ್ರಜಾಪ್ರಭುತ್ವವಾದಿ ಆಂದೋಲನಗಳನ್ನು ಸದೆ ಬಡಿಯಲು ವ್ಯಾಪಕವಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ.

ಮೋದಿ ಸರಕಾರ ಮತ್ತು ಬಿಜೆಪಿ ಜೆಎನ್‌ಯುನಲ್ಲಿನ 'ರಾಷ್ಟ್ರ-ವಿರೋಧಿ' ಚಟುವಟಿಕೆಗಳನ್ನು ಜಾತ್ಯಾತೀತ-ಪ್ರಜಾಪ್ರಭುತ್ವವಾದಿ ಶಕ್ತಿಗಳ ವಿರುದ್ಧ ಒಂದು ಪ್ರಧಾನ ದಾಳಿಯಾಗಿ ಮಾಡುತ್ತಿದೆ ಎಂಬುದು ಸ್ವಯಂವೇದ್ಯ. ಪಾಟಿಯಾಲ ಹೌಸ್ ಕೋರ್ಟ್ ಆವರಣದಲ್ಲಿ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಪತ್ರಕರ್ತರನ್ನು ಥಳಿಸಿರುವ ಆಘಾತಕಾರೀ ಘಟನೆ, ಅದಕ್ಕೆ ಪೋಲೀಸರು ಮೂಕಪ್ರೇಕ್ಷಕರಾಗಿದ್ದದ್ದು ಈ ಸರಕಾರ ಈ ಸಂಗತಿಯನ್ನು ಹೇಗೆ ನಿರ್ವಹಿಸ ಬಯಸುತ್ತದೆ ಎಂಬುದರ ಒಂದು ಸಂಕೇತವನ್ನು ನೀಡಿದೆ. ಕೇಂದ್ರ ಗೃಹಮಂತ್ರಿ ರಾಜನಾಥ್ ಸಿಂಗ್ ಒಂದು ಕಪಟ ಟ್ವಿಟರ್ ಹ್ಯಾಂಡಲನ್ನು ತೋರಿಸಿ ಹಫೀಝ್ ಸೈಯದ್ ಜೆಎನ್‌ಯು ಚಳುವಳಿಯನ್ನು ಬೆಂಬಲಿಸಿದ್ದಾನೆ ಎಂದು ವಿದ್ಯಾರ್ಥಿಗಳ ಮೇಲೆ ಮಿಥ್ಯಾಪವಾದ ಹಾಕಿದ್ದಾರೆ.

ಆ ಪ್ರತಿಭಟನಾ ಸಭೆಯನ್ನು ಜೆಎನ್‌ಯು ವಿದ್ಯಾರ್ಥಿ ಸಂಘ ಸಂಘಟಿಸಿರಲಿಲ್ಲ ಎಂಬುದು ಸುವಿದಿತ ಸಂಗತಿ. ಸಂಘದ ಮುಂಖಂಡರು ಮತ್ತು ಇತರ ಎಡ ವಿದ್ಯಾರ್ಥಿ ಸಂಘಟನೆಗಳು ಎಬಿವಿಪಿ ಮತ್ತು ಆ ಕಾರ್ಯಕ್ರಮದ ಸಂಘಟಕರ ನಡುವಿನ ಜಗಳವನ್ನು ತಡೆಯಲು ಮಧ್ಯಪ್ರವೇಶಿಸಿದ್ದರಷ್ಟೇ. ಆಕ್ಷೇಪಾರ್ಹ ಘೋಷಣೆಗಳನ್ನು ಕೂಗಲಾಯಿತು ಎನ್ನುವ ಆ ಕಾರ್ಯಕ್ರಮಕ್ಕೂ ಜೆಎನ್‌ಯು ವಿದ್ಯಾರ್ಥಿ ಸಂಘಕ್ಕೂ ಯಾವುದೇ ಸಂಬಂಧ ಇಲ್ಲದಿದ್ದರೂ ಈ ಸಂಘದ ಅಧ್ಯಕ್ಷರು ಮತ್ತು ಇತರ ಪದಾಧಿಕಾರಿಗಳನ್ನೇ ಬಂಧನಕ್ಕೆ ಗುರಿ ಮಾಡಿರುವುದು ಕೇಂದ್ರ ಸರಕಾರ ಮತ್ತು ಬಿಜೆಪಿಯ ಆಶಯವನ್ನು ತೋರಿಸುತ್ತದೆ. ಒಂದು ಸಂಸ್ಥೆಯಾಗಿ ಜೆಎನ್‌ಯು ಮೇಲೆ ಗುರಿಯಿಟ್ಟು ಜಾತ್ಯಾತೀತ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ಕಟಿಬದ್ಧವಾಗಿರುವ ಮತ್ತು ಹಿಂದುತ್ವ ಶಕ್ತಿಗಳಿಗೆ ಕಟ್ಟಾ ವಿರೋಧ ಹೊಂದಿರುವ ಇಡೀ ವಿದ್ಯಾರ್ಥಿ ಸಮುದಾಯವನ್ನು ಶಿಕ್ಷಿಸುವುದು ಅವರ ಆಶಯ.

ಜೆಎನ್‌ಯು ಸದಾ ಒಂದು ಚೈತನ್ಯಶೀಲ ಪ್ರಜಾಸತ್ತಾತ್ಮಕ ವಾತಾವರಣವನ್ನು ಹೊಂದಿದೆ. ಇದು ಆ ವಿಶ್ವವಿದ್ಯಾಲಯವನ್ನು ಪೋಷಿಸಿದೆ. ಫೆಬ್ರುವರಿ 9ರ ಪೋಲೀಸ್ ಕಾರ್ಯಾಚರಣೆ ಇದನ್ನು ಚೂರು ಚೂರು ಮಾಡಿದೆ. ಹೊಸದಾಗಿ ನೇಮಕಗೊಂಡ ಉಪಕುಲಪತಿ ಕ್ಯಾಂಪಸಿನಲ್ಲಿ ಕಾರ್ಯಾಚರಣೆ ನಡೆಸಲು ಸಾರಾಸಗಟು ಅನುಮತಿ ನೀಡಿದರು. ಅಲ್ಲದೆ, ವಿಶ್ವವಿದ್ಯಾಲಯ ಎಂಟು ವಿದ್ಯಾರ್ಥಿಗಳನ್ನು ತನಿಖೆಯ ಫಲಿತಾಂಶ ಬರುವ ವರೆಗೆ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸದಂತೆ ಡಿಬಾರ್ ಮಾಡಿದೆ. ಈ ತನಿಖೆಯೇ ಉಪಕುಲಪತಿಯವರು ಸರಕಾರದ ಒತ್ತಡದಿಂದ ಕೈಗೊಂಡ ಕ್ರಮ.

ಕನ್ಹೈಯ ಕುಮಾರ್ ವಿರುದ್ಧದ ಸುಳ್ಳು ಕೇಸನ್ನು ಹಿಂತೆಗೆದು ಕೊಳ್ಳಬೇಕು ಮತ್ತು ವಿದ್ಯಾರ್ಥಿಗಳ ಮೇಲಿನ ಸುಳ್ಳು ಕೇಸುಗಳನ್ನು ಹಿಂತೆಗೆದುಕೊಳ್ಳಬೇಕು. ಇದು ದೇಶದ ಎಲ್ಲ ಪ್ರಜಾಪ್ರಭುತ್ವವಾದಿ ವಿಭಾಗಗಳ ಬೇಡಿಕೆ. ಕನ್ಹೈಯ ಮೊಕದ್ದಮೆ ಈಗ ಹಿಂದುತ್ವ ದಾಳಿಯ ವಿರುದ್ಧ ಹೋರಾಟದ ಒಂದು ಸಂಕೇತವಾಗಿದೆ.

ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಈ ಪ್ರಹಾರವನ್ನು ಎದುರಿಸಿ ಹಿಮ್ಮೆಟ್ಟಿಸಲು ಐಕ್ಯತೆಯಿಂದ ನಿಂತಿದ್ದಾರೆ, ಎಬಿವಿಪಿ ಮತ್ತು ಆರೆಸ್ಸೆಸ್ ಮಂದಿಯಷ್ಟೇ ಇದಕ್ಕೆ ಅಪವಾದ. ಅವರಿಗೆ ದೇಶದ ಎಲ್ಲ ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಮತ್ತು ಪ್ರಗತಿಶೀಲ ಶಕ್ತಿಗಳು ಸಂಪೂರ್ಣ ಬೆಂಬಲವನ್ನು ಕೊಡಬೇಕಾಗಿದೆ. ಏಕೆಂದರೆ ಇದು ಕೇವಲ ಜೆಎನ್‌ಯುನ ಹೋರಾಟವಷ್ಟೇ ಅಲ್ಲ, ಇದು ಒಂದು ಪ್ರತಿಗಾಮಿ ಕೋಮುವಾದಿ ಸಿದ್ಧಾಂತ ಮತ್ತು ತರ್ಕಹೀನತೆಯ ವಿರುದ್ಧದ ಒಂದು ವ್ಯಾಪಕ ಸಮರ. ಹೀಗೆ ಜೆಎನ್‌ಯು ರಕ್ಷಿಸುವ ಸಮರ, ಹಿಂದುತ್ವ ಸರ್ವಾಧಿಕಾರಶಾಹಿಯ ವಿರುದ್ಧದ ವ್ಯಾಪಕ ಸಮರದ ಒಂದು ಭಾಗ.

ಸರ್ಕಾರ ಭಿನ್ನಮತವನ್ನು ಹತ್ತಿಕ್ಕುವ ಪ್ರಜಾಪ್ರಭುತ್ವ-ವಿರೋಧಿ ಕಾರ್ಯಸೂಚಿಯನ್ನು ತೆರೆದಿಟ್ಟಿದೆ

– ಪ್ರೊ. ಪುರುಷೋತ್ತಮ ಬಿಳಿಮಲೆ

ಈಗ ಜೆಎನ್‌ಯು ಕವಲು ಹಾದಿಯಲ್ಲಿದೆ. ಅದಕ್ಕೀಗ ಎರಡು ಬಗೆಯ ಚರಿತ್ರೆಗಳನ್ನು ಬರೆಯಲಾಗುತ್ತಿದೆ. 2014ರ ಮಹಾಚುನಾವಣೆಗಿಂತ ಮೊದಲಿನ ಚರಿತ್ರೆಯಲ್ಲಿ ಈ ವಿಶ್ವವಿದ್ಯಾಲಯವನ್ನು ಒಂದು ಬೌದ್ಧಿಕ ಕೇಂದ್ರವಾಗಿ ದೇಶಕ್ಕೆ ಪರಿಚಯಿಸಲಾಗುತ್ತಿತ್ತು.

ಚರ್ಚೆ, ವಾಗ್ವಾದ ಮತ್ತು ಆರೋಗ್ಯಕರ ಭಿನ್ನಮತಗಳ ಮೂಲಕ ಇಲ್ಲಿನ ಜಗತ್ತು ದಿನಾ ತೆರೆದುಕೊಳ್ಳುತ್ತದೆ. ಸದಾ ಉರಿಯುತ್ತಿರುವ ಕಾಶ್ಮೀರ ಸಮಸ್ಯೆ, ಬೆಳೆಯುತ್ತಿರುವ ಆತಂಕವಾದ, ನಿವಾರಿಸಿಕೊಳ್ಳಲಾಗದ ಬಡತನ, ದಲಿತರ ಮಾರಣ ಹೋಮ, ಬೆಳೆಯುತ್ತಿರುವ ಕೋಮುವಾದ ಮೊದಲಾದ ವಿಷಯಗಳ ಮೇಲೆ ಇಲ್ಲಿ ನಿತ್ಯ ಚರ್ಚೆ ನಡೆಯುತ್ತದೆ. ಅದಕ್ಕೆ ಸಂಬಂಧಿಸಿದ ಸಾಕ್ಷ್ಯಚಿತ್ರಗಳ ಪ್ರದರ್ಶನ, ಪೋಸ್ಟರ್‌ಗಳ ರಚನೆ, ಕವಿತೆಗಳ ಬರಹ ಇಲ್ಲಿನ ನಿತ್ಯ ಚಟುವಟಿಕೆಗಳು. ಇಷ್ಟಿದ್ದರೂ ಈ ಕಾರಣಕ್ಕೆ ಇಲ್ಲಿ ಹುಡುಗರ ನಡುವೆ ಹೊಡೆದಾಟವಾಗಿಲ್ಲ.

ಯಾರೂ ರಾಷ್ಟ್ರದ್ರೋಹಕ್ಕೆ ಗುರಿಯಾಗಿ ಗಲ್ಲು ಕಂಬ ಏರಿಲ್ಲ. ಈ ಕಾರಣಕ್ಕಾಗಿಯೋ ಏನೋ ಜಗತ್ತಿನಾದ್ಯಂತ ವಿದ್ಯಾರ್ಥಿಗಳು ಇಲ್ಲಿಗೆ ಬರಲು ಇಚ್ಛಿಸುತ್ತಾರೆ. ಎಡ ಆಗಲಿ, ಬಲವಾಗಲಿ ಇಲ್ಲಿನ ಮಕ್ಕಳು ನಾವು ಜೆಎನ್‌ಯುವಿನಲ್ಲಿ ಕಲಿತವರು ಎಂದು ಹೇಳಲು ಸಂಕೋಚ ಪಟ್ಟುಕೊಳ್ಳುವುದಿಲ್ಲ. ಒಂದು ದೇಶದ ಪ್ರಗತಿಯನ್ನು ಅದರ ಬೌದ್ಧಿಕ ಬೆಳವಣಿಗೆಯ ಮೂಲಕ ಗುರುತಿಸುವ ಕ್ರಮವಿದ್ದರೆ, ಅಂಥ ಕಡೆ ಜೆಎನ್‌ಯುವಿಗೆ ಒಂದು ಪ್ರಮುಖ ಸ್ಥಾನವಿದೆ. ಅಂಥ ಸ್ಥಾನ ಪಡೆಯಲು ಬೇಕಾದ ಎಲ್ಲ ಅರ್ಹತೆ ಈ ವಿಶ್ವವಿದ್ಯಾಲಯಕ್ಕಿದೆ.

ಆದರೆ 2014ರ ಮೇ ಚುನಾವಣೆಯ ನಂತರ ದೇಶದ ಇತಿಹಾಸವನ್ನು ಬರೆಯುವ ಕ್ರಮ ಬದಲಾಗುತ್ತಿರುವಂತೆ ಜೆಎನ್‌ಯುವಿಗೆ ಹೊಸ ಚರಿತ್ರೆಯನ್ನು ಕೆಲವರು ಬರೆಯಲಾರಂಭಿಸಿದರು. ಇಂಥ ಪರಿಸ್ಥಿತಿಯಲ್ಲಿ ಜೆಎನ್‌ಯು ಖಳನಾಯಕರನ್ನು ಸೃಷ್ಟಿಸುವ ಕೇಂದ್ರವಾಗಿ ಅಧಿಕಾರದಲ್ಲಿರುವವರಿಗೆ ಮತ್ತು ಅವರನ್ನು ಅಂಧವಾಗಿ ಅನುಸರಿಸುವವರಿಗೆ ಕಾಣತೊಡಗಿತು. ಈ ಹೊಸ ಚರಿತ್ರೆಯ ಪ್ರಕಾರ ಅದು ದೇಶದ್ರೋಹಿಗಳ ಸಂತೆ. ಈ ಮಾತನ್ನು ಅಲ್ಲಿ ಯಾವ ಘಟನೆಯೂ ನಡೆಯುವ ಮುನ್ನವೇ ಆಗಾಗ ಹೇಳಲಾಗುತ್ತಿತ್ತು. ಬುದ್ಧಿಜೀವಿಗಳನ್ನು ದ್ವೇಷಿಸುವ ಜನಗಳ ನಡುವೆ ಸಂಶೋಧನೆಗಳಿಗೆ ಮಹತ್ವ ಸಿಗದಿರುವುದು ಅಸಹಜವೇನಲ್ಲ.

ಕಳೆದ ಕೆಲವು ದಿನಗಳಲ್ಲಿ ವಿಶ್ವವಿದ್ಯಾಲಯದ ಆವರಣದಲ್ಲಿ ನಡೆದ ಅನಪೇಕ್ಷಿತ ಘಟನೆಗಳನ್ನು ಆಧರಿಸಿ ಸರ್ಕಾರವು ಯಾವುದೇ ಭಿನ್ನಮತವನ್ನು ಹತ್ತಿಕ್ಕುವ ತನ್ನ ಪ್ರಜಾಪ್ರಭುತ್ವ ವಿರೋಧಿ ಕಾರ್ಯಸೂಚಿಯನ್ನು ನಾಚಿಕೆಯಿಲ್ಲದೆ ಜಗತ್ತಿನ ಮುಂದೆ ತೆರೆದಿಟ್ಟಿತು.

(ಕೃಪೆ : ಪ್ರಜಾವಾಣಿ ಫೆ. 18)

ಜೆಎನ್‌ಯು ಮೇಲೆ ದಾಳಿ ಸಂವಿಧಾನದ ವಿರುದ್ಧ ಒಂದು ದಂಗೆಯ ಆರಂಭದಂತೆ ಕಾಣುತ್ತದೆ.

–ಪ್ರೊ. ಪ್ರಭಾತ್ ಪಟ್ನಾಯಕ್

ಇದು ಒಂದು ದಂಗೆಯ ಸನ್ನಿವೇಶ. ಮೂಲತಃ ಇದು ನಗರವನ್ನು ಕೈವಶ ಮಾಡಿಕೊಳ್ಳುವ, ಮತ್ತು ಯಾರೂ ಅದರ ವಿರುದ್ಧ ಪ್ರತಿಭಟಿಸದಂತೆ ಮಾಡುವ ಪ್ರಯತ್ನ. 'ರಾಷ್ಟ್ರವಾದ'ದ ಹೆಸರಲ್ಲಿ ಈ ರೀತಿ 'ನಗರದ ಕೈವಶ' ಒಂದು ರೀತಿಯ ದಂಗೆ, ಇದು ಜೆಎನ್‌ಯು ಮತ್ತು ದಿಲ್ಲಿಯಿಂದ ಆರಂಭವಾಗುತ್ತಿದೆ.




ಆದರೆ, ಇನ್ನೊಂದೆಡೆಯಲ್ಲಿ, ಮುಂದಿನ ಮೂರು ದಿನಗಳಲ್ಲಿ ಈ ಪ್ರಶ್ನೆಯ ಮೇಲೆ ಜನರನ್ನು ಅಣಿನೆರೆಸುತ್ತೇವೆ ಎಂದು ಅವರು ಹೇಳುತ್ತಿರುವುದನ್ನು ನೋಡಿದರೆ, ಅವರು ಈ ಪ್ರಚಾರವನ್ನು ದೇಶಾದ್ಯಂತ ಒಯ್ಯುವಂತೆ ಕಾಣುತ್ತದೆ. ಇದು ಈ ದಂಗೆಯನ್ನು ಜೆಎನ್‌ಯು ಮತ್ತು ದಿಲ್ಲಿಯಿಂದ ದೇಶದ ಇತೆರೆಡೆಗಳಲ್ಲಿ ಹರಡಿಸುವ ಒಂದು ಪ್ರಯತ್ನವಲ್ಲದೆ ಬೇರೇನೂ ಅಲ್ಲ.

ಅಂದರೆ ಜೆಎನ್‌ಯು ಮೇಲೆ ದಾಳಿ ನನಗೆ ಭಾರತೀಯ ಸಂವಿಧಾನದ ವಿರುದ್ಧ ಒಂದು ದಂಗೆಯ ಆರಂಭದಂತೆ ಕಾಣುತ್ತದೆ.

ಆದರೆ ಇಲ್ಲಿ ಕಾಣುತ್ತಿರುವ ವಿದ್ಯಾರ್ಥಿಗಳ, ಅಧ್ಯಾಪಕರ ಐಕ್ಯತೆ, ಅವರಿಗೆ ಅಡ್ಡಿಯಾಗಿದೆ. ವಿದ್ಯಾರ್ತಿಗಳು ಭಯಭೀತರಾಗಿಲ್ಲ, ಅಧ್ಯಾಪಕರು ಭಯಭೀತರಾಗಿಲ್ಲ. ದೇಶದ ಇತರೆಡೆಗಳಿಮದಲೂ ಹೆಚ್ಚೆಚ್ಚು ಅಧ್ಯಾಪಕರು ಜೆಎನ್‌ಯು ಬೆಂಬಲಕ್ಕೆ ನಿಲ್ಲುತ್ತಿದ್ದಾರೆ. ಜೆಎನ್‌ಯು ಮೇಲೆ ದಾಳಿಯೊಂದಿಗೆ ಆರಂಭಿಸುವ ಸಂವಿಧಾನವನ್ನು ನಾಶಗೊಳಿಸುವ ಈ ಯೋಜನೆಯನ್ನು ಸೋಲಿಸಲಾಗುತ್ತದೆ

–ಜೆಎನ್‌ಯು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತಾಡುತ್ತ

'ಅಚ್ಛೇ ದಿನ್' ಘೋಷಣೆಯ ವೈಫಲ್ಯ ಮುಚ್ಚಿಕೊಳ್ಳಲು ಹುಸಿ ದೇಶಪ್ರೇಮದ ಗುರಾಣಿ



ವ್ಯಂಗ್ಯಚಿತ್ರ ಕೃಪೆ : ಸುರೇಂದ್ರ ದಿ. ಹಿಂದೂ

ಮೋದಿ ಸರಕಾರದ 'ಅಚ್ಛೆ ದಿನ'ಗಳ ಕನಸು ಒಡೆದಿದೆ. ಮಾರುಕಟ್ಟೆ ಕುಸಿತ, ಕಪ್ಪು ಹಣ ವಾಪಸಿ ವೈಫಲ್ಯ, ರೂಪಾಯಿ ಕುಸಿತ, ಪಠಾಣಕೋಟ್ ವೈಫಲ್ಯ, ಅಸೆಂಬ್ಲಿ ಚುನಾವಣೆ ಸೋಲು, ಬರುತ್ತಿರುವ ಕಟುಜನ–ವಿರೋಧಿ ಬಜೆಟಿನ – ಇವುಗಳ ಹಿನ್ನೆಲೆಯಲ್ಲಿ ಹೀಗೆ ಬೇರೆಡೆಗೆ ಗಮನ ಹರಿಸುವುದು ಅನಿವಾರ್ಯವಾಗಿದೆ. 'ಅಚ್ಛೆ ದಿನ'ಗಳ ಕನಸು ನನಸು ಮಾಡುವಲ್ಲಿ ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಹುಸಿ ದೇಶಪ್ರೇಮ ಗುರಾಣಿಯಾಗಿದೆ.

ಜಿ. ವಿ. ಶ್ರೀರಾಮರೆಡ್ಡಿ

ಒಂದು ಸಮಾಜವನ್ನು ಮುಂದೊಯ್ಯುವ ಹೊಸ ಯೋಚನೆಗಳು, ಸಿದ್ಧಾಂತಗಳು, ಅವಿಷ್ಕಾರಗಳು ಹುಟ್ಟುವುದು ವಿದ್ಯಾರ್ಥಿ ಸಮುದಾಯದಲ್ಲಿ. ಅದರಲ್ಲೂ ಉನ್ನತ ಶಿಕ್ಷಣ ಮತ್ತು ಸಂಶೋಧನೆಗಳ ಕೇಂದ್ರಗಳಾದ ವಿಶ್ವವಿದ್ಯಾಲಯಗಳಲ್ಲಿ. ಸಮಾಜ ಬದಲಾಯಿಸುವ ಹೊಸ ಚಳುವಳಿಗಳು ಹುಟ್ಟುವುದು ಅಥವಾ ಪ್ರಧಾನವಾಗಿ ಬಲಗೊಳ್ಳುವುದು ಹೆಚ್ಚಾಗಿ ವಿಶ್ವವಿದ್ಯಾಲಯಗಳಲ್ಲೇ. ಅಲ್ಲಿ ಹಲವು ಯೋಚನೆಗಳು, ಸಿದ್ಧಾಂತಗಳು ಹಾಗೂ ಅವುಗಳ ನಡುವೆ ಸಂಘರ್ಷ ಇಲ್ಲದೆ ಹೊಸದು ಹುಟ್ಟಲಾರದು. ಆದ್ದರಿಂದಲೇ ಪ್ರಜಾಸತ್ತಾತ್ಮಕ ಸಮಾಜಗಳಲ್ಲಿ ವಿಶ್ವವಿದ್ಯಾಲಯಗಳ ಸ್ವಾಯತ್ತತೆಗೆ ಪ್ರಾಮುಖ್ಯತೆ ಕೊಡಲಾಗಿದೆ.

ಐ.ಐ.ಟಿ.–ಚೆನ್ನೈ, ಎಫ್.ಟಿ.ಐ.ಐ., ಹೈದರಾಬಾದ್, ಜೆ.ಎನ್.ಯು.ಗಳಲ್ಲಿ ಪ್ರಧಾನವಾಗಿ ಮುನ್ನೆಲೆಗೆ ಬಂದಿರುವ ವಿಷಯ ವಿಶ್ವವಿದ್ಯಾಲಯಗಳ ಸ್ವಾಯತ್ತತೆಯ ಹರಣದ್ದು. ಈ ಎಲ್ಲಾ ಪ್ರಕರಣಗಳಲ್ಲಿ ವಿವಿಧ ವಿಧಾನಗಳಿಂದ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ, ಪ್ರಾಧ್ಯಾಪಕರ ಮತ್ತು ಆಡಳಿತದ ಹಕ್ಕುಗಳ ಹಾಗೂ ಸ್ವಾಯತ್ತತೆಯ ಹರಣ ಮಾಡಲಾಗಿದೆ. ಆಳುವ ಪಕ್ಷದ ವಿದ್ಯಾರ್ಥಿ ಸಂಘಟನೆ, ಶಾಸಕರು, ಮಂತ್ರಿಗಳು ಶಾಮೀಲಾಗಿ ಅಲ್ಲಿ ಹಸ್ತಕ್ಷೇಪ ನಡೆಸಿವೆ. ವಿಶ್ವವಿದ್ಯಾಲಯಗಳ ಸ್ವಾಯತ್ತತೆಯ ಹರಣವನ್ನು ಮುಚ್ಚಿಕೊಳ್ಳಲಷ್ಟೇ 'ರಾಷ್ಟ್ರೀಯವಾದ', 'ದೇಶ–ವಿರೋಧಿ ಶಕ್ತಿಗಳ' ವಿಷಯವನ್ನು ಮುಂದೊಡ್ಡಲಾಗುತ್ತಿದೆ. ವಿಶ್ವವಿದ್ಯಾಲಯಗಳ ಅನುದಾನ, ಸ್ಕಾಲರ್‌ಶಿಪ್‌ಗಳಲ್ಲೂ ತೀವ್ರಕಡಿತ ಮತ್ತು ಇತರ ಸಮಸ್ಯೆಗಳಿಂದ ವಿದ್ಯಾರ್ಥಿಗಳಲ್ಲಿ ಹರಡಿರುವ ತೀವ್ರ ಅತೃಪ್ತಿಯನ್ನು ಬೇರೆಡೆಗೆ ತಿರುಗಿಸುವ ಹುನ್ನಾರವೂ ಇಲ್ಲದಿದೆ. ಸಾರ್ವಜನಿಕ ವಿಶ್ವವಿದ್ಯಾಲಯಗಳನ್ನು ಮುಚ್ಚಿ ಡಬ್ಲ್ಯೂ.ಟಿ.ಒ. ನಿರ್ದೇಶನದಂತೆ ಉಚ್ಛ ಶಿಕ್ಷಣವನ್ನು ಖಾಸಗಿ ವಿದೇಶಿ ಬಂಡವಾಳಕ್ಕೆ ತೆರೆಯುವ ದುರುದ್ದೇಶವೂ ಇದೆ.

ವಿಶ್ವವಿದ್ಯಾಲಯಗಳ ಸ್ವಾಯತ್ತತೆ ಮೇಲೆ ದಾಳಿ

ಶಿಕ್ಷಣದ ಕೋಮುವಾದೀಕರಣದ ಇಂದಿನ ಸರಕಾರದ ಪ್ರಾಜೆಕ್ಟನ್ನು ಉನ್ನತ ಶಿಕ್ಷಣದ ವಲಯದಲ್ಲಿ ಹೇರಲು ಸಾಧ್ಯವಾಗುತ್ತಿಲ್ಲ. ಎ.ಬಿ.ವಿ.ಪಿ.ಗೆ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಮನ್ನಣೆ ಪಡೆಯಲು ಸಾಧ್ಯವಾಗಿಲ್ಲ–ವಿಶೇಷವಾಗಿ ಈಗ ಆಳುವ ಪಕ್ಷದ ಪರಿವಾರಕ್ಕೆ ಸೇರಿದ ಸಂಘಟನೆಯಾಗಿ ಸರಕಾರದ ವಿದ್ಯಾರ್ಥಿ–ವಿರೋಧಿ, ಜನ–ವಿರೋಧಿ ಕ್ರಮಗಳನ್ನು ಸಮರ್ಥಿಸಿಕೊಳ್ಳಬೇಕಾಗಿರುವುದರಿಂದ. ಎಡಪಂಥೀಯ ಮತ್ತು ಅಂಬೇಡ್ಕರ್‌ವಾದಿ ವಿದ್ಯಾರ್ಥಿ ಚಳುವಳಿಯ ಧಾರೆಗಳು ಹಲವು ಕಡೆ ಒಟ್ಟಾಗಿ ಎ.ಬಿ.ವಿ.ಪಿ.ಯನ್ನು ವಿದ್ಯಾರ್ಥಿ ಸಂಘದ ಚುನಾವಣೆಗಳಲ್ಲಿ ಸೋಲಿಸಿರುವುದು, ಮತ್ತು ಐಕ್ಯ ಪ್ರಜಾಸತ್ತಾತ್ಮಕ ಚಳುವಳಿ ಕಟ್ಟುತ್ತಿರುವುದು ಅದಕ್ಕೆ ಭೀತಿಯನ್ನು ಉಂಟು ಮಾಡಿದೆ. ಇವು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಗಂಭೀರವಾಗಿ ಎತ್ತಿಕೊಂಡಿರುವುದೂ ಅದಕ್ಕೆ ನಡುಕ ತಂದಿದೆ. ಎ.ಬಿ.ವಿ.ಪಿ.ಯ ಹಣದ ಬಲ, ಗೂಂಡಾಗಿರಿ ಮತ್ತು ಕೋಮುವಾದಿ–ಜಾತಿವಾದಿ ಧ್ರುವೀಕರಣದ ತಂತ್ರಗಳು ಅಲ್ಲಿ ಫಲ ಕೊಡುತ್ತಿಲ್ಲ. ಆದ್ದರಿಂದ ಹತಾಶವಾಗಿ ಎಬಿವಿಪಿ ಸರಕಾರಿ ಯಂತ್ರವನ್ನು ದುರ್ಬಳಕೆ ಮಾಡಲು ಹೊರಟಿದೆ. ಉನ್ನತ ಶಿಕ್ಷಣದ ವಿಶ್ವವಿದ್ಯಾಲಯಗಳಿಗೆ 'ದೇಶ–ವಿರೋಧಿ' 'ದೇಶ–ದ್ರೋಹ'ದ ಹಣೆಪಟ್ಟಿ ಹಚ್ಚಿ ಅಲ್ಲಿನ ವಿದ್ಯಾರ್ಥಿಗಳ ಪ್ರಾಧ್ಯಾಪಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಪೂರ್ಣವಾಗಿ ಕಿತ್ತುಕೊಳ್ಳುವುದು ಅದರ ನಿಜವಾದ ಉದ್ದೇಶ.

ಇದಕ್ಕಾಗಿ ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳು ಮತ್ತು ಎಡಪಂಥದ ಮೇಲೆ 'ದೇಶ–ವಿರೋಧಿ' 'ದೇಶ–ದ್ರೋಹ'ದ ಹಣೆಪಟ್ಟಿ ಹಚ್ಚಲು ವ್ಯವಸ್ಥಿತ ಪ್ರಯತ್ನ ನಡೆದಿದೆ. ಆರೆಸ್ಸೆಸ್‌ನ ನೇರ ನಾಯಕತ್ವದಲ್ಲಿ ಎಬಿವಿಪಿ ಬಿಜೆಪಿ ಸೇರಿದಂತೆ ಸಂಘ ಪರಿವಾರದ ಸಂಘಟನೆಗಳು, ಕೇಂದ್ರ ಸರಕಾರ, ಹಾಗೂ ಮಾಧ್ಯಮದ ಒಂದು ವಿಭಾಗ ಈ ವ್ಯವಸ್ಥಿತ ಪ್ರಯತ್ನದ ಭಾಗವಾಗಿವೆ. ಮೋದಿ ಸರಕಾರದ 'ಅಚ್ಛೆ ದಿನ'ಗಳ ಕನಸು ಒಡೆದಿದೆ. ಮಾರುಕಟ್ಟೆ ಕುಸಿತ, ಕಪ್ಪು ಹಣ ವಾಪಸಿ ವೈಫಲ್ಯ, ರೂಪಾಯಿ ಕುಸಿತ, ಪಠಾಣ–ಕೋಟ್ ವೈಫಲ್ಯ, ಅಸೆಂಬ್ಲಿ ಚುನಾವಣೆ ಸೋಲು, ಬರುತ್ತಿರುವ ಕಟು ಜನ–ವಿರೋಧಿ ಬಜೆಟ್ ಇವುಗಳ ಹಿನ್ನೆಲೆಯಲ್ಲಿ ಹೀಗೆ ಬೇರೆಡೆಗೆ ಗಮನ ಹರಿಸುವುದು ಅನಿವಾರ್ಯವಾಗಿದೆ. 'ಅಚ್ಛೆ ದಿನ'ಗಳ ಕನಸು ನನಸು ಮಾಡುವಲ್ಲಿ ತನ್ನ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಹುಸಿ ದೇಶಪ್ರೇಮ ಗುರಾಣಿಯಾಗಿದೆ.

ಸ್ವಾತಂತ್ರ್ಯ ಚಳುವಳಿಯಲ್ಲಿ ಈ ದೇಶಪ್ರೇಮಿಗಳು ಎಲ್ಲಿದ್ದರು?

ಎಡಪಂಥೀಯ ವಿದ್ಯಾರ್ಥಿ ಸಂಘಟನೆಗಳು ಮತ್ತು ಎಡಪಂಥೀಯರು 'ದೇಶ–ವಿರೋಧಿ'ಗಳೇ? 'ದೇಶ–ದ್ರೋಹ'ದಲ್ಲಿ ತೊಡಗಿರುವ ಪ್ರತ್ಯೇಕತಾವಾದಿಗಳನ್ನು ಬೆಂಬಲಿಸುತ್ತಾರೆಯೇ? ಭಾರತದ ಎಡಪಂಥೀಯರ ಚರಿತ್ರೆಯನ್ನು ವಸ್ತುನಿಷ್ಟವಾಗಿ ನೋಡಿದ ಯಾರಿಗೂ ಹಾಗನಿಸದು. ಸ್ವಾತಂತ್ರ್ಯ ಚಳುವಳಿಯಲ್ಲಿ ಎಡಪಂಥೀಯರ ಪಾತ್ರ ದೊಡ್ಡದು. ಕಾಂಗ್ರೆಸ್ ಇನ್ನೂ 'ಡೊಮಿನಿಯನ್' ಸ್ಥಾನಮಾನ ಕೇಳುತ್ತಿದ್ದಾಗ 1921ರ ಕಾಂಗ್ರೆಸ್ ಅಧಿವೇಶನದಲ್ಲಿ 'ಸಂಪೂರ್ಣ ಸ್ವಾತಂತ್ರ್ಯ'ದ ಠರಾವು ಮಂಡಿಸಿದ್ದು ಮೌಲಾನಾ ಹಸ್ರತ್ ಮೊಹಾನಿ ಮತ್ತು ಸ್ವಾಮಿ ಕುಮಾರಾನಂದ ಎಂಬ ಎಡಪಂಥೀಯರು. ಭಾರತದ ಎಡಪಂಥ ರೂಪುಗೊಂಡದ್ದೇ ಸ್ವಾತಂತ್ರ್ಯ ಚಳುವಳಿಯ ಹಲವು ಸಮರಶೀಲ ಜನಪರ ತೊರೆಗಳು ಸೇರಿ. ಅನಿವಾಸಿ ಪಂಜಾಬಿಗಳ ಗದರ್ ಚಳುವಳಿ, ಭಗತ್ ಸಿಂಗ್, ಚಂದ್ರಶೇಖರ ಆಝಾದ್ ಮತ್ತು ಆತನ ಸಂಗಾತಿಗಳು ಕಟ್ಟಿದ ಹಿಂದುಸ್ತಾನ್ ಸೋಶಲಿಸ್ಟ್ ರಿಪಬ್ಲಿಕನ್ ಆರ್ಮಿಯ ಸದಸ್ಯರು, ಬಂಗಾಳದ ಚಿತ್ತಗಾಂಗ್ ಶಸ್ತ್ರಾಗಾರ ಚಳುವಳಿ ಹಾಗೂ ಅನುಶೀಲನ್ ಮುಂತಾದ ಕ್ರಾಂತಿಕಾರಿ ಗುಂಪುಗಳ ಸದಸ್ಯರು, ಅಂಡಮಾನಿನಲ್ಲಿ ಕರಿನೀರಿನ ಶಿಕ್ಷೆಗೆ ಒಳಗಾಗಿದ್ದ ಗುಂಪುಗಳ ಸದಸ್ಯರು ಸೇರಿ ಭಾರತದ ಎಡಪಂಥ ರೂಪುಗೊಂಡಿತ್ತು. ದೇಶದಾದ್ಯಂತ (ವಿಶೇಷವಾಗಿ ಕೇರಳ, ಆಂಧ್ರ, ಮದ್ರಾಸ್‌ಗಳಲ್ಲಿ) ದುಡಿಯುವ ಜನರ ಹಕ್ಕುಗಳ ರಕ್ಷಣೆಗೆ ಹೋರಾಟ ಮಾಡುತ್ತಾ ಸಾಮ್ರಾಜ್ಯಶಾಹಿ–ವಿರೋಧಿ ಚಳುವಳಿಯಲ್ಲಿ ತೊಡಗಿಸಿ ಕೊಂಡವರೂ ಇದರಲ್ಲಿ ಸೇರಿದರು. ಹಿರಿಯ ಎಡಪಂಥೀಯ ನಾಯಕರಾದ ಇ.ಎಂ.ಎಸ್., ಹರಿಕಿಶನ್ ಸಿಂಗ್ ಸುರ್ಜಿತ್, ಜ್ಯೋತಿ ಬಸು, ಎಲ್ಲರೂ ಸ್ವಾತಂತ್ರ್ಯ ಹೋರಾಟದ ಹಿನ್ನೆಲೆಯಿಂದ ಬಂದವರು. ಎಡಪಂಥೀಯರ ದೇಶಪ್ರೇಮದ ಬಗ್ಗೆ ಇಷ್ಟು ಪುರಾವೆ ಸಾಕಲ್ಲವೇ?

ಇನ್ನು, ಸ್ವಾತಂತ್ರ್ಯ ಚಳುವಳಿಯಲ್ಲಿ ಆರೆಸ್ಸೆಸ್, ಹಿಂದೂ ಮಹಾಸಭಾ ಮತ್ತು ಇತರ ಬಲಪಂಥೀಯ ಸಂಘಟನೆಗಳ ಪಾತ್ರ ಏನು? ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ ಒಬ್ಬನೇ ಒಬ್ಬ ನಾಯಕ ಅಥವಾ ಕಾರ್ಯಕರ್ತನ ಹೆಸರು ಅವರು ಹೇಳಲಿ. ಸಾರಿ..ಸಾರಿ..ಇದ್ದಾರೆ! ಇಬ್ಬರು ಇದ್ದಾರೆ! ಕರಿನೀರಿನ ಶಿಕ್ಷೆಗೆ ಒಳಗಾಗಿ ಇನ್ನು ಮುಂದೆ ಯಾವುದೇ ಬ್ರಿಟಿಶ್–ವಿರೋಧಿ ಚಳುವಳಿಯಲ್ಲಿ ಭಾಗವಹಿಸುವುದಿಲ್ಲವೆಂದು ಮುಚ್ಚಳಿಕೆ ಬರೆದುಕೊಟ್ಟ ಹಿಂದುತ್ವದ ಐಕಾನ್ ಆದ ಸಾವರ್ಕರ್! 1942 ಕ್ವಿಟ್‌ಇಂಡಿಯಾ ಚಳುವಳಿಯಲ್ಲಿ ಅಕಸ್ಮಾತ್ತಾಗಿ ಪೋಲೀಸರ ಕೈಗೆ ಸಿಕ್ಕಿ ಹಾಕಿಕೊಂಡು ನಾನು ಚಳುವಳಿಯಲ್ಲಿ ಪಾಲುಗೊಳ್ಳಲಿಲ್ಲ ಎಂದು ಹೇಳಿಕೆ ಕೊಟ್ಟ ಅಟಲ್ ಬಿಹಾರಿ ವಾಜಪೇಯಿ! ಇದು ಆರೆಸ್ಸೆಸ್ ಮತ್ತು ಬಲಪಂಥೀಯರ ದೇಶಪ್ರೇಮದ ರೆಕಾರ್ಡು. ಮಾತ್ರವಲ್ಲ ಸೈದ್ಧಾಂತಿಕವಾಗಿ ಅವರು ಬ್ರಿಟಿಷರ ಪರ ಇದ್ದವರು. **"ಹಿಂದುಗಳೇ, ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ನಿಮ್ಮ ಶಕ್ತಿ ವ್ಯರ್ಥ ಮಾಡಬೇಡಿ. ನಮ್ಮ ಆಂತರಿಕ ಶತ್ರುಗಳಾದ ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಕಮ್ಯುನಿಸ್ಟರ ವಿರುದ್ಧ ಹೋರಾಟಕ್ಕೆ ಆ ಶಕ್ತಿ ಬಳಸಿ"** ಎಂದವರು ಆರೆಸ್ಸೆಸ್ ಸೈದ್ಧಾಂತಿಕ ಗುರು ಗೋಲ್ವಾಲ್ಕರ್.

ಆದ್ದರಿಂದಲೇ ತಾನೇ ಸಂಘ ಪರಿವಾರ ಭಗತ್ ಸಿಂಗ್, ಆಝಾದ್, ನೇತಾಜಿ, ಸರ್ದಾರ್ ಪಟೇಲ್ ಮತ್ತು ಈಗ ಡಾ.ಅಂಬೇಡ್ಕರ್ ಅವರನ್ನು 'ತಮ್ಮವ'ರಾಗಿಸಿಕೊಳ್ಳುವ ಹಾಸ್ಯಾಸ್ಪದ ಪ್ರಯತ್ನ ನಡೆಸುತ್ತಿರುವುದು?

ತ್ರಿವರ್ಣ ಧ್ವಜ – ಕೆಡುಕು, ಹಾನಿಕಾರಕ ಎಂದ ಆರ್ಗನೈಜರ್!

ಗುರುವಿನ ಕರೆಯಂತೆ ಬ್ರಿಟಿಷರ ದೇಶ ಒಡೆಯುವ ನೀತಿಗೆ ಬೆಂಬಲಾರ್ಥವಾಗಿ ಇವರು ಹಿಂದು–ಮುಸ್ಲಿಂ ಕೋಮುದಂಗೆಗಳನ್ನು ಸಂಘಟಿಸುತ್ತಾ ಬಂದವರು. 'ಹಿಂದೂರಾಷ್ಟ್ರ' ಘೋಷಣೆ ಕೊಡುವ ಮೂಲಕ ದೇಶದ ವಿಭಜನೆಗೆ ಕರೆಕೊಟ್ಟಿದ್ದು ಮೊದಲು ಸಾವರ್ಕರ್. ಜಿನ್ನಾ 'ಪಾಕಿಸ್ತಾನ'ದ ಘೋಷಣೆಯೊಂದಿಗೆ ಅವರನ್ನು ಹಿಂಬಾಲಿಸಿದರಷ್ಟೇ. ದೇಶ ವಿಭಜನೆಯ ದುರಂತಕಾರಿ ಪ್ರಕ್ರಿಯೆಯನ್ನು ಆರಂಭಿಸಿದ್ದರ ಜವಾಬ್ದಾರಿ ಸಾವರ್ಕರ್ ಜಿನ್ನಾ ಇಬ್ಬರದ್ದೂ. ಸಂಘ ಪರಿವಾರದ ಪ್ರಥಮ ರಾಜಕೀಯ ನಾಯಕನಾದ ಡಾ. ಶ್ಯಾಮಪ್ರಸಾದ ಮುಖರ್ಜಿ ಕೋಮು ದಂಗೆಗಳಿಂದ ನಲುಗಿ ಹೋಗಿದ್ದ ವಿಭಜನ–ಪೂರ್ವ ಬಂಗಾಳದ ಮುಸ್ಲಿಂ ಲೀಗ್ ಜತೆಗಿನ ಫಝುಲ್ ಹಕ್ ಸರಕಾರದಲ್ಲಿ ಹಣಕಾಸು ಮಂತ್ರಿಗಳಾಗಿದ್ದರು! ಮಹಾತ್ಮ ಗಾಂಧಿಯವರು 'ಚಲೇಜಾವ್' ಚಳುವಳಿಗೆ ಕರೆ ನೀಡಿದಾಗ ಇವರಿದ್ದ ಮುಸ್ಲಿಂ ಲೀಗ್ ನೇತೃತ್ವದ ಸರಕಾರ ಈ ಚಳುವಳಿಯನ್ನು ಬಂಗಾಲದಲ್ಲಿ ಬೇರೂರಲು ಬಿಡಬಾರದು ಎಂದು ಕರೆ ಕೊಟ್ಟವರು ಇವರು! ಇಷ್ಟೇ ಏಕೆ? ಸಿಂಧ್ ಪ್ರಾಂತದಲ್ಲಿ ಹಿಂದೂ ಮಹಾಸಭಾ–ಮುಸ್ಲಿಂ ಲೀಗ್ ನೇತೃತ್ವದ ಮೈತ್ರಿ ಸರಕಾರದಲ್ಲಿತ್ತು. ಸಿಂಧ್ ವಿಧಾನಸಭೆ ಪಾಕಿಸ್ತಾನದ ಬೇಡಿಕೆಯನ್ನು ಅನುಮೋದಿಸಿದಾಗ ಹಿಂದೂ ಮಹಾಸಭಾದ ಮಂತ್ರಿಗಳು ರಾಜೀನಾಮೆ ನೀಡಲಿಲ್ಲ!

ಇವು ಬಹಳ ಜನಗಳಿಗೆ ತಿಳಿಯದ, ಅಥವ ಮರೆತು ಬಿಟ್ಟಿರುವ ಚರಿತ್ರೆಯ ಸಂಗತಿಗಳು. ಆದರೆ ರಾಷ್ಟ್ರಪಿತನ ಕೊಲೆಗಾರ ಗೋಡ್ಸೆಯನ್ನು ಪೂಜಿಸುವ ಸಂಘ ಪರಿವಾರದ 'ದೇಶ–ದ್ರೋಹ'ವಂತೂ ಎಲ್ಲರಿಗೂ ತಿಳಿದಿರುವ ಸಂಗತಿಯೇ!

ಈದ್ಗಾ ಮೈದಾನದಲ್ಲಿ, ಕಾಶ್ಮೀರದ ಲಾಲ್ ಚೌಕದಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸುವ ಹಿಂಸಾತ್ಮಕ 'ಅಭಿಯಾನ'ವನ್ನು ನಡೆಸಿದ, ಬಹುವಾಗಿ ಆರಾಧಿಸುವಂತೆ ಪೋಸು ಕೊಡುವ ಸಂಘ ಪರಿವಾರವೇ ಸ್ವತಃ ಇದನ್ನು ರಾಷ್ಟ್ರ ಧ್ವಜ ಎಂದು ಬಹು ಕಾಲ ಒಪ್ಪೇ ಇರಲಿಲ್ಲ ಎಂಬುದು ಚರಿತ್ರೆಯಲ್ಲಿ ದಾಖಲಾಗಿರುವ ಇನ್ನೊಂದು ಸತ್ಯ. ಅವರಿಗೆ ಭಗವಾ ಧ್ವಜವನ್ನು ಕೆಂಪು ಕೋಟೆಯ ಮೇಲೆ ಹಾರಿಸುವ ಆಸೆ ಇತ್ತಷ್ಟೇ. **"ಅದೃಷ್ಟವಶಾತ್ ಅಧಿಕಾರಕ್ಕೆ ಬಂದವರು ತ್ರಿವರ್ಣಧ್ವಜವನ್ನು ಕೊಟ್ಟಿರಬಹುದು. ಆದರೆ ಅದನ್ನು ಹಿಂದುಗಳು ಎಂದೂ ಗೌರವಿಸುವುದಿಲ್ಲ. ತಮ್ಮದಾಗಿಸಿಕೊಳ್ಳುವುದಿಲ್ಲ. ಮೂರು ಎಂಬ ಶಬ್ದವೇ ಕೆಡುಕು. ಮೂರು ಬಣ್ಣ ಇರುವ ಧ್ವಜ ಖಂಡಿತ ತೀರಾ ಕೆಟ್ಟ ಮಾನಸಿಕ ಪರಿಣಾಮ ಬೀರುತ್ತದೆ ಮತ್ತು ದೇಶಕ್ಕೆ ಹಾನಿಕಾರಕ."** ಎಂದು ಆರೆಸ್ಸೆಸ್‌ನ ಮುಖಪತ್ರಿಕೆ ಆರ್ಗನೈಸರ್ ಅಗಸ್ಟ್ 14, 1947ರ ಸಂಚಿಕೆಯಲ್ಲಿ ಸಾರಿತ್ತು ಎಂಬುದು ಆರೆಸ್ಸೆಸ್‌ನ ಎಷ್ಟು ಅಭಿಮಾನಿಗಳಿಗೆ ತಿಳಿದಿದೆಯೋ?

ಮನಸ್ಮೃತಿ ಬಿಟ್ಟು ಬೇರೆ ಸಂವಿಧಾನವನ್ನಂತೂ ಅವರು ಯಾವತ್ತೂ ಒಪ್ಪೇ ಇರಲಿಲ್ಲ. **"ನಮ್ಮ ಸಂವಿಧಾನದಲ್ಲಿ ಪ್ರಾಚೀನ ಭಾರತದ ವಿಶಿಷ್ಟ**

ಪುಟ 15 ಕ್ಕೆ

"ಹಾಕಿ ದೇಶದ್ರೋಹದ ಕೇಸನ್ನು, ನಾನು ಹೇಳುತ್ತೇನೆ ಬ್ರಿಟಿಶರ ಜೊತೆಗೆ ನಿಂತ ದೇಶದ್ರೋಹಿಗಳು ದೇಶಪ್ರೇಮದ ಸರ್ಟಿಫಿಕೇಟ್ ಕೇಳುತ್ತಿದ್ದಾರೆ !"



ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹೈಯ ಕುಮಾರ್ ತಾನು ಭಾರತದ ಸಂವಿಧಾನಕ್ಕೆ ಬದ್ಧ ಎಂದಿದ್ದಾರೆ, ಅದ್ದರಿಂದ ಅವರು ಜಾಮೀನಿಗೆ ಅರ್ಜಿಹಾಕಿದರೆ ತಾವುಅದನ್ನು ವಿರೋಧಿಸುವುದಿಲ್ಲ ಎಂದು ದಿಲ್ಲಿಯ ಪೋಲೀಸ್ ಕಮಿಶನರ್ ತಮ್ಮ ಧಾರಾಳತನವನ್ನು ಪ್ರದರ್ಶಿಸಲು ಪ್ರಯತ್ನಿಸಿದರು. ಆದರೆ ಕನ್ಹೈಯರನ್ನು ಅವರು ರಾಜದ್ರೋಹದ ಆಪಾದನೆಯ ಮೇಲೆ ಬಂಧಿಸುವ ಹಿಂದಿನ ದಿನವೂ ಅದನ್ನೇ ಹೇಳಿದ್ದರು ಎಂದು ಅವರಿಗೆ ಗೊತ್ತಿರಲಿಲ್ಲವೇ? ಫೆಬ್ರುವರಿ 11ರಂದು ಕನ್ಹೈಯ ಜೆಎನ್‌ಯು ಆಡಳಿತ ಕಚೇರಿಯ ಎದುರು ವಿದ್ಯಾರ್ಥಿ ಸಂಗಾತಿಗಳನ್ನು ಮಾಡಿದ ಭಾಷಣದಲ್ಲಿ ಇವೆಲ್ಲವನ್ನೂ , ಮತ್ತು ಇದಕ್ಕೂ ಹೆಚ್ಚಿನ ಸಂಗತಿಯನ್ನು ಹೇಳಿದ್ದರು. ದೇಶಭಕ್ತಿಯ ರಾಗ ಆಲಾಪಿಸುವವರ ಹೂರಣವನ್ನು ತೆರೆದಿಟ್ಟಿದ್ದರು. ಬಹುಶಃ ಅದಕ್ಕಾಗಿಯೇ ಅವರನ್ನು ಬಂಧಿಸಿರಬೇಕು. ನಮ್ಮ ಓದುಗರಿಗಾಗಿ ಆ ಭಾಷಣದ ಮುಖ್ಯಾಂಶಗಳನ್ನು ಇಲ್ಲಿ ಕೊಡುತ್ತಿದ್ದೇವೆ.

.. .. ನಮಗೆ ದೇಶಪ್ರೇಮದ ಬಗ್ಗೆ, ರಾಷ್ಟ್ರವಾದದ ಬಗ್ಗೆ ಆರೆಸ್ಸೆಸ್‌ನಿಂದ ಸರ್ಟಿಫಿಕೇಟ್ ಬೇಕಿಲ್ಲ. ನಾವು ಈ ದೇಶದವರು, ಇದರ ಮಣ್ಣಿನ ಬಗ್ಗೆ ನಮಗೆ ಪ್ರೀತಿಯಿದೆ, ಈ ದೇಶದ ಒಳಗಿರುವ 80% ಬಡವರ ಪರವಾಗಿ ನಾವು ಹೋರಾಡುತ್ತೇವೆ. ನಮಗೆ ಇದೇ ದೇಶಪ್ರೇಮ. ನಮಗೆ ಸಂಪೂರ್ಣ ನಂಬಿಕೆಯಿದೆ ಬಾಬಾ ಸಾಹೇಬರ ಬಗ್ಗೆ, ನಮಗೆ ಸಂಪೂರ್ಣ ನಂಬಿಕೆಯಿದೆ ದೇಶದ ಸಂವಿಧಾನದ ಮೇಲೆ, ಬಹಳ ಸ್ಪಷ್ಟವಾಗಿ ಹೇಳುತ್ತೇನೆ ಈ ದೇಶದ ಸಂವಿಧಾನದ ಮೇಲೆ ಯಾರಾದರೂ ಬೆರಳು ತೋರಿಸಿದರೆ, ಆ ಬೆರಳು ಸಂಘಿಯದ್ದಾಗಲೀ ಆ ಬೆರಳು ಇನ್ಯಾರದೇ ಆಗಲಿ ನಾವದನ್ನು ಸಹಿಸುವುದಿಲ್ಲ. **ನಾವು ಸಂವಿಧಾನವನ್ನು ನಂಬುತ್ತೇವೆ, ಆದರೆ ನಾಗಪುರದಲ್ಲಿ ಹೇಳಿಕೊಡಲಾಗುವ ಸಂವಿಧಾನದ ಮೇಲೆ ನಮಗೆ ನಂಬಿಕೆಯಿಲ್ಲ. ನಮಗೆ ಮನುಸ್ಮೃತಿಯ ಬಗ್ಗೆ ಯಾವುದೇ ನಂಬಿಕೆಯಿಲ್ಲ** ನಮಗೆ ಈ ದೇಶದ ಒಳಗಿರುವ ಜಾತಿವಾದದ ಮೇಲೆ ಯಾವುದೇ ನಂಬಿಕೆಯಿಲ್ಲ.

ಇದೇ ಸಂವಿಧಾನದಲ್ಲಿ ಬಾಬಾ ಸಾಹೇಬ್ ಅಂಬೇಡ್ಕರರು ಗಲ್ಲು ಶಿಕ್ಷೆಯನ್ನು ರದ್ದು ಮಾಡುವ ಬಗ್ಗೆ ಹೇಳುತ್ತಾರೆ, ಇದೇ ಬಾಬಾ ಸಾಹೇಬ್ ಅಂಬೇಡ್ಕರರು ಅಭಿವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ಹೇಳುತ್ತಾರೆ. ನಾವು ಸಂವಿಧಾನವನ್ನು ಎತ್ತಿ ಹಿಡಿಯುತ್ತಾ ನಮ್ಮ ಮೂಲಭೂತ ಹಕ್ಕನ್ನು ಸಾಂವಿಧಾನಿಕ ಹಕ್ಕನ್ನು ಎತ್ತಿ ಹಿಡಿಯಲು ಬಯಸುತ್ತೇವೆ. **ಆದರಿದು ನಾಚಿಕೇಗೇಡಿನ ವಿಷಯ, ದುಃಖದ ವಿಷಯ, ಇವತ್ತು ಎಬಿವಿಪಿ ತಮ್ಮ ಮಾಧ್ಯಮ ಮಿತ್ರರ ಜೊತೆ ಸೇರಿ ಪೂರ್ತಿ ವಿಷಯವನ್ನು ತಿರುಚಿಬಿಟ್ಟಿದೆ, ತೆಳುವಾಗಿಸಿಬಿಟ್ಟಿದೆ.**

ನಿನ್ನೆ ಎಬಿವಿಪಿಯ ಜಾಯಿಂಟ್ ಸೆಕ್ರೆಟರಿ ಹೇಳ್ತಿದ್ರು ಫೆಲೋಶಿಪ್ಪಿಗೆ ಹೋರಾಟ ನಡೆಸುತ್ತೇವೆಂದು. ಇದು ಎಷ್ಟು ಹಾಸ್ಯಾಸ್ಪದವೆಂದರೆ ಇವರದೇ ಸರಕಾರದ ಮೇಡಮ್ ಮನುಸ್ಮೃತಿ ಇರಾನಿ ಫೆಲೋಶಿಪ್ಪನ್ನು ರದ್ದು ಮಾಡಿಬಿಟ್ಟಿದ್ದಾರೆ.. ಇವರ ಸರಕಾರ ಉನ್ನತ ಶಿಕ್ಷಣಕ್ಕೆ ಮೀಸಲಿಡುವ ಹಣದಲ್ಲಿ 70% ಕಡಿತಗೊಳಿಸಿಬಿಟ್ಟಿದೆ. ಇದರಿಂದ ನಮ್ಮ ಹಾಸ್ಟೆಲ್ ಕಳೆದ ನಾಲ್ಕು ವರ್ಷದಿಂದ ಪೂರ್ಣವಾಗಿಲ್ಲ. ಇವತ್ತಿನವರೆಗೂ ವೈಫೈ ಕೊಡಲಾಗಿಲ್ಲ..

.. .. .. ಮೂಲಭೂತ ಹಕ್ಕಿನ ಬಗ್ಗೆ ಚರ್ಚೆಯಾದ–ರೆ ಇವರ ಸತ್ಯಗಳೆಲ್ಲ ಹೊರಗೆ ಬಂದುಬಿಡುತ್ತವೆ. ಗೆಳೆಯರೇ, ನಮಗೆ ಹೆಮ್ಮೆಯಿದೆ ಜೆ.ಎನ್.ಯು ಬಗ್ಗೆ. ನಾವು ಮೂಲಭೂತ ಹಕ್ಕಿನ ಬಗ್ಗೆ ಚರ್ಚೆ ನಡೆಸುತ್ತೇವೆ. ಇದರ ಬಗ್ಗೆ ಪ್ರಶ್ನೆ ಕೇಳುತ್ತೇವೆ.. .. .. ಆ ಸ್ವಾಮಿ ಹೇಳ್ತಾರೆ ಜೆ.ಎನ್.ಯುನಲ್ಲಿ ಜಿಹಾದಿಗಳಿದ್ದಾರೆ. ಜೆ.ಎನ್.ಯುನಲ್ಲಿರುವ ಜನ ಹಿಂಸೆ ಹಬ್ಬಿಸುತ್ತಾರೆ ಎಂದು. ಜೆ.ಎನ್.ಯುನಲ್ಲಿರುವ ಆರ್.ಎಸ್.ಎಸ್ ಹಿಂಪಾಲಕರಿಗೆ ನಾನು ಸವಾಲು ಹಾಕುತ್ತೇನೆ. ಬನ್ನಿ ಡಿಬೇಟ್ ಮಾಡೋಣ. ಹಿಂಸೆಯ ಬಗ್ಗೆ ಚರ್ಚಿಸೋಣ .. ..

.. .. ಎಬಿವಿಪಿ ನಾಚಿಕೆಯಿಲ್ಲದೆ ಹೇಳುತ್ತೆ ರಕ್ತದ ತಿಲಕ ಮಾಡಿ ಗುಂಡುಗಳಿಂದ ಆರತಿ ಎತ್ತಿ ಎಂದು. ಯಾರ ರಕ್ತ ಹರಿಸಬೇಕೆಂದಿದ್ದೀರಿ ಈ ಮಣ್ಣಿನಲ್ಲಿ? ... ಈ ದೇಶದಲ್ಲಿ ಪ್ರಜಾತಂತ್ರವಿದೆ, ಈ ಪ್ರಜಾತಂತ್ರ ಎಲ್ಲರಿಗೂ ಸಮಾನ ಹಕ್ಕು ನೀಡುತ್ತದೆ. ಅದು ವಿದ್ಯಾರ್ಥಿಯೇ ಇರಲಿ, ನೌಕರನೇ ಇರಲಿ, ಬಡವನಿರಲಿ, ಬಲ್ಲಿದನಿರಲಿ, ಕೂಲಿಯವನಿರಲಿ, ರೈತನಿರಲಿ, ಅಂಬಾನಿಯಿರಲಿ, ಅದಾನಿಯಿರಲಿ ಎಲ್ಲರಿಗೂ ಸಮಾನ ಹಕ್ಕಿದೆ. ಮಹಿಳೆಯ ಸಮಾನತೆಯ ಬಗ್ಗೆ ಮಾತನಾಡಿದರೆ ಹೇಳುತ್ತಾರೆ ಭಾರತೀಯ ಸಂಸ್ಕೃತಿಯನ್ನು ಹಾಳುಮಾಡುತ್ತಿದ್ದಾರೆಂದು.

.. .. ಇವರಿಗೆ ಕಷ್ಟವಾಗುವುದು ಈ ಮಣ್ಣಿನ ಜನರು ಪ್ರಜಾತಂತ್ರದ ಬಗ್ಗೆ ಮಾತನಾಡಿದಾಗ, ಲಾಲ್ ಸಲಾಮಿನ ಜೊತೆ ಜನರು ನೀಲಿ ಸಲಾಮ್ ಮಾಡಿದಾಗ, ಮಾರ್ಕ್ಸ್ ಜೊತೆ ಬಾಬಾ ಸಾಹೇಬ್ ಅಂಬೇಡ್ಕರ್ ಹೆಸರು ತೆಗೆದು–ಕೊಂಡಾಗ ಇವರ ಹೊಟ್ಟೆಯಲ್ಲಿ ತಳಮಳವೇಳುತ್ತದೆ. ಇವರ ಕುತಂತ್ರವಿದು, ಇವರು ಬ್ರಿಟಿಷರ ಚಮಚಾಗಳು .. .. .. ಹಾಕಿ ದೇಶದ್ರೋಹದ ಕೇಸನ್ನು, ನಾನೇಳುತ್ತೇನೆ ಆರ್.ಎಸ್.ಎಸ್ ಇತಿಹಾಸ ಬ್ರಿಟಿಷರ ಜೊತೆಗೆ ನಿಂತ ಇತಿಹಾಸ. ಈ ದೇಶದ್ರೋಹಿಗಳು ಇವತ್ತು ದೇಶಪ್ರೇಮದ ಸರ್ಟಿಫಿಕೇಟ್ ಕೇಳುತ್ತಿದ್ದಾರೆ.

ನನ್ನ ಮೊಬೈಲ್ ನೋಡಿ ಗೆಳೆಯರೇ ನನ್ನ ತಾಯಿ ಮತ್ತು ತಂಗಿಗೆ ಕೆಟ್ಟಕೆಟ್ಟದಾಗಿ ಬಯ್ದಿದ್ದಾರೆ, ಬಯ್ಯುತ್ತಿದಾರೆ. **ಯಾವ ಭಾರತ ಮಾತೆಯ ಬಗ್ಗೆ ಮಾತನಾಡುತ್ತಿದ್ದಿರಾ? ನಿಮ್ಮ ಭಾರತ ಮಾತೆಯಲ್ಲಿ ನನ್ನ ತಾಯಿ ಇಲ್ಲದಿದ್ದರೆ ನನಗೆ ಆ ಭಾರತ ಮಾತೆಯ ಪರಿಕಲ್ಪನೆ ಒಪ್ಪಿತವಲ್ಲ. ಈ ದೇಶದ ಬಡ ಮಹಿಳೆಯರು, ನನ್ನಮ್ಮ ಅಂಗನವಾಡಿಯಲ್ಲಿ ಕೆಲಸಕ್ಕಿದ್ದಾರೆ, ಮೂರು ಸಾವಿರದ ಮೇಲೆ ನಮ್ಮ ಕುಟುಂಬ ನಡೆಯುತ್ತದೆ. ಮತ್ತಿವರು ಅವರ ವಿರುದ್ಧ ಬಯ್ಗುಳ ಸುರಿಸುತ್ತಿದ್ದಾರೆ. ಇಂತಹ ದೇಶದ ಬಗ್ಗೆ ನನಗೆ ನಾಚಿಕೆಯಿದೆ.** ಈ ದೇಶದೊಳಗಿರುವ ದಲಿತ, ಕಾರ್ಮಿಕ, ರೈತರ ತಾಯಿ ಭಾರತ ಮಾತೆಯಲ್ಲ. ನಾನು ಜೈಕಾರ ಹಾಕುತ್ತೇನೆ, ಭಾರತದ ತಾಯಂದಿರಿಗೆ, ಅಪ್ಪಂದಿರಿಗೆ, ಸಹೋದರಿಗೆ ಜೈ, ರೈತ ಕಾರ್ಮಿಕ, ದಲಿತ ಆದಿವಾಸಿಗಳಿಗೆ ಜೈ. ನಿಮ್ಮಲ್ಲಿ ತಾಕತ್ತಿದ್ದರೆ ಹೇಳಿ ಇಂಕ್ವಿಲಾಬ್ ಜಿಂದಾಬಾದ್, ಹೇಳಿ ಭಗತ್ ಸಿಂಗ್ ಜಿಂದಾಬಾದ್, ಹೇಳಿ ಸುಖದೇವ್ ಜಿಂದಾಬಾದ್, ಹೇಳಿ ಅಷ್ಫಾಖುಲ್ಲಾ ಖಾನ್ ಜಿಂದಾಬಾದ್, ಹೇಳಿ ಬಾಬಾ ಸಾಹೇಬ್ ಜಿಂದಾಬಾದ್.

ನೀವು ಬಾಬಾ ಸಾಹೇಬರ 125ನೇ ವರ್ಷಾಚರಣೆಯನ್ನಾಚರಿಸುವ ನಾಟಕವಾಡುತ್ತೀರಿ. ನಿಮ್ಮಲ್ಲಿ ತಾಕತ್ತಿದೆಯಾ? ಬಾಬಾ ಸಾಹೇಬರು ಜಾತಿವಾದ ಈ ದೇಶದ ದೊಡ್ಡ ಸಮಸ್ಯೆಯೆಂದು ಹೇಳಿದ್ದರು .. .. ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ತೆಗೆದುಕೊಂಡು ಬನ್ನಿ!! ದೇಶ ಕಟ್ಟುವ ಕೆಲಸ ನಡೆಯುವುದು ಅಲ್ಲಿರುವ ಜನರಿಂದ. ಈ ದೇಶದಲ್ಲಿ ಬಡವರಿಗೆ, ಕಾರ್ಮಿಕರಿಗೆ ಜಾಗವಿಲ್ಲ?.. ನಿನ್ನೆ ಟಿವಿ ಡಿಬೇಟಿನಲ್ಲಿ ದೀಪಕ್ ಚೌರಾಸಿಯಾರವರಿಗೆ ಈ ಮಾತು ಹೇಳುತ್ತಿದ್ದೆ –ಇದು ಗಂಭೀರ ಸಮಯವೆಂದು ನೆನಪಿಟ್ಟುಕೊಳ್ಳಿ. **ಇದೇ ರೀತಿಯ ಮೂಲಭೂತವಾದ ಮುಂದುವರೆದರೆ ಮಾಧ್ಯಮ ಕೂಡ ಸುರಕ್ಷಿತವಾಗಿರುವುದಿಲ್ಲ. ಸಂಘದ ಆಫೀಸಿನಿಂದ ಸ್ಕ್ರಿಪ್ಟ್ ಬರೆದುಕೊಂಡು ಬರುತ್ತಾರೆ. ಇಂದಿರಾಗಾಂಧಿಯವರ ಸಮಯದಲ್ಲಿ ಕಾಂಗ್ರೆಸ್ ಆಫೀಸಿನಿಂದ ಸ್ಕ್ರಿಪ್ಟ್ ಬರುತ್ತಿದ್ದಂತೆ ಬರುತ್ತದೆ ಎಂದು ನೆನಪಿರಲಿ!**

ಕೆಲವು ಮಾಧ್ಯಮ ಮಿತ್ರರು ಹೇಳುತ್ತಿದ್ದರು, **ನಮ್ಮ ತೆರಿಗೆ ಹಣದಲ್ಲಿ, ಸಬ್ಸಿಡಿ ಹಣದಲ್ಲಿ ಜೆ.ಎನ್.ಯು ನಡೆಯುತ್ತಿದೆಯೆಂದು. ಹೌದು ನಿಜ, ತೆರಿಗೆ ಹಣದಲ್ಲಿ, ಸಬ್ಸಿಡಿಯ ಹಣದಲ್ಲಿ ಜೆ.ಎನ್.ಯು ನಡೆಯುತ್ತಿದೆ ಎನ್ನುವುದು ಸತ್ಯ. ಆದರೊಂದು ಪ್ರಶ್ನೆ ಕೇಳಬಯಸುತ್ತೇನೆ, ಈ ವಿಶ್ವವಿದ್ಯಾನಿಯಲಗಳು ಇರುವುದಾದರೂ ಏತ–ಕ್ಕೆ, ಸಮಾಜದ ಆಗುಹೋಗುಗಳನ್ನು ವಿಶ್ಲೇಷಣೆ** ಮಾಡಲು .. .. ವಿಶ್ವವಿದ್ಯಾನಿಲಯಗಳು ಇದರಲ್ಲಿ ವಿಫಲವಾದರೆ ದೇಶ ನಿರ್ಮಾಣವಾಗುವುದಿಲ್ಲ. ಆ ದೇಶದಲ್ಲಿ ಜನರ ಭಾಗವಹಿಸುವಿಕೆ ಇರುವುದಿಲ್ಲ .. .. ಲೂಟಿ ಮತ್ತು ಶೋಷಣೆಯೇ ಆ ದೇಶದಲ್ಲಿರುತ್ತದೆ. ದೇಶದೊಳಗಿನ ಜನರ ಸಂಸ್ಕೃತಿ, ವಿವಿಧತೆಯನ್ನು ಒಳಗೊಳ್ಳದಿದ್ದರೆ ಆ ದೇಶದ ನಿರ್ಮಾಣವಾಗುವುದಿಲ್ಲ. **ನಾವು ದೇಶದ ಜೊತೆಗಿದ್ದೇವೆ. ಭಗತ್ ಸಿಂಗ್ ಮತ್ತು ಬಾಬಾ ಸಾಹೇಬ್ ಅಂಬೇಡ್ಕರರ ಕನಸುಗಳ ಜೊತೆಗಿದ್ದೇವೆ .. .. .. .ಸಮಾನತೆಯ ಹಕ್ಕು ಸಿಗಬೇಕು, ಎಲ್ಲರಿಗೂ ಜೀವಿಸುವ ಹಕ್ಕಿರಬೇಕೆಂಬ ಕನಸಿನ ಜೊತೆಗಿದ್ದೇವೆ. ಎಲ್ಲರಿಗೂ ಆಹಾರದ ಹಕ್ಕಿರಬೇಕೆಂಬ ಕನಸಿನ ಜೊತೆಗಿದ್ದೇವೆ. ಆ ಕನಸಿನ ಜೊತೆ ನಿಲ್ಲುವ ಕಾರಣಕ್ಕೆ, ರೋಹಿತ ತನ್ನ ಪ್ರಾಣ ನೀಡಿದ್ದಾನೆ.**

ಈ ಸಂಘಿಗಳಿಗೆ ನಾನು ಹೇಳಬಯಸುತ್ತೇನೆ .. .. .. ರೋಹಿತನ ವಿಷಯದಲ್ಲಿ ನೀವು ಮಾಡಿದ್ದನ್ನು ಜೆ.ಎನ್.ಯು ವಿಷಯದಲ್ಲಿ ನಡೆಯಲು ಬಿಡುವುದಿಲ್ಲ .... ರೋಹಿತನ ತ್ಯಾಗವನ್ನು ನೆನೆಯುತ್ತಾ ನಾವು ಅಭಿವ್ಯಕ್ತಿ ಸ್ವಾತಂತ್ರ್ಯದ ಪರ ನಿಲ್ಲುತ್ತೇವೆ.

ಪಾಕಿಸ್ತಾನದ ವಿಷಯ ಬಿಟ್ಟುಬಿಡಿ, ಬಾಂಗ್ಲಾದೇಶದ ವಿಷಯ ಬಿಟ್ಟುಬಿಡಿ, ನಾವು ಹೇಳುತ್ತೇವೆ ಇಡೀ ಜಗತ್ತಿನ ಬಡವರು ಒಂದು, ಜಗತ್ತಿನ ಕಾರ್ಮಿಕರು ಒಂದು, ಮಾನವೀಯತೆ ಜಿಂದಾಬಾದ್ .... ಮಾನವೀಯತೆಯ ವಿರುದ್ಧ ನಿಂತಿರುವವರಾರೆಂದು ನಾವಿವತ್ತು ಗುರುತಿಸಿಬಿಟ್ಟಿದ್ದೇವೆ. ಜಾತಿವಾದ, ಮನುವಾದ, ಬ್ರಾಹ್ಮಣವಾದದ ಮುಖಗಳನ್ನು ನಾವು ಬಹಿರಂಗಗೊಳಿಸಬೇಕು. ನಿಜವಾದ ಪ್ರಜಾತಂತ್ರ ನಿಜವಾದ ಸ್ವಾತಂತ್ರ್ಯವನ್ನು ದೇಶದಲ್ಲಿ ಸ್ಥಾಪಿಸಬೇಕಾಗಿದೆ. ಆ ಸ್ವಾತಂತ್ರ್ಯ ಬರುವುದು ಸಂವಿಧಾನದಿಂದ, ಪ್ರಜಾತಂತ್ರದಿಂದ, ಸಂಸತ್ತಿನಿಂದ ಎಂದು ಹೇಳಲಿಚ್ಛಿಸುತ್ತೇವೆ. ಇದಕ್ಕಾಗಿ ಇಲ್ಲಿರುವ ಕೇಳುಗರಲ್ಲಿ ವಿನಂತಿಸುತ್ತೇನೆ, ಸಣ್ಣಪುಟ್ಟ ಭಿನ್ನಾಭಿಪ್ರಾಯಗಳಿದ್ದರೂ ನಾವು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ, ನಮ್ಮ ಸಂವಿಧಾನ, ನಮ್ಮ ನೆಲದ ಏಕತೆಗಾಗಿ ನಾವು ಒಗ್ಗಟ್ಟಿನಿಂದಿರಬೇಕು. ದೇಶ ಒಡೆಯುವ, ಭಯೋತ್ಪಾದನೆ ಹರಡುವ ಜನರಿಗೆ ಒಂದು ಪ್ರಶ್ನೆ,

ಕೊನೆಯ ಪ್ರಶ್ನೆ ಕೇಳುತ್ತಾ ನನ್ನ ಮಾತು ಮುಗಿಸುತ್ತೇನೆ. **ಈ ಕಸಾಬ್ ಯಾರು? ಅಫ್ಜಲ್ ಗುರು ಯಾರು?** ಇಂತಹ ಪರಿಸ್ಥಿತಿಯಲ್ಲಿರುವ ಈ ಜನ ಯಾರು? ತಮ್ಮ ದೇಹಕ್ಕೆ ಬಾಂಬು ಸಿಕ್ಕಿಸಿಕೊಂಡು ಕೊಲೆ ಮಾಡಲು ತಯಾರಾಗುವ ಈ ಜನರಾರು? **ಈ ಪ್ರಶ್ನೆ ವಿಶ್ವವಿದ್ಯಾನಿಲಯುದಲ್ಲಿ ಹುಟ್ಟದಿದ್ದರೆ ವಿಶ್ವವಿದ್ಯಾನಿಲಯಕ್ಕೆ ಅರ್ಥವೇ ಇಲ್ಲ**

.. ... ನಾವು ನ್ಯಾಯವನ್ನು ವ್ಯಾಖ್ಯಾನಿಸದಿದ್ದರೆ, ನಾವು ಹಿಂಸೆಯನ್ನು ವ್ಯಾಖ್ಯಾನಿಸದಿದ್ದರೆ, ಹಿಂಸೆಯೆಂದರೆ ಬಂದೂಕೆತ್ತಿಕೊಂಡು ಕೊಲ್ಲುವುದಷ್ಟೇ ಅಲ್ಲ. ಸಂವಿಧಾನ ದಲಿತರಿಗೆ ಕೊಟ್ಟಿರುವ ಹಕ್ಕನ್ನು ಜೆ.ಎನ್.ಯು ಆಡಳಿತ ಕೊಡದಿರುವುದೂ ಹಿಂಸೆಯ, ವ್ಯವಸ್ಥೆಯ ಹಿಂಸೆ

...... 'ನ್ಯಾಯ'ದ ಮಾತನಾಡುತ್ತೇವೆ, ಯಾರು ನಿರ್ಧರಿಸುತ್ತಾರೆ ಈ ನ್ಯಾಯವೇನೆಂಬುದನ್ನು. **ಬ್ರಾಹ್ಮಣವಾದದ ವ್ಯವಸ್ಥೆಯಿದ್ದಾಗ ದಲಿತರನ್ನು ಮಂದಿರದೊಳಗೆ ಬಿಡುತ್ತಿರಲಿಲ್ಲ, ಅದೇ ನ್ಯಾಯವಾಗಿತ್ತು. ಬ್ರಿಟಿಷರಿದ್ದಾಗ ನಾಯಿಗಳಿಗೆ ಮತ್ತು ಭಾರತೀರಿಗೆ ಹೋಟೆಲ್ಲುಗಳಿಗೆ ಪ್ರವೇಶವಿಲ್ಲ ಎನ್ನುತ್ತಿದ್ದರು... ಅದೇ ನಾಯವಾಗಿತ್ತು. ಈ 'ನ್ಯಾಯ'ವನ್ನು ನಾವು ಪ್ರಶ್ನಿಸಿದೆವು ಮತ್ತಿವತ್ತೂ ಎಬಿವಿಪಿ ಮತ್ತು ಆರ್.ಎಸ್.ಎಸ್‌ನ ನಾಯವನ್ನು ಪ್ರಶ್ನಿಸುತ್ತೇವೆ** ...... ನಿಮ್ಮ ನ್ಯಾಯದಲ್ಲಿ ನಮ್ಮ ನ್ಯಾಯಕ್ಕೆ ಜಾಗವಿರದಿದ್ದರೆ ನಿಮ್ಮ ನ್ಯಾಯವನ್ನು ನಾವು ಮಾನ್ಯ ಮಾಡುವುದಿಲ್ಲ. ನಿಮ್ಮ ಸ್ವಾತಂತ್ರ್ಯವನ್ನು ನಾವು ಮಾನ್ಯ ಮಾಡುವುದಿಲ್ಲ. ಪ್ರತಿಯೊಬ್ಬನಿಗೂ ಅವನ ಸಂವಿಧಾನಿಕ ಹಕ್ಕು ಸಿಕ್ಕ ದಿನ ಸ್ವಾತಂತ್ರ್ಯವನ್ನು ಮಾನ್ಯ ಮಾಡುತ್ತೇವೆ. ಸಂವಿಧಾನದ ಹಕ್ಕು ಎಲ್ಲರಿಗೂ ಸಿಕ್ಕು ಸಮಾನರಾದ ದಿನ ನ್ಯಾಯವನ್ನು ಒಪ್ಪುತ್ತೇವೆ.

ಗೆಳೆಯರೇ ತುಂಬಾ ಗಂಭೀರ ಪರಿಸ್ಥಿತಿಯಿದೆ. **ಜೆ.ಎನ್.ಯು.ಎಸ್.ಯು ಯಾವುದೇ ಹಿಂಸೆ, ಭಯೋತ್ಪಾದನೆ, ಭಾರತ–ವಿರೋಧಿ ಚಟುವಟಿಕೆಯನ್ನೂ ಬೆಂಬಲಿಸುವುದಿಲ್ಲ. ಕೆಲವು ಅಪರಿಚಿತ ಮಂದಿ 'ಪಾಕಿಸ್ತಾನ ಜಿಂದಾಬಾದ್' ಎಂದು ಕೂಗಿದ್ದಾರೆ.**

ದೇಶದ ಭೂಮಿಯನ್ನು ಇಂಚಿಂಚೇ ಬಂಡವಾಳಶಾಹಿಗಳಿಗೆ ಮಾರುವುದನ್ನು ಬೆಂಬಲಿಸುವವರು ದೇಶಪ್ರೇಮದ ಪಾಠ ಮಾಡುತ್ತಿದ್ದಾರೆ

– ಡಾ. ನಟರಾಜ ಹುಳಿಯಾರ್

ಕಳೆದ ಐವತ್ತು ವರ್ಷಗಳಲ್ಲಿ ದೇಶ ವಿಭಜನೆಯೊಂದನ್ನು ಬಿಟ್ಟು ಇನ್ನಾವ ವಲಯದಲ್ಲೂ 'ಸಂಶೋಧನೆ' ಮಾಡಲಾಗದ ಕೋಮುಶಕ್ತಿಗಳಿಗೆ ಇಂಥ ವಿಶ್ವವಿದ್ಯಾಲಯಗಳನ್ನು ನಾಶ ಮಾಡಿದರೆ ತಮ್ಮ ಪೌರೋಹಿತ್ಯ ಹಾಗೂ ಬಂಡವಾಳವಾದಿ ಮಾರ್ಗಗಳು ಸಲೀಸಾಗಿ ನಡೆಯುತ್ತವೆ ಎಂಬ ಕೆಟ್ಟ ನಂಬಿಕೆ ಬಂದಂತಿದೆ. ಆದರೆ, ಕಳೆದ ಐವತ್ತು ವರ್ಷಗಳಲ್ಲಿ ಇಂಡಿ–ಯಾ ಬಹುದೂರ ಚಲಿಸಿದೆ. ಅಂಬೇಡ್ಕರ್ ಪ್ರತಿಪಾದಿಸಿದ ಸಾಮಾಜಿಕ ನ್ಯಾಯದ ಚಿಂತನೆಗಳು ಹಾಗೂ ಅವುಗಳ ಅನುಷ್ಠಾನಗಳ ಫಲ ವಿಶ್ವವಿದ್ಯಾಲಯಗಳಾಚೆಗೂ ಹಬ್ಬಿವೆ. ದಲಿತ, ಶೂದ್ರ ಜಾತಿಗಳಲ್ಲಿ ಸ್ವತಂತ್ರ ಚಿಂತಕ, ಚಿಂತಕಿಯರು, ನಾಯಕರು ಹುಟ್ಟಿಕೊಂಡಿದ್ದಾರೆ. ಮಾರ್ಕ್ಸ್‌ವಾದಿ ಚಿಂತನೆಗಳು ಪ್ರಗತಿಪರರ, ಸ್ತ್ರೀವಾದಿಗಳ, ಜನಪರ ಚಳವಳಿಗಾರರ ಭಾಗಗಳಾಗಿ ಹೋಗಿವೆ.

ಇಂಥ ಹೊಸ ಚಲನೆಗಳಿಗೆ ಕಾರಣವಾಗಿರುವ ತಾತ್ವಿಕ ಕೇಂದ್ರಗಳನ್ನು ನಾಶಪಡಿಸುವ ಕೆಲಸ ವ್ಯವಸ್ಥಿತವಾಗಿ ಶುರುವಾಗಿದೆ: ದೇಶದ ಭೂಮಿಯನ್ನು ಇಂಚಿಂಚೇ ಬಂಡವಾಳಶಾಹಿಗಳಿಗೆ ಮಾರುವುದನ್ನು ಬೆಂಬಲಿಸುವವರು ದೇಶಪ್ರೇಮದ ಪಾಠ ಮಾಡುತ್ತಿದ್ದಾರೆ. ಮೊನ್ನೆ ತಾನೇ ನಾಡಿನ ಗಣಿಗಳ ಲೂಟಿಕೋರರಿಂದ ಹಣ ವಸೂಲಿ ಮಾಡುತ್ತಿದ್ದವರಿಂದ ಇಂದು ನಾಡಪ್ರೇಮದ ಭಾಷಣ! ಇದು ಈ ಕಾಲದ ವ್ಯಂಗ್ಯ.

ಈ ಟಿಪ್ಪಣಿ ಬರೆಯುವ ದಿನ ಕರ್ನಾಟಕದಲ್ಲಿ ನಡೆದ ಚಾರಿತ್ರಿಕ ಬೆಳವಣಿಗೆಯೊಂದನ್ನು ಅನೇಕರು ಗಮನಿಸಿರಬಹುದು. ವಿವಿಧ ಪ್ರಗತಿಪರ ವಿದ್ಯಾರ್ಥಿ ಸಂಘಟನೆಗಳು ಒಟ್ಟಾಗಿ ಸೇರಿ ರೋಹಿತ್ ವೇಮುಲರ ಆತ್ಮಹತ್ಯೆಗೆ ಕಾರಣರಾದವರನ್ನು ಖಂಡಿಸಿದವು. ಜೆಎನ್‌ಯು ಪ್ರಕರಣದಲ್ಲಿ ನಡೆದ ಹಲ್ಲೆಗಳನ್ನೂ ಒಕ್ಕೊರಲಿನಿಂದ ಖಂಡಿಸಿತು. ಈಗ ಶುರುವಾಗಿರುವ ಈ ವಿಶಾಲ ಸಂಘಟನೆಯನ್ನು ತಾತ್ವಿಕ ಚೌಕಟ್ಟಿನ ಮೂಲಕ ಗಟ್ಟಿಯಾಗಿಸುವ ಅಗತ್ಯವಿದೆ. ಇಲ್ಲಿ ಸೇರಿರುವ ಎಲ್ಲ ಸಂಘಟನೆಗಳನ್ನೂ ಬೆಸೆಯುವ ಚಿಂತನೆಗಳು, ಕಾರ್ಯಕ್ರಮಗಳನ್ನು ರೂಪಿಸಬೇಕು.

(ಪ್ರಜಾವಾಣಿ : ಫೆ. 17)

ಜೆ.ಎನ್.ಯು.ಎಸ್.ಯು. ಅದನ್ನು ಬಲವಾಗಿ ಖಂಡಿಸುತ್ತದೆ.

... ನೀವು ಯಾರಿಗಾಗಿ, ಯಾರ ಜೊತೆ, ಯಾವ ಆಧಾರದ ಮೇಲೆ ಕೆಲಸ ಮಾಡುತ್ತಿದ್ದೀರೆಂದು ಜೆ.ಎನ್.ಯು ಆಡಳಿತಕ್ಕೆ ಕೇಳಬಯಸುತ್ತೇನೆ. **.............ಜೆ.ಎನ್.ಯು ಉಪಕುಲಪತಿಗಳಿಗೆ ನಮ್ಮ ಪ್ರಶ್ನೆಯಿದೆ, ಪೋಸ್ಟರ್ ಹಾಕಲಾಗಿತ್ತು ಗೋಡೆಗಳ ಮೇಲೆ, ಮೆಸ್ಸಿನಲ್ಲಿ; ತೊಂದರೆಯೆನಿಸಿದ್ದರೆ ಅನುಮತಿ ನೀಡಬಾರದಿತ್ತು. ಅನುಮತಿ ಕೊಟ್ಟ ಮೇಲೆ ಯಾರ ಮಾತು ಕೇಳಿ ಅನುಮತಿ ರದ್ದು ಮಾಡಿದಿರಿ?**

.... ಜೊತೆಗೆ ಈ(ಎಬಿವಿಪಿ) ಮಂದಿಯ ಸತ್ಯಾಂಶವನ್ನು ತಿಳಿದುಕೊಳ್ಳಿ. ಇವರನ್ನು ದ್ವೇಷಿಸಬೇಡಿ. ನನಗೆ ಇವರ ಪರಿಸ್ಥಿತಿಯ ಬಗ್ಗೆ ಬೇಸರವಿದೆ. ಇವರಿಷ್ಟೊಂದು ಕುಣಿಯುತ್ತಿದ್ದಾರೆ ಯಾಕೆ? **ಇವರಿಗನ್ನಿಸುತ್ತೆ (ಎಫ್‌ಟಿಐಐನಲ್ಲಿ) ಗಜೇಂದ್ರ ಚೌಹಾಣರನ್ನು ಕೂರಿಸಿದಂತೆ ಎಲ್ಲಾ ಕಡೆ ಅಂವರನ್ನು ಕೂರಿಸಬಹುದು, ಆಗ ನಮಗೆ ಕೆಲಸ ಸಿಗುತ್ತದೆ ಎಂದು ಭಾವಿಸಿರಬಹುದು....... ಕೆಲಸ ಸಿಗುತ್ತಿದ್ದಂತೆ ದೇಶಭಕ್ತಿಯೂ ನೆನಪಿರುವುದಿಲ್ಲ, ಭಾರತ ಮಾತೆಯ ಚಿಂತೆಯೂ ಇರುವುದಿಲ್ಲ. ..ತ್ರಿವರ್ಣದ ಧ್ವಜದಂತೂ ಇಲ್ಲವೇಇಲ್ಲ, ಅದನ್ನವರು ಎಂದೂ ಮಾನ್ಯ ಮಾಡಿಲ್ಲ.**

ಕೇಸರಿ ಬಾವುಟವನ್ನೂ ಮರೆತು ಬಿಡುತ್ತಾರೆ. ಇದು ಎಂತಹ ದೇಶಭಕ್ತಿ? ಮಾಲೀಕ ತನ್ನ ನೌಕರನೊಂದಿಗೆ.. ರೈತ ತನ್ನ ಕೂಲಿಕಾರರೊಂದಿಗೆ .... ವಿವಿಧ ಚಾನೆಲ್ಲುಗಳಲ್ಲಿ ಅಲ್ಪ ಸಂಬಳಕ್ಕೆ ಪತ್ರಕರ್ತರ ಕೆಲಸ ಮಾಡುವವರೊಂದಿಗೆ ಅವರ ಸಿ.ಇ.ಓಗಳು ಸರಿಯಾಗಿ ನಡೆದುಕೊಳ್ಳದಿದ್ದರೆ...... ಏನದು ಇವರ ದೇಶಭಕ್ತಿ.

ಇವರ ದೇಶಭಕ್ತಿ ಭಾರತ ಪಾಕಿಸ್ತಾನದ ನಡುವಿನ ಮ್ಯಾಚಿನೊಂದಿಗೆ ಕೊನೆಗೊಳ್ಳುತ್ತದೆ. ನಂತರ ರಸ್ತೆಯಲ್ಲಿ ನಡೆವಾಗ ಬಾಳೆಹಣ್ಣು ಮಾರುವವನೊಂದಿಗೆ ಕೆಟ್ಟದಾಗಿ ವರ್ತಿಸುತ್ತಾರೆ. ಬಾಳೆಹಣ್ಣಿನವನು ಹೇಳುತ್ತಾನೆ ಒಂದು ಡಜನ್ನಿಗೆ ನಲವತ್ತು ರುಪಾಯಿ, ಇವರು ಹೇಳುತ್ತಾರೆ ನೀವು ಲೂಟಿ ಮಾಡುತ್ತಿದ್ದೀರಿ, 30ರೂ.ಗೆ ಕೊಡು. ಆತ ತಿರುಗಿ ನಿಂತು ನೀವೇ ದೊಡ್ಡ ಲೂಟಿಕೋರರು, ಕೋಟ್ಯಂತರ ಲೂಟಿ ಮಾಡಿದ್ದೀರಿ ಎಂದು ಹೇಳಿದರೆ ಅವನನ್ನು ದೇಶದ್ರೋಹಿ ಎಂದುಬಿಡುತ್ತಾರೆ. **ಇವರ ದೇಶಪ್ರೇಮ ಆಸ್ತಿ ಮತ್ತು ಸಂಪತ್ತಿನೊಂದಿಗೆ ಆರಂಬವಾಗುತ್ತದೆ, ಅದರೊಂದಿಗೇ ಮುಕ್ತಾಯವಾಗುತ್ತದೆ.**

ಎಬಿವಿಪಿಯ ಅನೇಕರು ನನಗೆ ಪರಿಚಿತರು. ಅವರಲ್ಲಿ ಕೇಳುತ್ತೇನೆ. ನಿಮ್ಮಲ್ಲಿ ನಿಜಕ್ಕೂ ದೇಶಭಕ್ತಿಯ ಭಾವನೆ ಪುಟಿಯುತ್ತದೆಯಾ? **ಅವರು ಹೇಳುತ್ತಾರೆ 'ಏನ್ ಮಾಡೋದಣ್ಣ, ಐದು ವರ್ಷದ ಸರಕಾರ, ಎರಡು ವರ್ಷ ಮುಗಿದು ಹೋಗಿದೆ, ಮೂರು ವರ್ಷದ ಟಾಕ್ ಟೈಮ್ ಉಳಿದಿದೆ. ಏನೆಲ್ಲ ಮಾಡಬೇಕೋ ಅದನ್ನೀಗಲೇ ಮಾಡಿಬಿಡಬೇಕು"** ನಾನು ಹೇಳಿದೆ 'ಸರಿ, ಮಾಡಿಕೊಳ್ಳಿ. ಜೆ.ಎನ್.ಯು. ಬಗ್ಗೆ ಸುಳ್ಳು ಹೇಳಿದರೆ ನಾಳೆ ನಿಮ್ಮ ಸದಸ್ಯನೇ, ರೈಲುಗಳಲ್ಲಿ ಓಡಾಡಿಕೊಂಡು ಗೋಮಾಂಸದ ಪತ್ತೆ ಮಾಡುವಾತ, ನಿಮ್ಮ ಕಾಲರ್ ಹಿಡಿದು, ನೀನು ಜೆ.ಎನ್.ಯು ವಿದ್ಯಾರ್ಥಿ, ಹಾಗಾಗಿ ರಾಷ್ಟ್ರವಿರೋಧಿ ಎಂದರೆ? ನಿಮ್ಮನ್ನು ಅವರು ಚಚ್ಚಿ ಹಾಕಬಹುದು, ಈ ಅಪಾಯದ ಅರಿವಿದೆಯಾ? ಅದಕ್ಕವನು ಹೇಳುತ್ತಾನೆ "ಅರ್ಥವಾಗುತ್ತೆ ಅಣ್ಣ. ಇದೇ ಕಾರಣಕ್ಕೆ ನಾವು JNUShutdown ಎಂಬ ಹ್ಯಾಷ್ ಟ್ಯಾಗನ್ನು ವಿರೋಧಿಸುತ್ತೇವೆ.".........

ಈ ಕಾರಣಕ್ಕೆ ನಾನು ಜೆ.ಎನ್‌ಯು.ಗಳಿಗೆ ಹೇಳಲು ಬಯಸುತ್ತೇನೆ. ಮಾರ್ಚಿನಲ್ಲಿ ಚುನಾವಣೆಯಿದೆ. ಎಬಿವಿಪಿ ಮಂದಿ ಓಂ ಬಾವುಟ ಹಿಡಿದು ನಿಮ್ಮ ಬಳಿ ಬರುತ್ತಾರೆ. ಆಗವರನ್ನು 'ನಾವು ದೇಶದ್ರೋಹಿಗಳು. ನಾವು ಜಿಹಾದಿಗಳು. ನಾವು ಭಯೋತ್ಪಾದಕರು. ನಮ್ಮ ಮತ ತೆಗೆದುಕೊಂಡು ನೀವು ದೇಶದ್ರೋಹಿಗಳಾಗುತ್ತೀರಾ?' ಎಂದು ನೀವು ಕೇಳೇ ಕೇಳುತ್ತೀರಿ.

ಆಗವರು 'ಇಲ್ಲ ಇಲ್ಲ. ನೀವಲ್ಲ. ಯಾರೋ ಕೆಲವರು ಮಾತ್ರ.' ಇದನ್ನು ನೀವು ಆಗಲೇ

400 ಜಾಗತಿಕ ವಿವಿಗಳಿಂದ ಬೆಂಬಲ

ಅಭಿವ್ಯಕ್ತಿ ಸ್ವಾತಂತ್ರ್ಯದ ದಮನದ ವಿರುದ್ಧ ಸಿಡಿದೆದ್ದಿರುವ ಜೆಎನ್‌ಯು ವಿದ್ಯಾರ್ಥಿಗಳಿಗೆ ಜಗತ್ತಿನ ಎಲ್ಲೆಡೆಯಿಂದ, ನೂರಾರು ಅಧ್ಯಯನ ನಿರತರಿಂದ ಬೆಂಬಲ ವ್ಯಕ್ತವಾಗಿದೆ. ಯೇಲ್, ಹಾರ್ವರ್ಡ್, ಕೇಂದ್ರಿಡ್ಜ್ ಮುಂತಾದ ಹಲವು ವಿಶ್ವವಿದ್ಯಾಲಯಗಳ 455 ಸಂಶೋಧಕರು ಮತ್ತು ಪ್ರಾಧ್ಯಾಪಕರು ಒಂದು ಜಂಟಿ ಹೇಳಿಕೆ ನೀಡಿ "ಜೆಎನ್‌ಯು ವಿಶ್ವವಿದ್ಯಾಲಯದ ತಾಣದಲ್ಲಿ ಒಂದು ಒಂದು ಚೈತನ್ಯಶೀಲ ಕಲ್ಪನೆಯನ್ನು ತೋರುತ್ತದೆ– ಅದು ವಿಮರ್ಶಾತ್ಮಕ, ಪ್ರಜಾಸತ್ತಾತ್ಮಕ ಭಿನ್ನಮತ, ವಿದ್ಯಾರ್ಥಿ ಚಟುವಟಿಕೆ, ಮತ್ತು ರಾಜಕೀಯ ನಂಬಿಕೆಗಳ ಬಹುತ್ವವನ್ನು ಅಪ್ಪಿಕೊಂಡಿರುವ ಒಮದು ಕಲ್ಪನೆ. ಈ ವಿಮರ್ಶಾತ್ಮಕ ಕಲ್ಪನೆಯನ್ನು ಪ್ರಸಕ್ತ ಆಳ್ವಿಕೆ ಧ್ವಂಸ ಮಾಡ ಬಯಸುವಂತೆ ಕಾಣುತ್ತದೆ. ನಮಗೆ ಗೊತ್ತಿದೆ– ಇದು ಬಾರತಕ್ಷ್ಟೇ ಸೀಮಿತವಾದ ಸಮಸ್ಯೆಯಲ್ಲ" ಎಂದಿರುವ ಈ ಪ್ರಾಧ್ಯಾಪಕರುಗಳು ತಾವು ಅತ್ಯಂತ ಆತಂಕದಿಂದ ಜೆಎನ್‌ಯುನಲ್ಲಿ ಅನಾವರಣಗೊಳ್ಳುತ್ತಿರುವ ಪರಿಸ್ಥಿತಿಯನ್ನು ಗಮನಿಸುತ್ತಿದ್ದೇವೆ, ಕಾನೂನಬಾಹಿರ ಕ್ರಮಗಳು ನಡೆಯುತ್ತಿರುವಾಗ ನಾವು ಸುಮ್ಮನಿರಲು ಸಾಧ್ಯವಿಲ್ಲ ಎಂದು ಹೇಳಿದ್ದಾರೆ.

ಭಾರತದ ವಿಜ್ಞಾನಿಗಳು, ಪ್ರಾಧ್ಯಾಪಕರಿಂದ ಜೆಎನ್‌ಯು ಉಪಕುಲಪತಿಗೆ ಪತ್ರ

ಐಐಎಸ್‌ಸಿ, ಐಐಟಿಗಳು, ಐಐಎಂಗಳು ಮುಂತಾದ ದೇಶದ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಂಶೋಧನೆ, ಬೋಧನೆಗಳಲ್ಲಿ ತೊಡಗಿರುವ 379 ಪ್ರಾಧ್ಯಾಪಕರು, ವಿಜ್ಞಾನಿಗಳು ಮುಂತಾದವರು ಜೆನ್‌ಯು ಉಪಕುಲಪತಿಗೆ ಪತ್ರ ಬರೆದು ವಿವಿ ಆಡಳಿತ ತನ್ನ ವಿದ್ಯಾರ್ಥಿಗಳನ್ನು ದಾಳಿಗಳಿಂದ ರಕ್ಷಿಸುವಲ್ಲಿ ವಿಫಲವಾಗಿದೆ, ಇದನ್ನು ಸರಿಪಡಿಸಬೇಕು, ಅಭಿವ್ಯಕ್ತಿಯ ಸ್ವಾತಂತ್ರ್ಯವನ್ನು ರಕ್ಷಿಸಬೇಕು, ಭಿನ್ನಮತದ ದಮನವನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಮಾಧ್ಯಮಗಳವರಿಗೆ ಏಕೆ ಹೇಳಿಲ್ಲ, ನಿಮ್ಮ ಕುಲಪತಿಗಳು, ನಿಮ್ಮ ರಿಜಿಸ್ಟ್ರಾರ್ ಏಕೆ ಹೇಳಿಲ್ಲ ಎಂದು ಕೇಳಿ. ಆ ಕೆಲವರೇ 'ಪಾಕಿಸ್ತಾನ್ ಜಿಂದಾಬಾದ್' ಎಂದು ತಾವು ಕೂಗಲಿಲ್ಲವೆಂದು, ತಾವು ಭಯೋತ್ಪಾದನೆಯನ್ನು ಬೆಂಬಲಿಸುವುದಿಲ್ಲ ಎಂದು ಹೇಳುತ್ತಿದ್ದರಲ್ಲಾ ಎಂದು ಕೇಳಿ. ಆ ಕೆಲವರೇ ಮೊದಲು ಅನುಮತಿ ಕೊಟ್ಟು, ನಂತರ ಹಿಂತೆಗೆದುಕೊಂಡದ್ದೇಕೆ, ಇದು ಪ್ರಜಾಪ್ರಭುತ್ವದ ಹಕ್ಕಿನ ಮೇಲಿನ ಹಲ್ಲೆಯಲ್ಲವೇ ಎಂದು ಕೇಳಿದ್ದರಲ್ಲವೇ? ಎಲ್ಲಿ ಪ್ರಜಾಪ್ರಭುತ್ವ ಹಕ್ಕಿಗಾಗಿ ಹೋರಾಟ ನಡೆಯುತ್ತದೆಯೋ, ಅಲ್ಲಿ ಅದನ್ನು ಬೆಂಬಲಿಸುತ್ತೇವೆ ಎಂದು ಅವರು ಹೇಳಿದ್ದರಲ್ಲವೇ ಎಂದು ಎಬಿವಿಪಿಯವರನ್ನು ಕೇಳಿ.

ಇಷ್ಟೆಲ್ಲ ಅವರಿಗೆ (ಎಬಿವಿಪಿ) ಅರ್ಥವಾಗುವುದಿಲ್ಲ. ಆದರೆ ಈ ಸಭೆ ಇದೆಯೆಂದು ಹೇಳಿದ ಸ್ವಲ್ಪ ಸಮಯದಲ್ಲೇ ಇಲ್ಲಿ ಬಂದು ಸೇರಿರುವ ನಿಮಗೆ ಅರ್ಥವಾಗುತ್ತದೆ–ಎಬಿವಿಪಿ ಈ ದೇಶವನ್ನು ಒಡೆಯುತ್ತದೆ, ಜೆ.ಎನ್.ಯು ಅನ್ನು ಒಡೆಯುತ್ತಿದೆ ಎಂದು. ಆದರೆ ಜೆ.ಎನ್.ಯು.ವನ್ನು ಒಡೆಯಲು ನಾವು ಬಿಡುವುದಿಲ್ಲ.

ಜೆ.ಎನ್.ಯು. ಜಿಂದಾಬಾದ್, ಈ ದೇಶದೆಲ್ಲೆಡೆ ನಡೆಯುವ ಪ್ರಜಾಪ್ರಭುತ್ವ ಹೋರಾಟಗಳಲ್ಲಿ ಭಾಗವಹಿಸುತ್ತೇವೆ. ಇನ್ನು ಮುಂದೆಯೂ ಪ್ರಜಾತಂತ್ರದ ದನಿಯನ್ನು, ಸ್ವಾತಂತ್ರ್ಯದ ದನಿಯನ್ನು, ಅಭಿವ್ಯಕ್ತಿ ಸ್ವಾತಂತ್ರ್ಯದ ದನಿಯನ್ನು ಗಟ್ಟಿಗೊಳಿಸುತ್ತೇವೆ. ಸಂಘರ್ಷ ನಡೆಸುತ್ತೇವೆ, ಗೆಲ್ಲುತ್ತೇವೆ, ಈ ದೇಶಕ್ಕೆ ದ್ರೋಹ ಬಗೆಯುವವರನ್ನು ಸೋಲಿಸುತ್ತೇವೆ.

ಈ ಮಾತಿನೊಂದಿಗೆ ನಿಮಗೆ ಕೃತಜ್ಞತೆ ಸಲ್ಲಿಸುತ್ತೇನೆ, ಐಕ್ಯತೆಯಿರಲಿ ಎಂದು ಮನವಿ ಮಾಡಿಕೊಳ್ಳುತ್ತೇನೆ.

ಜೈಭೀಮ್, ಲಾಲ್ ಸಲಾಮ್.

(ಕನ್ನಡ ಅನುವಾದ ಕೃಪೆ:
ಡಾ. ಅಶೋಕ್.ಕೆ.ಆರ್, www.hingyake.in)

.............ಈ ಹತ್ತು ದಿನಗಳು

ಪುಟ 7 ರಿಂದ

ಸಲ್ಲಿಸಲಾಯಿತು, ಅದರಲ್ಲಿ ತನಿಖೆಯ ಮೊದಲೇ 8 ವಿದ್ಯಾರ್ಥಿಗಳನ್ನು ಡಿಬಾರ್ ಮಾಡಿರುವುದನ್ನು ಪ್ರಶ್ನಿಸಿ ಆ ಕ್ರಮವನ್ನು ಹಿಂತೆಗೆದುಕೊಳ್ಳಬೇಕೆಂದು ಆಗ್ರೆಹಿಸಲಾಯಿತು. ಮುಷ್ಕರ ನಡೆಸಬೇಡಿ, ವಿವಿ ಆವರಣದಲ್ಲಿ ಶಾಂತಿ ಕಾಪಾಡಿ ಎಂದು ಮನವಿ ಮಾಡಿಕೊಂಡ ಉಪಕುಲಪತಿಗಳು ಈ ಬಗ್ಗೆ ಮಾತ್ರ ಚಕಾರ ಶಬ್ದವೆತ್ತಲಿಲ್ಲ.

ಜೆಎನ್‌ಯು ಅಧ್ಯಾಪಕರಿಂದಲೂ ವಿದ್ಯಾರ್ಥಿಗಳ ಮುಷ್ಕರಕ್ಕೆ ಬೆಂಬಲ.

***

ಅತ್ತ ಕನ್ಹೈಯ ಅವರ ನ್ಯಾಯಾಂಗ ಕಸ್ಟಡಿಯ ನಂತರ ವಿಚಾರಣೆ ಮಾಡಬೇಕಾಗಿದ್ದ ಪಾಟಿಯಾಲ ಹೌಸ್ ಕೋರ್ಟ್ ಆವರಣದಲ್ಲಿ ಸಂಘ ಪರಿವಾರದ ವಕೀಲರ ಅಥವ ವಕೀಲರ ವೇಷದಲ್ಲಿದ್ದ ಗೂಂಡಾ ಗಳ ದಾಂಧಲೆ, ವಿದ್ಯಾರ್ಥಿಗಳು, ಅಧ್ಯಾಪಕರು ಮಾತ್ರವಲ್ಲ ಪತ್ರಕರ್ತರ ಮೇಲೂ ಸ್ವತಃ ಬಿಜೆಪಿ ಶಾಸಕ ಓ.ಪಿ.ಶರ್ಮ ನೇತೃತ್ವ ದಲ್ಲೇ ಹಲ್ಲೆ. ಭಾರೀ ಸಂಖ್ಯೆಯಲ್ಲಿ ಇದ್ದರೂ ಮೂಕಪ್ರೇಕ್ಷಕರಾಗಿದ್ದ ದಿಲ್ಲಿ ಪೋಲಿಸ್.



ಫೆಬ್ರುವರಿ 16: ರಾಷ್ಟ್ರೀಯ ಪತ್ರಿಕೆಗಳ ಸಂಪಾದಕರುಗಳು, ಹಿರಿಯ ಪತ್ರಕರ್ತರ ನೇತೃತ್ವದಲ್ಲಿ ಪತ್ರಕರ್ತರ ಪ್ರತಿಭಟನೆ, ಪ್ರೆಸ್ ಕ್ಲಬ್‌ನಿಂದ ಸುಪ್ರಿಂ ಕೋರ್ಟ್ ವರೆಗೆ ಮೆರವಣಿಗೆ, ಸುಪ್ರಿಂ ಕೋರ್ಟಿನ ರಿಜಿಸ್ಟ್ರಾರ್‌ಗೆ ಸಂಬಂಧಪಟ್ಟ ವಕೀಲರ ಲೈಸೆನ್ಸ್ ರದ್ದು ಮಾಡಲು, ಪೋಲೀಸ್ ಕಮಿಶನರ್ ಬಸ್ಸಿಯನ್ನು ವಜಾ ಮಾಡಲು ಆಗ್ರಹ, ಗೃಹಮಂತ್ರಿಗಳ ಬಳಿಯೂ ಪತ್ರಕರ್ತರ ನಿಯೋಗ.

ಆದರೂ, ಸಣ್ಣ ಹೊಡೆದಾಟ ತಾನೇ, ಯಾರದ್ದೂ ಕೊಲೆಯಾಗಲಿಲ್ಲವಲ್ಲ ಎಂದು ಮೋದಿ ಸರಕಾರದ ಗೃಹ ರಾಜ್ಯಮಂತ್ರಿಯ ಭಂಡತನದ ಮಾತು.

ಈ ನಡುವೆ, ಕನ್ಹೈಯಗೆ ನ್ಯಾಯ ಪಡೆಯಲು ಮುಕ್ತ ಮತ್ತು ನ್ಯಾಯಯುತ ಅವಕಾಶವನ್ನು ಲಭ್ಯಗೊಳಿಸಬೇಕು ಎಂದು ಕೆಲವು ಹಿರಿಯ ವಕೀಲರಿಂದ ಸುಪ್ರಿಂ ಕೋರ್ಟಿಗೆ ಅರ್ಜಿ, ಪರಿಸ್ಥಿತಿಯ ಗಂಭೀರತೆಯನ್ನು ಅರಿತು ಈ ಬಗ್ಗೆ ವಿಚಾರಣೆಯನ್ನು ಫೆ.17 ರಂದು ಕೈಗೆತ್ತಿಕೊಳ್ಳಲು ಒಪ್ಪಿದ ಸುಪ್ರಿಂ ಕೋರ್ಟ್ ಕನ್ಹೈಯಗೆ ರಕ್ಷಣೆ ಕೊಡಲು, **ದೇಶದ ರಾಜಧಾನಿಯ ಪೋಲೀಸ್‌ಗೆ ದೇಶದ ಸರ್ವೋಚ್ಚ ನ್ಯಾಯಾಲಯ ಆದೇಶ ನೀಡಬೇಕಾದ ಪರಿಸ್ಥಿತಿ.**

***

ಫೆಬ್ರುವರಿ 17: ಸರ್ವೋಚ್ಚ ನ್ಯಾಯಾಲಯದ ಆದೇಶವನ್ನೂ ಲೆಕ್ಕಿಸದೆ ಫೆ.15ರ ದಾಂಧಲೆಯ ಪುನರಾವರ್ತನೆ, ಅದೇ 'ವಕೀಲ'ರಿಂದ. ಕುಪಿತಗೊಂಡ ಸುಪ್ರಿಂ ಕೋರ್ಟ್ ಆರು ಹಿರಿಯ ವಕೀಲರ ತಂಡವನ್ನು ಪಾಟಿಯಾಲ ಹೌಸ್ ಕೋರ್ಟ್‌ಗೆ ಕಳಿಸಬೇಕಾಯಿತು. ಈ ನಡುವೆ ಕನ್ಹೈಯ ಕುಮಾರ್ ಮೇಲೆ ಪೋಲೀಸ್ ರಕ್ಷಣೆಯ ನಡುವೆಯೂ ಹಲ್ಲೆ. **ಸ್ವತಃ ಸುಪ್ರಿಂ ಕೋರ್ಟ್ ಕಳಿಸಿದ ಹಿರಿಯ ವಕೀಲರನ್ನು ಕೂಡ 'ಪಾಕಿಸ್ತಾನದ ದಲ್ಲಾಳಿಗಳು' ಎಂದು ಜರೆಯಲಾಯಿತು, ತಮ್ಮ ಮೇಲೆ ಹೂದಾನಿಗಳನ್ನು, ಬಾಟಲ್‌ಗಳನ್ನು, ಕಲ್ಲುಗಳನ್ನು ತೂರಲಾಯಿತು ಎಂದು ಅವರು ಸುಪ್ರಿಂ ಕೋರ್ಟ್‌ಗೆ ವರದಿ ಮಾಡಿದ್ದಾರೆ.** ಈ ಹಿನ್ನೆಲೆಯಲ್ಲಿ ಕನ್ಹೈಯ ಅವರ ರಕ್ಷಣೆ ಪೋಲೀಸ್ ಕಮಿಶನರ್ ಅವರ ವೈಯಕ್ತಿಕ ಹೊಣೆ ಎಂದು ನ್ಯಾಯಾಲಯ ಹೇಳಬೇಕಾಗಿ ಬಂತು.



***

ಈ ನಡುವೆ ಜೆಎನ್‌ಯುನಲ್ಲಿ ಮೂವರು ಎಬಿವಿಪಿ ಮುಖಂಡರು ಮೋದಿ ಸರಕಾರ ನಡೆದುಕೊಂಡಿರುವ ರೀತಿಯಿಂದ ಬೇಸತ್ತು ರಾಜೀನಾಮೆ ನೀಡಿದ್ದಾರೆ. ಎಬಿವಿಪಿಯ ಜೆಎನ್‌ಯು ಘಟಕದ ಜಂಟಿ ಕಾರ್ಯದರ್ಶಿ ಪ್ರದೀಪ್ ನರ್ವಾಲ್, ಜೆಎನ್‌ಯುನ ಸ್ಕೂಲ್ ಆಫ್ ಸೋಶಿಯಲ್ ಸೈನ್ಸಸ್‌ನ ಎಬಿವಿಪಿ ಘಟಕದ ಅಧ್ಯಕ್ಷ ರಾಹುಲ್ ಯಾದವ್ ಮತ್ತು ಅದರ ಕಾರ್ಯದರ್ಶಿ ಅಂಕಿತ್ ಹಂಸ್ ಒಂದು ಜಂಟಿ ಹೇಳಿಕೆಯಲ್ಲಿ "ವಿಚಾರಣೆ ನಡೆಸುವುದು ಮತ್ತು ಸಿದ್ಧಾಂತವನ್ನು ಹತ್ತಿಕ್ಕುವುದು ಮತ್ತು ಸಮಸ್ತ ಎಡಪಂಥೀಯರನ್ನು ರಾಷ್ಟ್ರ–ವಿರೋಧಿಗಳೆಂದು ಬ್ರಾಂಡ್ ಮಾಡುವುದರ ನಡುವೆ ವ್ಯತ್ಯಾಸವಿದೆ" ಎಂದಿದ್ದಾರೆ.

"ಪ್ರಸಕ್ತ ಜೆಎನ್‌ಯು ಘಟನೆಯ ಬಗ್ಗೆ ಮತ್ತು ಮನುಸ್ಮೃತಿ(ಸ್ಮೃತಿ ಇರಾನಿ) ಮತ್ತು ರೋಹಿತ್ ವೆಮುಲ ಘಟನೆಯ ಬಗ್ಗೆ ದೀರ್ಘಕಾಲದ ಭಿನ್ನಾಭಿಪ್ರಾಯಗಳಿಂದಾಗಿ" ತಾವು ಎಬಿವಿಪಿಗೆ ರಾಜೀನಾಮೆ ಕೊಡುವುದಾಗಿ ಮತ್ತು ಪಕ್ಷದ ಎಲ್ಲ ಚಟುವಟಿಕೆಗಳಿಂದ ಸಂಪರ್ಕ ಕಡಿದುಕೊಳ್ಳುವುದಾಗಿ ಅವರ ಜಂಟಿ ಹೇಳಿಕೆ ಹೇಳುತ್ತದೆ

***

ಫೆಬ್ರುವರಿ 18: ದೇಶದ ರಾಜಧಾನಿಯಲ್ಲಿ 20ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು, ಅಧ್ಯಾಪಕರು, ಕಾರ್ಮಿಕರು, ನಾಗರಿಕರು ಭಾಗವಹಿಸಿದ್ದ 'ಜೆಎನ್‌ಯು ಉಳಿಸಿ' ಬೃಹತ್ ರ್‍ಯಾಲಿ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ರಕ್ಷಣೆ, ಕನ್ಹೈಯ ಮೇಲಿನ ರಾಜದ್ರೋಹದ ಆಪಾದನೆಯನ್ನು ಹಿಂತೆಗೆದುಕೊಳ್ಳಬೇಕು, ಜೆಎನ್‌ಯು ಕ್ಯಾಂಪಸ್‌ನಿಂದ ಪೋಲೀಸರನ್ನು ಹಿಂತೆಗೆದುಕೊಳ್ಳಬೇಕು, ವಿದ್ಯಾರ್ಥಿಗಳ ಬೇಟೆಯನ್ನು ನಿಲ್ಲಿಸಬೇಕು ಮತ್ತು ಅಯೋಗ್ಯ ಪೋಲೀಸ್ ಕಮಿಶನರ್ ಬಸ್ಸಿಯನ್ನು ವಜಾ ಮಾಡಬೇಕು ಎಂಬ ಬೇಡಿಕೆಗಳು ಮೊಳಗಿದವು.



***

ಪಾಟಿಯಾಲಾ ಹೌಸ್ ಕೋರ್ಟ್ ಆವರಣದಲ್ಲಿ ನಿಜವಾಗಿಯೂ ವಿಶಿಷ್ಟ ಪರಿಸ್ಥಿತಿ ಉಂಟಾಗಿದೆ ಎಂದು ಸುಪ್ರಿಂ ಕೋರ್ಟ್.


ಸಂವಿಧಾನದ ಕಲಮು 32 ರ ಅಡಿಯಲ್ಲಿ ಜಾಮೀನು ಕೊಡಬೇಕೆಂದು ನೇರವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಕನ್ಹೈಯ ಕುಮಾರ್ ಅರ್ಜಿ.

ಫೆಬ್ರುವರಿ 19: ಸುಪ್ರಿಂ ಕೋರ್ಟ್ ಅದನ್ನು ದಿಲ್ಲಿ ಹೈಕೋರ್ಟಿಗೆ ಕಳಿಸ ಬೇಗನೇ ಕೈಗೆತ್ತಿಕೊಳ್ಳುವಂತೆ ಹೇಳಿದೆ, ಪಾಟಿಯಾಲ ಹೌಸ್ ಕೋರ್ಟ್‌ಗೆ ಹೊಗುವ ಅಗತ್ಯವಿಲ್ಲ ಎಂದಿದೆ, ಹಾಗೂ ಕನ್ಹೈಯ, ಆತನ ವಕೀಲರು ಮತ್ತು ಪತ್ರಕರ್ತರಿಗೆ ಭದ್ರತೆಯ ವ್ಯವಸ್ಥೆ ಮಾಡಬೇಕೆಂದು ಕೇಂದ್ರ ಸರಕಾರಕ್ಕೆ ಆದೇಶ ನೀಡಿದೆ.



ವ್ಯಂಗ್ಯಚಿತ್ರ ಕೃಪೆ: ಸತೀಶ್ ಆಚಾರ್ಯ

ಕ್ಯಾಸ್ಟ್ರೋ ಕಥೆ-4



ಬಂಡಾಯ ಪ್ರವೃತ್ತಿ

ಪಾಳೇಗಾರಿಯಾಗಿದ್ದ ಫ್ರೆಂಚ್ ಶಿಸ್ತನ್ನು ಅನುಸರಿಸಲು ಇಷ್ಟವಾಗುತ್ತಿರಲಿಲ್ಲ. ಒಂದು ದಿನ, 'ನಾನಿದನ್ನು ಮಾಡುವುದಿಲ್ಲ' – ಬಾಲಕ ಫಿಡೆಲ್ ಸಿಡಿದೆದ್ದ. 'ಯಾವುದೇ ಇತರ ಕೆಲಸಗಳನ್ನು ನಾನು ಮಾಡುವುದಿಲ್ಲ' ಎಂದು ಫಿಡೆಲ್‌ನಲ್ಲಿ ಬಂಡಾಯ ಧ್ವನಿಸಿತ್ತು. ಇವರ ಬಂಡಾಯವಿದ್ದದ್ದು ಫ್ರೆಂಚ್ ರೀತಿ–ನೀತಿಗಳ ಕುರಿತಂತಲ್ಲ. ಬದಲಿಗೆ ಇವರಿಗೆ ಅವುಗಳಿಂದುಂಟಾದ ನೋವುಗಳ ವಿರುದ್ಧ.


ಮೂಲ: ಇಗ್ನೇಶಿಯಸ್ ರಾಮೊನೆಟ್
ಸಂಗ್ರಹಾನುವಾದ : ಕೆ. ಪ್ರಕಾಶ್

ಫಿಡೆಲ್‌ಗೆ ಒಮ್ಮೆ ದಡಾರ ಬಂದಿತ್ತು. ಇವರ ತಂದೆ ನೋಡಲು ಬಂದರು. ಒಣಗಿದ ಬಡಕಲು ದೇಹವನ್ನು ಕಂಡರು. ಆದರೆ ಅವರಿಗೆ ನಿಜ ಪರಿಸ್ಥಿತಿ ಅರ್ಥವಾಗಲಿಲ್ಲ. ಮತ್ತೊಂದು ದಿನ ತಾಯಿ ಬಂದರು. ಅಷ್ಟೊತ್ತಿಗೆ ಶಿಕ್ಷಕಿಯ ಕುಟುಂಬ ಮತ್ತಷ್ಟು ಉತ್ತಮವಾದ ವಾಸದ ಮನೆಗೆ ಬಂದಿದ್ದರು. ಜೊತೆಗೆ ರೇಮೊನ್, ಫಿಡೆಲ್ ಮತ್ತು ಏಂಜೆಲಿಟಾ ಮೂರೂ ಮಕ್ಕಳಿಂದ ತಿಂಗಳಿಗೆ 120 ಪೆಸೋಗಳಷ್ಟು ಉತ್ತಮವಾದ ಆದಾಯ ಬರುತ್ತಿತ್ತು. ಮೂರೂ ಮಕ್ಕಳು ಅತ್ಯಂತ ಕೃಷರಾಗಿ ದುರ್ಬಲವಾಗಿರುವುದನ್ನು ಕಂಡ ತಾಯಿಯ ಕರುಳು ಕಣ್ಣೀರಿಟ್ಟಿತು. ತಾಯಿ ನಗರದ ಅತ್ಯಂತ ಹೆಸರಾಂತ 'ಲಾ ನುವಿಯೊಲ' ಕೆಫೆಗೆ ಇವರನ್ನು ಕರೆದೊಯ್ದರು. ಅಲ್ಲಿ ಫಿಡೆಲ್ ಐಸ್‌ಕ್ರೀಂನ ಪ್ರತಿಯೊಂದು ತುಣುಕನ್ನೂ ಸವಿದರು. ತಾಯಿ ತಂದಿದ್ದ ಚಿಕ್ಕ ಗಾತ್ರದ ಆದರೆ ಅತಿ ರುಚಿಯಾದ 'ಟಾಲೆಡೊ ಮಾವಿನ ಹಣ್ಣು'ಗಳ ಬುಟ್ಟಿಯನ್ನು ಕೆಲವೇ ನಿಮಿಷಗಳಲ್ಲಿ ಖಾಲಿ ಮಾಡಿದರು. ಮಾರನೆ ದಿನ ಮಕ್ಕಳನ್ನು ಬೈರನ್‌ನ ಮನೆಗೆ ವಾಪಸ್ ಕ–ರೆದೊಯ್ದರು. ಬೈರನ್ ಸಕಲೈಶ್ವರ್ಯದ ಸ್ವರ್ಗವಾಗಿ ಕಂಡಿತು. ಮೊದಲ ದಿನದ ಕೊನೆಯಲ್ಲಿ ಇವರ ಪೋಷಕರು 'ಈ ಸೂಪ್ ಕುಡಿಯಿರಿ, ಈ ಮಾಂಸವನ್ನು ತಿನ್ನಿರಿ, ಇದನ್ನು ತಿನ್ನಿ, ಅದನ್ನು ತಿನ್ನಿ' ಎಂದು ಬಲವಂತ ಮಾಡುವಷ್ಟರ ಮಟ್ಟಿಗೆ ಇವರ ಇಡೀ ದಿನದ ಆಹಾರ ಸೇವನೆ ನಡೆದಿತ್ತು!.

ಶಿಕ್ಷಕಿಯ ಮೇಲೆ ಪ್ರತೀಕಾರ

ಶಿಕ್ಷಕಿಯ ಮೇಲೆ ಕೋಪ ವಿಪರೀತವಾಗಿತ್ತು. ಒಮ್ಮೆ ರಜೆಯ ಸಂದರ್ಭದಲ್ಲಿ ಬೈರನ್‌ಲ್ಲಿದ್ದಾಗ ಶಿಕ್ಷಕಿಯು ಇಲ್ಲಿಗೇ ಬಂದು ಇವರಿಗೆ ಪಾಠಗಳನ್ನು ಹೇಳಕೊಡುತ್ತಿದ್ದ ಸಂದರ್ಭ – ಫಿಡೆಲ್ ಮತ್ತು ರೇಮೊನ್ ಸೇರಿ ಆಕೆಯ ವಿರುದ್ಧ ಒಂದು ರೀತಿಯ ಸೇಡಿನ ಯೋಜನೆಯೊಂದನ್ನು ರೂಪಿಸಿದರು. ಶಿಕ್ಷಕಿ ವಾಸಿಸುತ್ತಿದ್ದ ಮನೆಯ ಮೇಲ್ಚಾವಣಿ ಜಿಂಕ್ ಶೀಟುಗಳ ಮೇಲೆ ಕ್ಯಾಟರ್‌ಬಿಲ್ಲುಗಳಿಂದ ಕಲ್ಲುಗಳನ್ನು ಸತತವಾಗಿ ಸುರಿಯುವಂತೆ ಮಾಡಿ ಆ ಶಬ್ದಕ್ಕೆ ಶಿಕ್ಷಕಿ ಚೀರಾಡುವಂತೆ ಮಾಡಿದ್ದರು. ಇದನ್ನು 'ಓಹ್ ನಾವು ಪ್ರತೀಕಾರ ಪ್ರವೃತ್ತಿಯ ಪುಟ್ಟ ಮೊಂಡರಾಗಿದ್ದೆವು' ಎನ್ನುತ್ತಾರೆ ಫಿಡೆಲ್. ಆ ನಂತರ ಶಿಕ್ಷಕಿಯ ಜೊತೆ ಸಂಧಾನ ಮಾಡಿದ ಪೋಷಕರು ಫಿಡೆಲ್ ಮತ್ತು ಏಂಜೆಲಿಟಾರನ್ನು ಕಳುಹಿಸಿಕೊಟ್ಟರು. ರೇಮೊನ್‌ಗೆ ಆಸ್ತಮಾ ಇದ್ದುದರಿಂದ ಬಚಾವಾಗಿದ್ದ!

1935 ಜನವರಿಯಲ್ಲಿ ಫಿಡೆಲ್ 'ಕಾಲೇಜಿಯೊ ಡಿ ಲಾ ಸಾಲ್ಲೆ'ಯ ಮೊದಲ ತರಗತಿಯ ವಿದ್ಯಾರ್ಥಿಯಾಗಿ ಸೇರಿದ. ಇದೇ ಮೊದಲ ಬಾರಿಗೆ ನಿಜವಾದ ತರಗತಿಗಳಿಗೆ ಹೋಗಲು ಪ್ರಾರಂಭವಾಯಿತು. ಇದೇ ಸಂದರ್ಭಕ್ಕೆ ಮಚಾಡೊನ ಪತನವಾಗಿ ಬಟಿಸ್ಟಾನ ಕಾರ್ಯಾಚರಣೆ ನಡೆದಿತ್ತು 1935 ಮಾರ್ಚ್‌ನಲ್ಲಿ ಬೃಹತ್ ಮುಷ್ಕರ ಜರುಗಿತ್ತು. ಇವರು ವಾಸಿಸುತ್ತಿದ್ದ



ಹಿಂಬದಿಯಲ್ಲೆ ಪ್ರೌಢಶಾಲೆಯಿತ್ತು. 'ಇನ್ಸ್‌ಟಿಟ್ಯುಟೊ ಡಿ ಸೆಗುಂಡ ಎನ್ಸ್‌ಸೆನಂಜ಼ಾ' (instituto de segunda ensenanza) ಶಾಲೆಯನ್ನು ನಂತರ ಮಿಲಿಟರಿ ವಶಪಡಿಸಿಕೊಂಡು ತನ್ನ ನೆಲೆಯನ್ನಾಗಿ ಮಾಡಿಕೊಂಡಿತ್ತು. ಇಪ್ಪತ್ತೊಂದು ವರ್ಷಗಳ ನಂತರ ಫಿಡೆಲ್ ಮತ್ತು ಗೆಳೆಯರು ಮೆಕ್ಸಿಕೋದಿಂದ ಬಂದು ಲಾಸ್ ಕೊಲೊರಾಡಾಸ್‌ನಲ್ಲಿ 1956 ನವೆಂಬರ್ 30ರಂದು ಇಳಿದ ದಿನವೇ ಇದರ ಮೇಲೆ ದಾಳಿ ಮಾಡಬೇಕೆಂದು ಜುಲೈ 26ರ ಚಳುವಳಿ3ಯ ಫ್ರಾಂಕ್ ಪಯಸ್4ನ ನೇತೃತ್ವದಲ್ಲಿ ತೀರ್ಮಾನಿಸಿದ್ದರು. ಆದರೆ ಫಿಡೆಲ್ ಮತ್ತು ಗೆಳೆಯರಿದ್ದ ಗ್ರಾನ್ಮಾ ದೋಣಿಯು ಸಮುದ್ರದ ಏರಿಳಿತಗಳಿಂದಾಗಿ ನಲವತ್ತೆಂಟು ಗಂಟೆ ತಡವಾಗಿ ತಲುಪಿತು.

ಯೆಹೂದಿ ಫಿಡೆಲ್ !

ಈ ನಡುವೆ ಪಿಯಾನೋ ಶಿಕ್ಷಕಿ ಮತ್ತು ಹೈಟಿಯ ರಾಯಭಾರಿ ಲೂಯಿಸ್ ಹೈಬರ್ಟ್ ನಡುವೆ ಪ್ರೇಮಾಂಕುರವಾಗಿ ಮದುವೆಯಾದರು. ಇವರ ಸ್ಥಿತಿ–ಗತಿ ಮತ್ತು ಸ್ಥಾನಮಾನಗಳು ಬದಲಾದವು. ಹೀಗಾಗಿ ಮತ್ತಷ್ಟು ಉತ್ತಮವಾದ ಇನ್ನೊಂದು ಮನೆಗೆ ಮಕ್ಕಳ ವಾಸ ಬದಲಾಯಿತು. ಆದಾಯ ಹೆಚ್ಚಿದ್ದರಿಂದ ಊಟವೂ ಉತ್ತಮಗೊಂಡಿತ್ತು. ಇವರು ಒಳ್ಳೆಯ ಜನರಾಗಿದ್ದರು. ಇವರನ್ನು ಮೆಸ್ಟಿಜೋಸ್5 ಎಂದು ಕ್ಯಾಸ್ಟ್ರೋ ಕರೆದಿದ್ದಾರೆ. ಇವರೇ ಫಿಡೆಲ್‌ಗೆ 8ನೇ ವಯಸ್ಸಿನಲ್ಲಿ ದೀಕ್ಷೆ (ಕ್ರೈಸ್ತೀಕರಣ) ಕೊಡಿಸಿದ್ದು. ಆಗ ಫಿಡೆಲ್‌ರನ್ನು 'ಯೆಹೂದಿ' (Jew) ಎಂದು ಕರೆಯುತ್ತಿದ್ದರು. ಯಾರು ಕ್ರೈಸ್ತ ದೀಕ್ಷೆ ಹೊಂದಿರುವುದಿಲ್ಲವೋ ಅವರನ್ನು ಯೆಹೂದಿ ಎಂದು ಕರೆಯಲಾಗುತ್ತಿತ್ತು. ಈ ಶಬ್ದವು ಮೂಲತಃ ಧಾರ್ಮಿಕ ಪೂರ್ವಾಗ್ರಹಕ್ಕೆ ಮತ್ತು ಯೆಹೂದಿಯರ ವಿರೋಧಕ್ಕೆ ಬಳಸಲಾಗುತ್ತಿತ್ತು. ಫಿಡೆಲ್‌ಗೆ ಈ ಶಬ್ದ ಯಾಕೆ ಕರೆ–ಯುತ್ತಿದ್ದರೋ ಅರ್ಥವಾಗುತ್ತಿರಲಿಲ್ಲ. ಆ ಸಂದರ್ಭದ ಪೂರ್ವಾಗ್ರಹಗಳನ್ನು ಇಲ್ಲಿ ಗಮನಿಸಬಹುದು.

ಫಿಡೆಲ್‌ರ ತಂದೆಯ ಲಕ್ಷಾಧೀಶ ಸ್ನೇಹಿತರೊಬ್ಬರು ಬಾಲಕ ಫಿಡೆಲ್‌ಗೆ ಕ್ರೈಸ್ತ ದೀಕ್ಷೆ ಮಾಡಿಸುವ ಬಗ್ಗೆ ಮತ್ತು ಅದರಿಂದಾಗಿ ಗಾಢ್‌ಫಾದರ್6 ಆಗುವ ಬಗ್ಗೆ ಯೋಜಿಸಲಾಗಿತ್ತು. ಅವರ ಹೆಸರು ಫಿಡೆಲ್ ಪಿನೋ ಸ್ಯಾಂಟೋಸ್. ಇದರಿಂದಲೇ ಕ್ಯಾಸ್ಟ್ರೋಗೆ ಫಿಡೆಲ್ ಹೆಸರು ಬಂದಿರುವುದು. ಆದರೆ ಸಮಯ ಹೊಂದಾಣಿಕೆಯಾಗದೆ ಅವರು ಬರಲಿಲ್ಲ. ಹೀಗಾಗಿ ಪಿಯಾನೋ ಶಿಕ್ಷಕಿ ಮತ್ತು ಹೈಟಿ ರಾಯಭಾರಿ ಫಿಡೆಲ್‌ರ ಧರ್ಮಮಾತೆ ಮತ್ತು ಧರ್ಮಪಿತರಾದರು. ಧರ್ಮಪಿತನಾದ ಹೈಟಿ ರಾಯಭಾರಿ ಒಮ್ಮೆ ಬಾಲಕ ಫಿಡೆಲ್‌ನನ್ನು ಒಂದು ದೊಡ್ಡ ಪ್ರಯಾಣಿಕರ ಹಡಗು 'ಲಾ ಸ್ಯಾಲ್ಲೆ' (La Salle) ನೋಡಲು ಕ–ರೆದೊಯ್ದರು. ಅಟ್ಲಾಂಟಿಕ್ ಆಚೆಗಿನ ಹಡಗಾಗಿದ್ದ ಅದರ ತುಂಬಾ ಕಿಕ್ಕಿರಿದು ಹೈಟಿಯನ್ನರು ಇದ್ದರು. ಲೇಬರ್ ರಾಷ್ಟ್ರೀಕರಣ ಕಾಯ್ದೆಯ ಕಾರಣದಿಂದ ಅವರನ್ನು ದೇಶದಿಂದ ಹೊರಹಾಕಲಾಗಿತ್ತು. ಫಿಡೆಲ್‌ಗೆ ಮೊದಲಿನಿಂದಲೂ ಹೈಟಿಯನ್ನರ ಬಗ್ಗೆ ತಿಳಿದಿತ್ತು. ಕ್ಯೂಬಾಗಿಂತಲೂ ಸಾಕಷ್ಟು ಬಡತನದ ಆ ದೇಶಕ್ಕೆ ಹೋಗಿ ಇವರೇನು ಮಾಡುತ್ತಾರೆಂದು ಫಿಡೆಲ್ ಯೋಚಿಸಿದರು. ಬಾಣಲೆಯಿಂದ ಬೆಂಕಿಗೆ ಎಂಬ ಸ್ಥಿತಿ ಅವರದಾಗಿತ್ತು.

ಸಕ್ಕರೆ ಸುಭಿಕ್ಷತೆಯ ಸಂದರ್ಭದಲ್ಲಿ ಕಬ್ಬನ್ನು ನೆಡಲು, ಕಟಾವು ಮಾಡಲು ಹತ್ತಾರು ಸಾವಿರ ಹೈಟಿಯನ್ನರು ಕ್ಯೂಬಾಕ್ಕೆ ಬಂದಿದ್ದರು. ಅಪಾರ ತ್ಯಾಗಗಳನ್ನು ಮಾಡಿದ ಇವರನ್ನು ಬಹುತೇಕ ಗುಲಾಮರ ರೀತಿಯಲ್ಲಿ ಅತ್ಯಂತ ಕಡಿಮೆ ಸಂಬಳಕ್ಕೆ ಸಕ್ಕರೆ ಗದ್ದೆಗಳಲ್ಲಿ ದುಡಿಸಲಾಗಿತ್ತು. ಪ್ರಾಣಿಗಳ ರೀತಿಯಲ್ಲಿ ದುಡಿಸಲಾಗುತ್ತಿದ್ದ ಇವರು ಗುಲಾಮ ಒಡೆಯನ ಆಸ್ತಿಯಾಗಿದ್ದರು. ಗುಲಾಮ ಮಾಲೀಕರು ಪ್ರಾಣಿಗಳಿಗೆ ಕನಿಷ್ಟ ಕರುಣೆಯನ್ನು ತೋರಿರಬಹುದಾದರೂ ಹೈಟಿಯನ್ನರೆಂಬ ಮನುಷ್ಯರನ್ನು ಪ್ರಾಣಿಗಳಿಗಿಂತ ಕೀಳಾಗಿ ದುಡಿಸಿಕೊಂಡರು. ಇಂತಹ ದೌರ್ಜನ್ಯಗಳ ದುರುಪಯೋಗಗಳ ವಿರುದ್ಧವೇ ವಾಸ್ತವವಾಗಿ 1933ರ ದಂಗೆ ನಡೆದದ್ದು. ಇದನ್ನು ಗಮನದಲ್ಲಿಟ್ಟುಕೊಂಡೇ ಲೇಬರ್ ರಾಷ್ಟ್ರೀಕರಣ ಕಾಯ್ದೆ ತಂದು ಹೈಟಿಯನ್ನರನ್ನು ಅತ್ಯಂತ ಅಮಾನುಷವಾಗಿ ಹೊರಹಾಕಲಾಯ್ತು. ಆಗ ಫಿಡೆಲ್‌ಗೆ ವಿಶೇಷವಾಗಿ ಇದರಿಂದ ಏನೂ ಅನ್ನಿಸದಿದ್ದರೂ ನಂತರ ಜಗತ್ತನ್ನು ಅರ್ಥಮಾಡಿಕೊಳ್ಳುವುದರಲ್ಲಿ ತುಂಬಾ ಸಹಕಾರಿಯಾಯ್ತು.

ಸಾರ್ಜೆಂಟ್ ದಂಗೆ

ಫಿಡೆಲ್ ಸರಿಸುಮಾರು ಮೂರು ವರ್ಷಗಳ ಕಾಲ ಧರ್ಮಮಾತೆಯಾದ ಶಿಕ್ಷಕಿಯ ಮನೆಯಲ್ಲಿದ್ದರು. ಒಮ್ಮೆ ಮನೆಯ ಹಿಂಬದಿಯ ತಾರಸಿಯಲ್ಲಿ ಮಲಗಿದ್ದಾಗ ಇಪ್ಪತ್ತು ಅಥವಾ ಮೂವತ್ತು ಬಾಂಬ್‌ಗಳು ಪ್ರತಿ ಕೆಲ ನಿಮಿಷಗಳಿಗೊಮ್ಮೆ ಸ್ಫೋಟಗೊಳ್ಳುತ್ತಿತ್ತು. ಬಾಂಬ್‌ಗಳು ಏಕೆ ಸಿಡಿಯುತ್ತಿವೆ, ಜನ ಯಾಕೆ ಅದನ್ನು ಸ್ಫೋಟಿಸುತ್ತಿದ್ದಾರೆ ತಿಳಿಯುತ್ತಿರಲಿಲ್ಲ. ಆ ಕಾಲಘಟ್ಟವೇ ಆ ರೀತಿಯಿತ್ತು. 1929ರ ಜಾಗತಿಕ ಮಹಾನ್ ಆರ್ಥಿಕ ಕುಸಿತದಿಂದ ದೇಶದಲ್ಲಿ ಬಡತನ ತಾಂಡವವಾಡುತ್ತಿತ್ತು. ಜೊತೆಗೆ ಮಚಾಡೊನ ಸರ್ವಾಧಿಕಾರ. ಇವುಗಳ ವಿರುದ್ಧ ಆಗಸ್ಟ್ 1933 ರವರೆಗೆ ಕ್ಯೂಬನ್ನರು ಹೋರಾಡುತ್ತಿದ್ದರು. ಆಗ ಸೈನ್ಯದಲ್ಲಿ ಸಾರ್ಜೆಂಟ್ ಆಗಿದ್ದ ಫಲ್ಗೆನ್ಸಿಯೋ ಬಟಿಸ್ಟಾನ ನಾಯಕತ್ವದಲ್ಲಿ ಕ್ಷಿಪ್ರಕ್ರಾಂತಿ ನಡೆಯಿತು. ವಿದ್ಯಾರ್ಥಿಗಳು ಮತ್ತು ಇತರೆ ಕ್ರಾಂತಿಕಾರಿ ಪಡೆಗಳೊಂದಿಗೆ ಇವರು ಸೇರಿದರು. ಸೆಪ್ಟೆಂಬರ್ 4, 1933ರಂದು ನಡೆದ ಈ ಕ್ಷಿಪ್ರಕ್ರಾಂತಿಯನ್ನು 'ಸಾರ್ಜೆಂಟ್ಸ್ ದಂಗೆ' (Sergeants Uprising) ಎಂದು ಕರೆಯಲಾಗಿದೆ. ಆ ಸಂದರ್ಭದಲ್ಲಿ ABC ಎಂಬ ಫ್ಯಾಸಿಸ್ಟ್ ಧೋರಣೆಯ ಗುಂಪಿನೊಂದಿಗೆ ಸಂಘರ್ಷ ಪ್ರಾರಂಭವಾಯಿತು. ಇದು ಸುಮಾರು ಮೂರು ತಿಂಗಳ ಕಾಲ ನಡೆದಿರಬಹುದು. ಆ ನಂತರ ಬಟಿಸ್ಟಾನ ವಿರುದ್ಧ ಹೋರಾಟ ನಡೆಸಿ ಅದು ಆತನೊಂದಿಗೇ ಸೇರಿಕೊಂಡಿತು. ಬಹುಶಃ ಈ ABC ಗುಂಪೇ ಆ ಪ್ರಮಾಣದ ಬಾಂಬ್‌ಗಳನ್ನು ಸ್ಫೋಟಿಸಿರಲು ಸಾಧ್ಯ.

ಈ ನಡುವೆ ಫಿಡೆಲ್‌ರ ಊಟದ ಪರಿಸ್ಥಿತಿ ಉತ್ತಮಗೊಂಡಿತ್ತು. ತರಕಾರಿ, ಪಲ್ಯ ಮತ್ತು ಇತರೆ ವಸ್ತುಗಳನ್ನು ನೀಡುತ್ತಿದ್ದರು. ಆದರೆ ಮಧ್ಯಾಹ್ನದೂಟ ಮಾಡಲು ಶಾಲೆಯಿಂದ ಮನೆಗೆ ಬಂದು ಹೋಗಬೇಕಾಗಿತ್ತು. ಇದು ತೀರಾ ಇಷ್ಟವಿಲ್ಲದ ಕೆಲಸವಾಗಿತ್ತು. ಫಿಡೆಲ್ ಸ್ವಯಂ–ಕಲಿಕೆಯಿಂದಲೇ ಓದುತ್ತಿದ್ದುದರಿಂದ ಆ ವಾತಾವರಣ ಕಷ್ಟವಾಗಿತ್ತು. ಆಗೆಲ್ಲಾ ಮತ್ತೆ ಬೆದರಿಕೆ ಬರುತ್ತಿತ್ತು; ಅತ್ಯಂತ ವಿನಮ್ರವಾಗಿ ನಡೆದುಕೊಳ್ಳದಿದ್ದರೆ ವಸತಿ ಶಾಲೆಗೆ ಕಳುಹಿಸುವ ಬೆದರಿಕೆ. ಫಿಡೆಲ್‌ಗೂ ಅದೇ ಬೇಕಾಗಿ–ತ್ತು. ಮೂರನೇ 'ಥ್ರೀ ಕಿಂಗ್ಸ್ ಡೇ'7 ಮುಗಿದಿತ್ತು. ಪಾಳೇಗಾರಿಯಾಗಿದ್ದ ಫ್ರೆಂಚ್ ಶಿಸ್ತನ್ನು ಅನುಸರಿಸಲು ಇಷ್ಟವಾಗುತ್ತಿರಲಿಲ್ಲ. ಒಂದು ದಿನ, 'ನಾನಿದನ್ನು ಮಾಡುವುದಿಲ್ಲ' – ಬಾಲಕ ಫಿಡೆಲ್ ಸಿಡಿದೆದ್ದ. 'ಯಾವುದೇ ಇತರ ಕೆಲಸಗಳನ್ನು ನಾನು ಮಾಡುವುದಿಲ್ಲ' ಎಂದು ಫಿಡೆಲ್‌ನಲ್ಲಿ ಬಂಡಾಯ ಧ್ವನಿಸಿತ್ತು. ಇವರ ಬಂಡಾಯವಿದ್ದದ್ದು ಫ್ರೆಂಚ್ ರೀತಿ–ನೀತಿಗಳ ಕುರಿತಂತಲ್ಲ. ಬದಲಿಗೆ ಇವರಿಗೆ ಅವುಗಳಿಂದುಂಟಾದ ನೋವುಗಳ ವಿರುದ್ಧ. ಪರಿಣಾಮವಾಗಿ ಅವರು ಇವರನ್ನು ವಸತಿ ಶಾಲೆಗೆ ಮೊದಲ ತರಗತಿಯ ಎರಡನೇ ಸೆಮಿಸ್ಟರ್‌ಗೆ ಸೇರಿಸಿದರು.

ಈ ಅವಧಿಯ ಕುರಿತು ಫಿಡೆಲ್ ಹೇಳುವುದು ಹೀಗೆ ; 'ಏನಾಗಿದೆಯೋ ಅದಕ್ಕೆ ಅವರನ್ನು ನಾನು ದೂಷಿಸುವುದಿಲ್ಲ. ಅವರು ಆ ಸಮಾಜದಲ್ಲಿ ಬದುಕುತ್ತಿದ್ದರು. ಅವರನ್ನು ವಿಕೃತರು ಅಥವಾ ಮಕ್ಕಳ ದೂಷಕರು ಅಥವಾ ಮತ್ತ್ಯಾವುದೋ ಹೆಸರಿನಿಂದ ಹೇಳುವುದಿಲ್ಲ. ಆ ಸಮಾಜ ಪೂರ್ತಿಯಾಗಿ ಅನ್ಯಾಯ, ಅಸಮಾನತೆ, ಸಂಕಷ್ಟಗಳಿಂದ ಕೂಡಿತ್ತು. ಅಲ್ಲಿ ಬದುಕುವವರು ಸಾಕಷ್ಟು ತ್ಯಾಗ ಮಾಡಬೇಕಿತ್ತು. ಆ ಸಮಾಜ ಭಯಂಕರ ಸ್ವಾರ್ಥತೆಯಿಂದ ತುಂಬಿತ್ತು. ಪರಿಣಾಮವಾಗಿ, ಹೇಗಾದರೂ ಸರಿ ಅದರಿಂದ ಲಾಭ ಮಾಡಬೇಕೆನ್ನುವ ಪರಿಸ್ಥಿತಿ ನಿರ್ಮಾಣವಾಗಿತ್ತು. ಪ್ರೀತಿ, ಕರುಣೆ, ಉದಾರತೆಗೆ ಅಲ್ಲಿ ಜಾಗವಿರಲಿಲ್ಲ. ಅವರು ಬದುಕಬೇಕಿತ್ತು. ಅದಕ್ಕೆ ಅವರು ಕಂಡು–ಕೊಂಡ ದಾರಿಯೆಂದರೆ ಶೋಷಣೆ. ಒಟ್ಟಾರೆಯಾಗಿ ಹೇಳುವುದಾದರೆ, ಅವರೊಬ್ಬ ಶ್ರೀಮಂತನ ಮಗನನ್ನು ಶೋಷಿಸುತ್ತಿದ್ದರು. ನನ್ನ ಮನೆಯಿಂದ ಕಳುಹಿಸುತ್ತಿದ್ದ ಹಣ ಆ ಬಡ ಕುಟುಂಬಕ್ಕೆ ಆಧಾರವಾಗಿತ್ತು. ನಾನು ಪರಿಸ್ಥಿತಿಗಳ ಬಲಿಪಶುವಾದೆ'. ●

PÉÃ½zÀÄÝ

ಎಲ್ಲಾ ರೈತರ ಆತ್ಮಹತ್ಯೆಗಳು ಹಸಿವು ಹಾಗೂ ನಿರುದ್ಯೋಗದಿಂದ ಸಂಭವಿಸಿದ್ದಲ್ಲ. ಅದೊಂದು ಫ್ಯಾಷನ್ ಎನಿಸಿದೆ, ಒಂದು ಪ್ರವೃತಿಯಾಗಿದೆ. ಮಹಾರಾಷ್ಟ್ರ ಸರ್ಕಾರವು ಆತ್ಮಹತ್ಯೆ ಮಾಡಿಕೊಂಡ ಕುಟುಂಬಗಳಿಗೆ ಐದು ಲಕ್ಷ ರೂಪಾಯಿ ಪರಿಹಾರ ನೀಡಿದರೆ, ಅಕ್ಕ ಪಕ್ಕದ ರಾಜ್ಯ ಏಳು ಲಕ್ಷ ರೂಪಾಯಿ ನೀಡುತ್ತಿವೆ. ಪರಿಹಾರ ಕೊಡುವುದರಲ್ಲಿಯೂ ಪೈಪೋಟಿ ಮಾಡುತ್ತಿದ್ದಾರೆ?

– ಗೋಪಾಲ್ ಶೆಟ್ಟಿ,
ಮಹಾರಾಷ್ಟ್ರದ ಬಿಜೆಪಿ ಸಂಸದ



ಕೆ.ಎಂ.ನಾಗರಾಜ್

ಬಂಡವಳಿಗರ ಸುಸ್ತಿ ಸಾಲಗಳ ಸುತ್ತ ಮುತ್ತ : ಕೊಟ್ಟವನು ಕೋಡಂಗಿ; ಇಸಕೊಂಡವನು ಈರಭದ್ರ

ಬ್ಯಾಂಕ್‌ಗಳಲ್ಲಿ ವಸೂಲಾಗದ ಆಸ್ತಿಗಳು (ಎನ್‌ಪಿಎ) ಅಂದರೆ ಸುಸ್ತಿ ಸಾಲಗಳು ಸುದ್ದಿಯಲ್ಲಿವೆ. ವಾಸ್ತವವಾಗಿ ಇವೆಲ್ಲ ದೇಶದ ದೊಡ್ಡ ಕುಳಗಳು ತಮ್ಮ ವ್ಯವಹಾರಗಳಿಗೆಂದು ಸಾರ್ವಜನಿಕ ಒಡೆತನದ ಬ್ಯಾಂಕುಗಳಿಂದ ಸುಲಭವಾಗಿ ಪಡೆದು ಉದ್ದೇಶಪೂರ್ವಕವಾಗಿಯೇ ತೀರಿಸದೇ ಉಳಿಸಿರುವ ಸಾಲಗಳು.

ಎನ್‌ಪಿಎ ಸಮಸ್ಯೆ ಬ್ಯಾಂಕುಗಳನ್ನು ಕಿತ್ತು ತಿನ್ನುತ್ತಿದೆ. ಬ್ಯಾಂಕ್‌ಗಳಲ್ಲಿ, ಹೊಣೆಗಾರಿಕೆಯ ಮತ್ತು ಪಾರದರ್ಶಕತೆಯ ಕೊರತೆ, ಎನ್‌ಪಿಎಗಿಂತಲೂ ದೊಡ್ಡ ಸಮಸ್ಯೆ. ಅಲ್ಲಿನ ಪಾರದರ್ಶಕತೆಯ ಕೊರತೆಯ ಬಗ್ಗೆ ಇತ್ತೀಚೆಗೆ ಸುಪ್ರೀಂ ಕೋರ್ಟ್ ಹೀಗೆ ಹೇಳಿದೆ: "ರಿಸರ್ವ್ ಬ್ಯಾಂಕ್ ಸಾರ್ವಜನಿಕ ಹಿತವನ್ನು ಎತ್ತಿ ಹಿಡಿಯಬೇಕಲ್ಲದೆ ಬ್ಯಾಂಕ್‌ಗಳ ಸ್ವಂತ ಹಿತಾಸಕ್ತಿಯನ್ನಲ್ಲ. ಅನೇಕ ಹಣಕಾಸು ಸಂಸ್ಥೆಗಳು ಶುದ್ಧವಾಗಿಯೂ ಇಲ್ಲ; ಪಾರದರ್ಶಕವಾಗಿಯೂ ಇಲ್ಲ. ರಿಸರ್ವ್ ಬ್ಯಾಂಕ್ ಇಂತಹ ಸಂಸ್ಥೆಗಳ ಜೊತೆ ಸೇರಿಕೊಂಡು ಈ ಸಂಸ್ಥೆಗಳ ಕೃತ್ಯಗಳು ಸಾರ್ವಜನಿಕರ ಪರಿಶೀಲನೆಗೆ ಒಳಪಡದಂತೆ ಅವುಗಳನ್ನು ಮುಚ್ಚಿಡುತ್ತಿದೆ."

ಕಣ್ಣಾಮುಚ್ಚಾಲೆ ಆಟ

ಬಂಡವಳಿಗರಿಂದ ವಸೂಲಾಗದ ಸಾಲಗಳನ್ನು ನಿಗದಿತ ಕಾಲಾವಧಿಯ ನಂತರ ಬ್ಯಾಂಕ್‌ಗಳು 'ದಾವೆ ಹೂಡಿದ ಅಕೌಂಟ್'ಗಳೆಂದು ವರ್ಗೀಕರಣಮಾಡಿ ಮತ್ತೊಂದು ಖಾತೆಗೆ ವರ್ಗಾಯಿಸುತ್ತವೆ. ಅವು ಅಲ್ಲಿಯೇ ವರ್ಷಗಟ್ಟಲೇ ಉಳಿಯುತ್ತವೆ. ಮುಂದೊಂದು ದಿನ ಈ ಸಾಲಗಳನ್ನು (ಎನ್‌ಪಿಎ) ಬ್ಯಾಂಕ್‌ಗಳು ತಮ್ಮ ದಾಖಲೆಗಳಿಂದಲೇ ತೆಗೆದುಹಾಕುತ್ತವೆ (write-off). ಅಥವಾ, ಸಾಲ ಮನ್ನಾಮಾಡುತ್ತವೆ. ಈ ವ್ಯವಹಾರ ಗೌಪ್ಯವಾಗಿ ನಡೆಯುತ್ತದೆ. ಈ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ದಾಖಲಾಗಿದ್ದ ಒಂದು ಸಾರ್ವಜನಿಕ ಹಿತಾಸಕ್ತಿ ವಿವಾದದ ವಿಚಾರಣೆಯ ಸಂದರ್ಭದಲ್ಲಿ "ಬ್ಯಾಂಕ್‌ಗಳು ಮಾಡುತ್ತಿರುವ ಸಾಲ ಮನ್ನಾ ಒಂದು ದೊಡ್ಡ ಮೋಸ" ಎಂಬುದಾಗಿ ನ್ಯಾಯಾಧೀಶರು ಹೇಳಿದ್ದರು. ಐದು ನೂರು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೊತ್ತದ ಸಾಲದ ಬಾಕಿದಾರರಾಗಿ ಉಳಿದಿರುವವರು ಮತ್ತು ಐಶಾರಾಮಿ ಜೀವನ ನಡೆಸುತ್ತಿರುವ ಸಾಲಗಾರರ ಪಟ್ಟಿಯನ್ನು ಒದಗಿಸುವಂತೆ ಅವರು ರಿಸರ್ವ್ ಬ್ಯಾಂಕ್‌ಗೆ ಸೂಚಿಸಿದ್ದರು.


ಸಾಲ ಮನ್ನಾ – ಗುಟ್ಟಿನ ವ್ಯವಹಾರ

ಸುಪ್ರೀಂ ಕೋರ್ಟ್‌ನಲ್ಲಿ ವಿಷಯ ಪ್ರಸ್ತಾಪವಾದ ನಂತರ, ಕೆಲವು ವಿವರಗಳು ಲಭ್ಯವಾಗಿವೆ. 2004 ಮತ್ತು 2015ರ ಅವಧಿಯಲ್ಲಿ, ಒಟ್ಟು ಎರಡು ಲಕ್ಷ ಹನ್ನೊಂದು ಸಾವಿರ ಕೋಟಿ (2,11,000,00,00,000) ರೂಪಾಯಿಗಳ ಮೊತ್ತದ ಸಾಲಗಳನ್ನು ಬ್ಯಾಂಕ್‌ಗಳು ತಮ್ಮ ದಾಖಲೆಗಳಿಂದ ತೆಗೆದುಹಾಕಿವೆ (write-offs),

write-offs	
ವರ್ಷ	**ಮೊತ್ತ (ಸುಮಾರು)**
2014–2015	60,000 ಕೋಟಿ
2013–2015	1.14 ಲಕ್ಷ ಕೋಟಿ
2004–2015	2.11 ಲಕ್ಷ ಕೋಟಿ

ಈ ಮೊತ್ತದಲ್ಲಿ ಅರ್ಧಭಾಗಷ್ಟು ಸಾಲಗಳು (1,14,182,00,00,000 ರೂಪಾಯಿಗಳು) ಕಳೆದ ಎರಡು ವರ್ಷಗಳಲ್ಲಿ (2013 ರಿಂದ 2015ರವರೆಗೆ) write-off ಆಗಿವೆ. ಇದರ ಫಲಾನುಭವಿಗಳು ಯಾರು? ಎಷ್ಟು ಮಂದಿ? ಎಂಬ ವಿವರಗಳು ಗೌಪ್ಯವಾಗಿವೆ. ಸಮಸ್ಯೆ ಇರುವುದು ಇಲ್ಲೇ. ಇಷ್ಟು ದೊಡ್ಡ ಮೊತ್ತದ ಸಾಲಗಳನ್ನು ಯಾವ ಅಳುಕೂ ಇಲ್ಲದೆ ಗೌಪ್ಯವಾಗಿ ಮನ್ನಾ ಮಾಡಿರುವುದು ಬ್ಯಾಂಕ್ ಠೇವಣಿದಾರರಿಗೆ ಎಸಗಿದ ದ್ರೋಹ.

ಬ್ಯಾಂಕ್‌ಗಳಿಂದ 2013–15 ರಲ್ಲಿ ರೂ. 1.14 ಲಕ್ಷ ಕೋಟಿ ವಾಪಸು ಬರದ ಸಾಲಗಳ ಮನ್ನಾ



write-off – ತಾಂತ್ರಿಕ ಕ್ರಮ

ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ವರದಿಗಾರ ಮಾಹಿತಿ ಹಕ್ಕು ಅರ್ಜಿಯಲ್ಲಿ write-off ಬಗ್ಗೆ ಕೇಳಿದ ಪ್ರಶ್ನೆಗಳಿಗೆ ರಿಸರ್ವ್ ಬ್ಯಾಂಕ್ "ವಸೂಲಾಗದ ಸಾಲಗಳನ್ನು ಕಡತದಿಂದ ತೆಗೆದುಹಾಕಿರುವುದು ಮಾಮೂಲಾಗಿ ನಡೆಯುವ ಒಂದು ತಾಂತ್ರಿಕ ತೋರಿಕೆಯ ಕ್ರಮ. ಅದರರ್ಥ ವಸೂಲಿ ಮಾಡಬಾರದು ಎಂದಲ್ಲ" ಎಂದು ಹೇಳಿದೆ. ಅಲ್ಲಿಗೆ ಕತೆ ಮುಗಿಯಿತು. ಆದರೆ, ಈ ಸಾಲ ಮನ್ನಾದಿಂದ ಬ್ಯಾಂಕ್‌ಗಳ ಬಂಡವಾಳ ಸವೆಯುತ್ತದೆ. ಅದನ್ನು ಸರಿಪಡಿಸಲು ಸರ್ಕಾರ ಸಾವಿರಾರು ಕೋಟಿ ರೂಗಳ ಹಣ ಒದಗಿಸುತ್ತದೆ. ಮುಂದಿನ ನಾಲ್ಕು ವರ್ಷಗಳಲ್ಲಿ ಎಪ್ಪತ್ತು ಸಾವಿರ ಕೋಟಿ ರೂಗಳನ್ನು ಕೊಡುವುದಾಗಿ ಜೇಟ್ಲಿ ಹೇಳಿದ್ದಾರೆ. ಅಷ್ಟರ ಮಟ್ಟಿಗೆ ಜನ ಸಾಮಾನ್ಯರಿಗೆ ದೊರೆಯಬೇಕಾಗಿದ್ದ ಆರೋಗ್ಯ, ಶಿಕ್ಷಣ ಮುಂತಾದ ಸೇವೆಗಳು ಕಡಿತವಾಗುತ್ತದೆ.

4.38 ಲಕ್ಷ ಕೋಟಿ ಎನ್‌ಪಿಎ

ಬ್ಯಾಂಕ್‌ಗಳ ಆರೋಗ್ಯ, ಸಾಲ ವಸೂಲಾತಿಗೆ ಸಂಬಂಧಿಸಿದಂತೆ ದಿವಾಳಿತನ ಕಾನೂನಿನ ತಿದ್ದುಪಡಿ, ಬ್ಯಾಂಕ್ ನಿರ್ದೇಶಕರ ಮತ್ತು ಅಧ್ಯಕ್ಷರ ನೇಮಕಾತಿಯಲ್ಲಿ ಸುಧಾರಣೆ ಮುಂತಾದ ವಿಷಯಗಳ ಬಗ್ಗೆ ರಿಸರ್ವ್ ಬ್ಯಾಂಕ್ ಗವರ್ನರ್ ರಘುರಾಂ ರಾಜನ್ ಆಗಾಗ್ಗೆ ಪ್ರಸ್ತಾಪಿಸಿರುವುದು ಮತ್ತು ಬಹಳ ಮುಖ್ಯವಾಗಿ, ವಸೂಲಾಗದ ಸಾಲಗಳ ಬಗ್ಗೆ ಪರಾಮರ್ಶೆ ನಡೆಸಿ ಸಾಲ ಖಾತೆಗಳ ಸೂಕ್ತ ವರ್ಗೀಕರಣ ಮಾಡುವ ಪ್ರಕ್ರಿಯೆಯನ್ನು ಮಾರ್ಚ್ 2016 ರೊಳಗೆ ಪೂರ್ಣಗೊಳಿಸುವಂತೆ ಸೂಚಿಸಿರುವುದು ಇಡೀ ಬ್ಯಾಂಕಿಂಗ್ ವ್ಯವಸ್ಥೆ ಎಷ್ಟರಮಟ್ಟಿಗೆ ಹದಗೆಟ್ಟಿದೆ ಎಂಬುದನ್ನು ಬಯಲುಮಾಡಿದೆ.

3 ತಿಂಗಳಲ್ಲಿ ಒಂದು ಲಕ್ಷ ಕೋಟಿ

ನಿದ್ದೆಯಿಂದ ಎದ್ದಮೇಲೆ ಜ್ಞಾನೋದಯ ವಾದವರಂತೆ ಬ್ಯಾಂಕ್‌ಗಳು ವಸೂಲಾಗದ ಸಾಲದ ಅಂಕಿ ಅಂಶಗಳನ್ನು ಪ್ರಕಟಿಸುತ್ತಿವೆ. ಸೆಪ್ಟೆಂಬರ್ 2015 ರಲ್ಲಿ 3.40 ಲಕ್ಷ ಕೋಟಿ ರೂಪಾಯಿಗಳಷ್ಟಿದ್ದ ವಸೂಲಾಗದ ಸಾಲಗಳು, ಮೂರೇ ತಿಂಗಳಲ್ಲಿ 98 ಸಾವಿರ ಕೋಟಿ ರೂಗಳಷ್ಟು ಹೆಚ್ಚಾಗಿವೆ. ಜಿಡಿಪಿ ವೇಗವಾಗಿ ಬೆಳೆಯುತ್ತಿದೆ ಎಂದು ಎನ್‌ಡಿಎ ಸರ್ಕಾರ ಹೇಳುತ್ತಿದೆ. ಆದರೆ, ವಸೂಲಾಗದ ಸಾಲಗಳ ಮೊತ್ತ ಶರವೇಗದಲ್ಲಿ ಬೆಳೆಯುತ್ತಿದೆ. 4.38 ಲಕ್ಷ ಕೋಟಿ ರೂಗಳ ವಸೂಲಾಗದ ಸಾಲಗಳ ಮೊತ್ತವು ಮಾರ್ಚ್ 2016 ಮುಗಿಯುವುದರೊಳಗೆ ಮತ್ತಷ್ಟು ಏರಿಕೆಯಾಗುವುದರಲ್ಲಿ ಅನುಮಾನವಿಲ್ಲ.

ಕಾರ್ಪೊರೇಟ್‌ಗಳಿಗೆ ವಿಶೇಷ ವ್ಯವಸ್ಥೆ

ಕಾರ್ಪೊರೇಟ್‌ಗಳಿಂದ ವಸೂಲಾಗದ ಸಾಲಗಳು ಹೆಚ್ಚಿದಂತೆ, ಬ್ಯಾಂಕ್‌ಗಳು ಅವರಿಗೆ ಮರು ಪಾವತಿಮಾಡಲು ಅಧಿಕ ಸಮಯಾವಕಾಶ ಒದಗಿಸಿ, ಅದನ್ನು 'ಕಾರ್ಪೊರೇಟ್ ಸಾಲ ಮರು ರಚನೆ' ಎಂಬ ಹೊಸ ವರ್ಗೀಕರಣ ಮಾಡುತ್ತವೆ. ಇಂತಹ ಸಾಲಗಳನ್ನು 'ಒತ್ತಡಕ್ಕೊಳಗಾದ ಆಸ್ತಿಗಳು' (stressed assets) ಎಂದು ಪರಿಗಣಿಸುತ್ತಾರೆ. ಈಗ ಇಂತಹ ಸಾಲಗಳ ಮೊತ್ತ 5.40 ಲಕ್ಷ ಕೋಟಿಗಳಷ್ಟಿದೆ. ಸಾಮಾನ್ಯವಾಗಿ, ಈ ಸಾಲಗಳ ಬಗ್ಗೆ ಮಾಧ್ಯಮಗಳು ಪ್ರಸ್ತಾಪ ಮಾಡುವುದು ಕಡಿಮೆ. ವಾಸ್ತವವಾಗಿ, ಇವು ಬಹಳ ಹಳೆಯ ಎನ್‌ಪಿಎಗಳು.

ವಸೂಲಾಗದ ಸಾಲ 9.62 ಲಕ್ಷ ಕೋಟಿ

ಒತ್ತಡಕ್ಕೊಳಗಾದ ಆಸ್ತಿಗಳು ಎಂದು ಕರೆಯುವ ಸಾಲಗಳನ್ನೂ ವಸೂಲಾಗದ ಸಾಲಗಳು(ಎನ್‌ಪಿಎ) ಎಂದು ಪರಿಗಣಿಸುವಂತೆ ರಿಸರ್ವ್ ಬ್ಯಾಂಕ್ ಸೂಚಿಸಿದೆ. ಹಾಗಾಗಿ, ಡಿಸೆಂಬರ್ 2015 ರವರೆಗೆ ಗುರುತಿಸಲಾದ 4.38 ಲಕ್ಷ ಕೋಟಿ ರೂಗಳ ಎನ್‌ಪಿಎಗಳ ಜೊತೆಗೆ ಒತ್ತಡಕ್ಕೊಳಗಾದ ಆಸ್ತಿಗಳು ಎಂದು ಕರೆಯುವ 5.40 ಲಕ್ಷ ಕೋಟಿ ರೂಗಳನ್ನು ಸೇರಿಸಿದರೆ, ವಸೂಲಾಗದ ಸಾಲಗಳ ಒಟ್ಟು ಮೊತ್ತ, ಈ ಹೊತ್ತಿಗೆ, 9.62 ಲಕ್ಷ ಕೋಟಿ ರೂಪಾಯಿಗಳಾಗುತ್ತದೆ.

ಬಂಡವಾಳ ಬಯಲು

ನಮ್ಮ ಬ್ಯಾಂಕಿಂಗ್ ವ್ಯವಸ್ಥೆಯಿಂದ ಅತಿ ದೊಡ್ಡ ಮೊತ್ತದ ಸಾಲಗಳನ್ನು ಪಡೆದು ಬಾಕಿ ಉಳಿಸಿಕೊಂಡಿರುವ ಹತ್ತು ಸಮೂಹ ಕಂಪೆನಿಗಳ ಹೆಸರುಗಳನ್ನು ಸ್ವಿಜರ್‌ಲ್ಯಾಂಡಿನ ಕ್ರೆಡಿಟ್ ಸ್ಯೂಸೆ ಸಂಶೋಧನಾ ಸಂಸ್ಥೆಯ ವರದಿ ಪ್ರಕಟಿಸಿದೆ.

ಸಾಲ ಭೂಪರು (stressed assets) ಸಮೂಹ ಕಂಪೆನಿಗಳು
ಲ್ಯಾಂಕೊ
ಜೇಪಿ
ಜಿಎಂಆರ್
ವಿಡಿಯೊಕಾನ್
ಜಿವಿಕೆ
ಎಸ್ಸಾರ್
ಅದಾನಿ
ರಿಲೈಯನ್ಸ್ (ಅನಿಲ್ ಅಂಬಾನಿ)
ಜೆಎಸ್‌ಡಬ್ಲೂ
ವೇದಾಂತ

ಈ ಹತ್ತು ಸಮೂಹ ಕಂಪೆನಿಗಳು ಪಡೆದ ಒಟ್ಟು ಸಾಲ ಕಳೆದ ಎಂಟು ವರ್ಷಗಳಲ್ಲಿ ಏಳು ಪಟ್ಟು ಜಾಸ್ತಿಯಾಗಿದ್ದು ಈಗ ಅದು 7.33 ಲಕ್ಷ ಕೋಟಿ ರೂ ತಲುಪಿದೆ. ಬ್ಯಾಂಕಿಂಗ್ ವ್ಯವಸ್ಥೆ ಮಂಜೂರು ಮಾಡಿರುವ ಒಟ್ಟು ಸಾಲಗಳ ಶೇ.10 ಭಾಗವನ್ನು ಈ ಕಂಪೆನಿಗಳು ಪಡೆದಿವೆ ಎಂದು ವರದಿ ತಿಳಿಸಿದೆ.

'ರಿಸ್ಕ್ ಇಲ್ಲದ ಬಂಡವಾಳ'

ಅಗಾಧ ಪ್ರಮಾಣದ write-offs ಆದ ನಂತರವೂ (2004ರಿಂದ 2015ರವರೆಗಿನ ಹತ್ತು ವರ್ಷಗಳ ಅವಧಿಯಲ್ಲಿ 2.11 ಲಕ್ಷ ಕೋಟಿ ರೂ) ವಸೂಲಾಗದ ಸಾಲಗಳು ಹೆಚ್ಚುತ್ತಿರುವುದು ನಮ್ಮ ದೇಶದಲ್ಲಿ ಭಾರಿ ಕುಳಗಳ ವ್ಯವಹಾರ ಕುಶಲತೆಯ ಪ್ರತೀಕವಾಗಿದೆ. ಇಂಡಿಯಾದ ಐನಾತಿ ಕುಳಗಳು 'ರಿಸ್ಕ್ ಇಲ್ಲದ ಬಂಡವಾಳ'ದ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ರಘುರಾಂ ರಾಜನ್ ಅವರನ್ನು ಚುಚ್ಚಿದ್ದರು. ಆದರೂ, ಅವರಿಗೆ ವ್ಯವಹಾರ ನಡೆಸುವುದು ಇನ್ನೂ ಸುಗಮವಾಗಿರಬೇಕಂತೆ!

ವಿಷಚಕ್ರ ಸಾಗುತ್ತಿದೆ

ವ್ಯವಹಾರಗಳಲ್ಲಿ ಪಾರದರ್ಶಕತೆ ಇಲ್ಲದಿದ್ದರೆ ಅಲ್ಲಿ ಭ್ರಷ್ಟಾಚಾರವಿರುತ್ತದೆ. ಪ್ರಭಾವಿ ರಾಜಕಾರಣಿಗಳ ಒತ್ತಾಯಕ್ಕೆ ಮಣಿದು ಸಾವಿರಾರು ಕೋಟಿ ರೂಪಾಯಿಗಳ ಅನರ್ಹ ಸಾಲ ಮಂಜೂರು ಮಾಡುವ ಮತ್ತು ಅಂತಹ ಸಾಲಗಳನ್ನು ಮನ್ನಾ ಮಾಡುವ ಬ್ಯಾಂಕರ್‌ಗಳಿಗೆ ಯಾವುದೇ ಶಿಕ್ಷೆಯ ಭಯವಿಲ್ಲ. ಹಾಗಾಗಿ ಈ ವಿಷಚಕ್ರ ಸಾಗುತ್ತಿದೆ.

ವಿಷಮಯ ಮಿಶ್ರಣ

ನಿರ್ಲಜ್ಜ ವ್ಯಾಪಾರಿಗಳು/ ಉದ್ಯಮಪತಿಗಳು; ಭ್ರಷ್ಟ ಬ್ಯಾಂಕರ್‌ಗಳು; ಷಾಮೀಲು ಪ್ರವೃತ್ತಿಯ ಲೆಕ್ಕ ಪರಿಶೋಧಕರು ಮತ್ತು ತೊಂದರೆ ತೆಗೆದುಕೊಳ್ಳಲು ತಯಾರಿಲ್ಲದ ಬ್ಯಾಂಕಿಂಗ್ ನಿಯಂತ್ರಕರ ವಿಷಮಯ ಮಿಶ್ರಣವು ಬ್ಯಾಂಕಿಂಗ್ ವ್ಯವಸ್ಥೆಯನ್ನು ನುಂಗಿ ನೀರುಕುಡಿಯುತ್ತಿದೆ.

ಚಿಕಿತ್ಸೆ

ಕಾರ್ಪೊರೇಟ್ ಸಾಲ ಮರು ರಚನೆಯ ಮೇಲೆ ನಿಷೇಧ ಹೇರುವುದು, write-off ಮಾಡುವ ಪ್ರಕ್ರಿಯೆ ಪಾರದರ್ಶಕವಾಗಿರುವಂತೆ ನೋಡಿಕೊಳ್ಳುವುದು ಮತ್ತು ಪಾರ್ಲಿಮೆಂಟಿನ ಸಾರ್ವಜನಿಕ ಲೆಕ್ಕ ಸಮಿತಿ ಮತ್ತು ಹಣಕಾಸು ಸ್ಥಾಯಿ ಸಮಿತಿಗಳು ಶಿಫಾರಸು ಮಾಡಿರುವಂತೆ, ಅಂಕೆ ತಪ್ಪಿದ ಸಾಲಗಳನ್ನು ನ್ಯಾಯ ಪ್ರಧಾನ ಲೆಕ್ಕ ಪರಿಶೋಧನೆಗೆ ಒಳಪಡಿಸುವುದು ಅಗತ್ಯ.

ನಮ್ಮ ಚುರು-ಟ್ವೀಟ್

Lawrence Liang @whatzisnehm

ದೆಹಲಿಯಲ್ಲಿ #StandWithJNU (ಜೆ.ಎನ್.ಯು. ಜತೆ ನಡೆ) ಬೇಗನೇ ವಸಂತ ಋತು ತಂದಿದೆ. ಇದನ್ನು ಜೆ.ಎನ್.ಯು. ವಸಂತ ಎನ್ನುವ ಕಾಲ ಬಂದಿದೆ

– ಲಾರೆನ್ಸ್ ಲಿಯಂಗ್, ಆಲ್ಟರ್ನೇಟಿವ್ ಲಾ ಫೋರಂ ಸ್ಥಾಪಕ, ದೆಹಲಿಯ ಫೆ. 18ರ ಭಾರಿ ಮೆರವಣಿಗೆ ಕಂಡು



ನವಕೇರಳ ಜಾಥಾ ಸಮಾರೋಪ

ಒಂದು ತಿಂಗಳ ಕಾಲ ಸುಮಾರು ಎರಡು ಸಾವಿರ ಕಿಲೋಮೀಟರ್ ಕ್ರಮಿಸಿದ ನವಕೇರಳ ಜಾಥಾ ಫೆಬ್ರವರಿ 15ರಂದು ಸಮಾರೋಪಗೊಂಡಿತು. 14 ಜಿಲ್ಲೆಗಳಲ್ಲಿ ಕ್ರಮಿಸಿದ ಜಾಥಾ 35 ಲಕ್ಷ ಜನರನ್ನು ತಲುಪಿತ್ತು. ಸಿಪಿಐ (ಎಂ) ಪಾಲಿಟ್‌ಬ್ಯೂರೋ ಸದಸ್ಯ ಪಿನರಾಯಿ ವಿಜಯನ್ ನೇತೃತ್ವದಲ್ಲಿ ನಡೆದ ಜಾಥಾ ಫೆಬ್ರವರಿ 15ರಂದು ತಿರುವನಂತಪುರಂನ ಶಂಘುಮುಘಮ್ ಬೀಚ್‌ನಲ್ಲಿ ಬೃಹತ್ ಸಾರ್ವಜನಿಕ ಸಭೆಯೊಂದಿಗೆ ಸಮಾಪ್ತಿ ಆಯಿತು. ಆಯಾ ವಿಧಾನಸಭೆ ಕ್ಷೇತ್ರಗಳಲ್ಲಿ 117 ಕೇಂದ್ರಗಳಲ್ಲಿ ಜನರು ಜಾಥಾಕ್ಕೆ ಸ್ವಾಗತ ನೀಡಿದ್ದರು.

ಜಾತ್ಯತೀತ, ಭ್ರಷ್ಟಾಚಾರಮುಕ್ತ ಮತ್ತು ಅಭಿವೃದ್ಧಿ ಹೊಂದಿದ ಕೇರಳ ಕುರಿತ ಸಿಪಿಐ (ಎಂ) ನ ಸಂದೇಶವನ್ನು ಸಾರಲು ಈ ಜಾಥಾವನ್ನು ಆಯೋಜಿಸಲಾಗಿತ್ತು. ಜಾಥಾದ ಕ್ಯಾಪ್ಟನ್ ಮತ್ತು ಇತರ ಸದಸ್ಯರು ವಿವಿಧ ಕಡೆ ಸಮಾಜದ ವಿವಿಧ ವರ್ಗಗಳ ಜನರೊಂದಿಗೆ ಸಂವಾದ ನಡೆಸಿ ಕೇರಳವನ್ನು ಒಂದು ಅಭಿವೃದ್ಧಿ ಹೊಂದಿದ, ಜಾತ್ಯತೀತ ರಾಜ್ಯವನ್ನಾಗಿ ಮಾಡುವ ಬಗ್ಗೆ ಸಲಹೆಗಳನ್ನು ಪಡೆದರು. ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಂ.ವಿ. ಗೋವಿಂದನ್, ಕೆ.ಜೆ. ಥಾಮಸ್, ರಾಜ್ಯ ಸಮಿತಿ ಸದಸ್ಯರಾದ ಪಿ.ಕೆ. ಸೈನಬ, ಸಂಸತ್ ಸದಸ್ಯರಾದ ಎಂ.ಬಿ. ರಾಜೇಶ್, ಪಿ.ಕೆ. ಬಿಜು, ಡಾ. ಎ. ಸಂಪತ್ ಮತ್ತು ಶಾಸಕ ಕೆ.ಟಿ. ಜಲೀಲ್ ಅವರೂ ಜಾಥಾದಲ್ಲಿ ಭಾಗವಹಿಸಿದ್ದರು.

2016ರ ಮೇನಲ್ಲಿ ವಿಧಾನಸಭೆ ಚುನಾವಣೆ ನಡೆಯಲಿರುವ ಕೇರಳದಲ್ಲಿ ಸಿಪಿಐ (ಎಂ) ನೇತೃತ್ವದಲ್ಲಿನ ಎಡ ಚಳವಳಿಗೆ ತಮ್ಮ ಬೆಂಬಲವನ್ನು ಪುನರುಚ್ಚರಿಸಲು ಸಾವಿರಾರು ಸಂಖ್ಯೆಯ ಜನರು ತಿರುವನಂತಪುರಕ್ಕೆ ಆಗಮಿಸಿದ್ದರು. ಫೆಬ್ರವರಿ 14ರಂದು ಸಮಾರೋಪ ಕಾರ್ಯಕ್ರಮ ನಡೆಯಬೇಕಿತ್ತು. ಆದರೆ ಸಮಾರೋಪದ ಸಾರ್ವಜನಿಕ ಸಭೆಯ ಸಂಘಟನಾ ಸಮಿತಿಯ ಅಧ್ಯಕ್ಷರೂ ಆದ ಪ್ರಖ್ಯಾತ ಕವಿ ಒ.ಎನ್.ವಿ. ಕುರುಪ್ ಅವರ ನಿಧನದ ಹಿನ್ನೆಲೆಯಲ್ಲಿ ಕಾರ್ಯಕ್ರಮವನ್ನು 15ಕ್ಕೆ ನಿಗದಿಪಡಿಸಲಾಯಿತು. ಕುರುಪ್ ಗೌರವಾರ್ಥ ಸಮಾರೋಪ ಸ್ಥಳಕ್ಕೆ ಒ.ಎನ್.ವಿ. ನಗರ ಎಂದು ಹೆಸರಿಸಲಾಯಿತು.

ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಿಪಿಐ (ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ ಯೆಚುರಿ, ಭಾರತವನ್ನು ಒಂದು ಅಸಹಿಷ್ಣು ಫ್ಯಾಸಿಸ್ಟ್ ಹಿಂದೂ ರಾಷ್ಟ್ರವನ್ನಾಗಿ ಮಾಡಲು ಆರ್‌ಎಸ್‌ಎಸ್ ಪ್ರಯತ್ನಿಸುತ್ತಿದೆ ಎಂದು ಹೇಳಿದರು. ಜೆಎನ್‌ಯು ವಿದ್ಯಾರ್ಥಿಗಳ ಬಂಧನ ಮತ್ತು ಸಿಪಿಐ (ಎಂ) ಕೇಂದ್ರಸಮಿತಿ ಕಚೇರಿ ಮೇಲೆ ನಡೆದ ದಾಳಿ ಇಂಥ ಅಸಹಿಷ್ಣುತೆಗೆ ಉದಾಹರಣೆಗಳಾಗಿವೆ, ಸಾಕ್ಷಿಯಾಗಿವೆ ಎಂದರು. ಸಿಪಿಐ (ಎಂ) ಕೇಂದ್ರಸಮಿತಿ ಕಚೇರಿ ಗೆ ಮಧ್ಯರಾತ್ರಿಯಲ್ಲೂ ಬೆದರಿಕೆ ಕರೆಗಳು ಬರುತ್ತಿವೆ ಎಂದವರು ಹೇಳಿದರು.



"ಇಂಥ ದಾಳಿಗಳಿಂದ ನಮ್ಮನ್ನು ನಾವು ಮತ್ತು ಜನರನ್ನು ಹೇಗೆ ರಕ್ಷಿಸಬೇಕೆಂಬುದು ಸಿಪಿಐ (ಎಂ) ಗೆ ಗೊತ್ತಿದೆ. ಮಹಾತ್ಮಾ ಗಾಂಧಿಯ ಹಂತಕರಿಂದ ಕಮ್ಯೂನಿಸ್ಟರಿಗೆ ಯಾವುದೇ ಸರ್ಟಿಫಿಕೆಟ್ ಬೇಕಾಗಿಲ್ಲ" ಎಂದು ಯೆಚುರಿ ಘೋಷಿಸಿದರು. ಜನರು ಎದುರಿಸುತ್ತಿರುವ ಸಮಸ್ಯಗಳಿಂದ ಅವರ ಗಮನವನ್ನು ಬೇರೆಡೆ ಸೆಳೆಯುವುದೇ ಹಿಂದೂತ್ವವಾದಿಗಳ ದಾಳಿಗಳ ಹಿಂದಿನ ಉದ್ದೇಶವಾಗಿದೆ. ನರೇಂದ್ರ ಮೋದಿ ಆಡಳಿತದಲ್ಲಿ ನಮ್ಮ ದೇಶ ಅಮೆರಿಕದ ಜೂನಿಯರ್ ಪಾಲುದಾರ ಆಗುತ್ತಿದೆ ಎಂದು ಯೆಚುರಿ ಛೇಡಿಸಿದರು. ಸರಕಾರದ ವಿದೇಶಾಂಗ, ಆರ್ಥಿಕ ಮತ್ತು ರಕ್ಷಣಾ ನೀತಿಗಳು ಇದಕ್ಕೆ ಕೈಗನ್ನಡಿಯಾಗಿವೆ ಎಂದರು.

ಜಾಥಾದ ಕ್ಯಾಪ್ಟನ್ ಪಿನರಾಯಿ ವಿಜಯನ್, ಪಾಲಿಟ್‌ಬ್ಯೂರೋ ಸದಸ್ಯರಾದ ಎಸ್. ರಾಮಚಂದ್ರನ್ ಪಿಳ್ಳೈ, ಎಂ.ಎ. ಬೇಬಿ, ಪ್ರತಿಪಕ್ಷ ನಾಯಕ ವಿ.ಎಸ್. ಅಚ್ಯುತಾನಂದನ್ ಮೊದಲಾದವರು ಸಾರ್ವಜನಿಕ ಸಭೆಯಲ್ಲಿ ಮಾತನಾಡಿದರು. ಪಕ್ಷದ ರಾಜ್ಯ ಕಾರ್ಯದರ್ಶಿ ಕೊಡಿಯೇರಿ ಬಾಲಕೃಷ್ಣನ್ ಅಧ್ಯಕ್ಷತೆ ವಹಿಸಿದ್ದರು.

ತ್ರಿಪುರ ವಿಧಾನ ಸಭಾ ಉಪಚುನಾವಣೆ ಎಡರಂಗಕ್ಕೆ ಇನ್ನಷ್ಟು ದೊಡ್ಡ ಅಂತರದ ವಿಜಯ

ತ್ರಿಪುರ ವಿಧಾನಸಭೆಯ ಅಮರಪುರ ಕ್ಷೇತೆದಲ್ಲಿ ನಡೆದ ಉಪಚುನಾವಣೆಯಲ್ಲಿ ಎಡರಂಗವನ್ನು ಪ್ರತಿನಿಧಿಸಿದ್ದ ಸಿಪಿಐ(ಎಂ) ಅಭ್ಯರ್ಥಿ ಪರಿಮಳ ದೇಬ್‌ನಾಥ್ ನಿರೀಕ್ಷೆಯಂತೆ ವಿಜಯ ಸಾಧಿಸಿದ್ದಾರೆ. ಆದರೆ ಅವರ ವಿಜಯದ ಅಂತರ ಗಮನ ಸೆಳೆಯುವಂತದ್ದು. ಕಳೆದ ಬಾರಿ ಎಡರಂಗ ಈ ಸೀಟನ್ನು 4022 ಮತಗಳ ಅಂತರದಿಂದ ಗೆದ್ದಿತ್ತು. ಈ ಬಾರಿ 10597 ಮತಗಳ ಅಂತರದಿಂದ ಗೆದ್ದಿದೆ. ಇಲ್ಲಿ 88.16ಶೇ. ಮತದಾನವಾಗಿತ್ತು. ಸಿಪಿಐ(ಎಂ) ಅಭ್ಯರ್ಥಿ 60.33ಶೇ. ಮತಗಳಿಸಿದರೆ ಸಮೀಪದ ಬಿಜೆಪಿ ಅಭ್ಯರ್ಥಿ 28.92 ಶೇ.ಗಳಿಸಿದ್ದಾರೆ. 3.65ಶೇ. ಮತ ಗಳಿಸಿದ ಕಾಂಗ್ರೆಸ್ ಅಭ್ಯರ್ಥಿ ಸೇರಿದಂತೆ ಇತರ ಎಲ್ಲ ಐದು ಅಭ್ಯರ್ಥಿಗಳು ಠೇವಣಿ ಕಳಕೊಂಡಿದ್ದಾರೆ.

ಎಡರಂಗದ ಅಭ್ಯರ್ಥಿಯ ವಿಜಯದ ಅಂತರ 2013ಕ್ಕೆ ಹೋಲಿಸಿದರೆ ಗಮನಾರ್ಹವಾಗಿ ಹೆಚ್ಚಿರುವುದು ಎಡರಂಗ ಸರಕಾರದ ಅಸಂಖ್ಯ ಅಭಿವೃದ್ಧಿ ಪ್ರಾಜೆಕ್ಟುಗಳ ಜ್ಯಾರಿಯಿಂದಾಗಿ ಎಡರಂಗದ ಬೆಂಬಲ ನೆಲೆ ಕ್ರಮೇಣ ವಿಸ್ತಾರಗೊಳ್ಳುತ್ತಿದೆ ಎಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ತ್ರಿಪುರ ರಾಜ್ಯ ಕಾರ್ಯದರ್ಶಿ ಮಂಡಳಿ ಹೇಳಿದೆ. ಕಾಂಗ್ರೆಸ್ ನಾಲ್ಕನೇ ಸ್ಥಾನಕ್ಕೆ ಇಳಿದಿರುವುದು ಬಹುಶಃ ಅದರ ಬೆಂಬಲಿಗರಲ್ಲಿ ಬಹಳ ಮಂದಿ ಬಿಜೆಪಿಗೆ ಮತ ನೀಡಿರುವುದನ್ನು ತೋರಿಸುತ್ತದೆ. ಇದು ಬಿಜೆಪಿಯ ವಿರುದ್ಧ ಸೈದ್ಧಾಂತಿಕ ಹೋರಾಟ ನಡೆಸಲಾರದ ಕಾಂಗ್ರೆಸ್‌ನ ದಿವಾಳಿಕೋರತನವನ್ನು ತೋರಿಸುತ್ತದೆ ಎಂದು ಅದು ಹೇಳಿದೆ.

ದಶರಥ ದೇಬ್ ಜನ್ಮ ಶತಾಬ್ದಿ ಸಮಾರೋಪ



ತ್ರಿಪುರಾದ ಬುಡಕಟ್ಟು ಜನಗಳ ಪ್ರಜಾಪ್ರಭುತ್ವ ಆಂದೋಲನವನ್ನು ಕಟ್ಟಿ ಬೆಳೆಸಿ, ತ್ರಿಪುರಾದ ಮುಖ್ಯಮಂತ್ರಿಯೂ ಆಗಿದ್ದ ದಶರಥ ದೇಬ್ ಅವರ ಜನ್ಮ ಶತಾಬ್ದಿ ಆಚರಣೆ ಈ ತಿಂಗಳ ಎರಡರಂದು ಸಂಪನ್ನಗೊಂಡಿದೆ. ಈ ಸಮಾರಂಭದಲ್ಲಿ ಮಾತಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚೂರಿ, ತ್ರಿಪುರಾ ಮುಖ್ಯಮಂತ್ರಿ ಮತ್ತು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರೂ ಆದ ಮಾಣಿಕ್ ಸರ್ಕಾರ್ ಮತ್ತಿತರು ತ್ರಿಪುರಾದ ಮತ್ತು ದಏಶದ ಪ್ರಜಾಪ್ರಭುತ್ವ ಮತ್ತು ಕಮ್ಯುನಿಸ್ಟ್ ಆಂದೋಲನಕ್ಕೆ ಅವರ ಅಮೋಘ ಕೊಡುಗೆಗಳನ್ನು ನೆನಪಿಸಿದರು.

ಅವರ ನೇತೃತ್ವದಲ್ಲಿ ಜನಶಿಕ್ಷಾ ಸಮಿತಿ ಆರಂಭಿಸಿದ ಶೈಕ್ಷಣಿಕ ಹೋರಾಟ ಅಲ್ಲಿಯ ಪಾಳೆಯಗಾರೀ ಆಳ್ವಿಕೆಯ ವಿರುದ್ಧ ಗಣ ಮುಕ್ತಿ ಪರಿಷದ್‌ನ ಸಶಸ್ತ್ರ ಹೋರಾಟವಾಗಿ ಮುಂದುವರೆಯಿತು. ಈ ಹೋರಾಟ ಅಲ್ಲಿಯ ಮಹಾರಾಜ ಸ್ವತಂತ್ರ್ಯದ ವೇಲೆಯಲ್ಲಿ ಭಾರತ ಒಕ್ಕೂಟವನ್ನು ಸೇರುವಂತಹ ಒತ್ತಡವನ್ನು ನಿರ್ಮಿಸಿತು. ಇದು ಆಧುನಿಕ ಭಾರತೀಯ ಪ್ರಜಾಸತ್ತಾತ್ಮಕ ಗಂತಂತ್ರದ ಸ್ಥಾಪನೆಯಲ್ಲಿ ಸುವರ್ಣಾಕ್ಷರಗಳಿಂದ ಕತ್ತಿದ ಕೊಡುಗೆ ಎಂದು ಸೀತಾರಾಂ ಯೆಚೂರಿ ಹೇಳಿದರು. ದಶರಥ ದೇಬ್ ತ್ರಿಪುರಾದ ಬಡಕಟ್ಟು ಮತ್ತು ಇತರ ಜನಸಮೂಹಗಳ ಐಕ್ಯತೆಯನ್ನು ಬೆಸೆಯುವಲ್ಲಿ ಪಥಪ್ರದರ್ಶಕ ಪಾತ್ರ ವಹಿಸಿದರು. ಈಗ ತ್ರಿಪುರಾ ಈಶಾನ್ಯ ಭಾರತದಲ್ಲಿ ಈ ಐಕ್ಯತೆಯ ಮಾದರಿ ರಾಜ್ಯವಾಗಿದ್ದರೆ ಅದ-ಕ್ಕೆ ಬುನಾದಿ ಹಾಕಿದ್ದು ನೃಪೇನ್ ಚಕ್ರವರ್ತಿ, ಸುಧನ್ವ ದೇಬ್‌ಬರ್ಮ, ಹೇಮಂತ ದೇಬ್‌ಬರ್ಮ ಮತ್ತಿತರರ ಕೊಡುಗೆ ಪ್ರಮುಖವಾದದ್ದು ಎಂದು ಮಾಣಿಕ್ ಸರ್ಕಾರ್ ನೆನಪಿಸಿದರು. ಒಂದು ಶೋಷಣಾಮುಕ್ತ ಸಮಾಜವನ್ನು ಕಟ್ಟುವ ಹೋರಟದಲ್ಲಿ ದಶರಥ ದೇಬ್ ಸದಾ ಸ್ಫೂರ್ತಿಯ ಚಿಲುಮೆಯಾಗಿರುತ್ತಾರೆ ಎಂದು ಅವರು ಹೇಳಿದರು.

ಪ.ಬಂಗಾಲ : ರೇಷನ್‌ಕಾರ್ಡ್ ಕೇಳಿದರೆ ಬಾಂಬ್ ಹಾಕುವ 'ದೀದಿ'ಗಿರಿ



ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್ ಸರಕಾರದ ದಬ್ಬಾಳಿಕೆ ಯಾವ ಮಟ್ಟವನ್ನು ತಲುಪಿದೆಯೆಂದರೆ ಬಡವರು ರೇಷನ್ ಕಾರ್ಡ್ ಕೇಳುವುದೂ ತಪ್ಪು ಎನ್ನುವಂತಾಗಿದೆ. ಹಾಗೆ ಕೇಳಿದವರ ಮೇಲೆ ಗೂಂಡಾಗಳು ಬಾಂಬ್ ಎಸೆಯುವ ದುಷ್ಕೃತ್ಯಗಳೂ ರಾಜ್ಯದಲ್ಲಿ ನಡೆಯುತ್ತಿವೆ.

ಕೇಂದ್ರ ಮತ್ತು ರಾಜ್ಯ ಸರಕಾರಗಳಿಂದಾಗಿ ಸಾರ್ವಜನಿಕ ವಿತರಣೆ ವ್ಯವಸ್ಥೆ ಹಾಳಾಗಿ ಹೋಗಿದೆ. ಪಶ್ಚಿಮ ಬಂಗಾಳದಲ್ಲಿ ರೇಷನ್ ಕಾರ್ಡ್‌ಗಳ ಡಿಜಿಟೈಸೇಶನ್ ಪ್ರಕ್ರಿಯೆ ಆರಂಭವಾಗಿ ಒಂದು ವರ್ಷ ಕಳೆದರೂ ಜನರಿಗೆ ಇನ್ನೂ ಅದರ ಪ್ರಯೋಜನ ಸಿಕ್ಕಿಲ್ಲ. ಪಡಿತರ ಚೀಟಿದಾರರ ಸಂಖ್ಯೆ ದೊಡ್ಡ ಪ್ರಮಾಣದಲ್ಲಿ ಇಳಿಕೆಯಾಗಿದೆ. ಡಿಜಿಟೈಸೇಶನ್ ಪ್ರಕ್ರಿಯೆಯಲ್ಲಿ ಒಂದೋ ಹೆಸರು ತಪ್ಪಿ ಹೋಗಿರುವುದು ಅಥವಾ ಹೆಸರನ್ನು ತೆಗೆದುಹಾಕಿರುವುದೇ ಇದಕ್ಕೆ ಕಾರಣ. ಪಡಿತರ ಚೀಟಿ-ದಾರರ ಮನೆಯ ಸಮೀಪದ ರೇಷನ್ ಅಂಗಡಿಯ ಬದಲು ದೂರದೂರ ಊರಿನ ಅಂಗಡಿಗಳನ್ನು ನಿಗದಿಪಡಿಸಲಾಗಿದೆ. ಪಡಿತರ ತರಲು 15 ಕಿಮೀನಷ್ಟು ದೂರ ಹೋಗಬೇಕಾದ ಪ್ರಸಂಗ ಎದುರಾಗಿದೆ.



ಪಡಿತರ ಚೀಟಿ ನೀಡುವಲ್ಲಿನ ಈ ಅವಾಂತರಗಳನ್ನು ಖಂಡಿಸಿ ಎಡರಂಗ ಫೆಬ್ರವರಿ 11ರಂದು ರಾಜ್ಯದೆಲ್ಲೆಡೆ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆಗೆ ಕರೆ ನೀಡಿತ್ತು. ಅಮ್ಟಾ ಎಂಬಲ್ಲಿ ನಡೆದ ಪ್ರತಿಭಟನೆ ವೇಳೆ ನಡೆದ ಹಿಂಸಾಚಾರದಲ್ಲಿ ಅನ್ಸುರಾ ಬೇಗಂ ಎಂಬ ಮಹಿಳೆ ತೀವ್ರವಾಗಿ ಗಾಯಗೊಂಡರು. ಟಿಎಂಸಿ ಗೂಂಡಾಗಳು ಹರಿಬಿಟ್ಟ ಹಿಂಸಾಚಾರದಲ್ಲಿ ಗಾಯಗೊಂಡ ಮಹಿಳೆಗೆ 18 ಹೊಲಿಗೆಗಳನ್ನು ಹಾಕಬೇಕಾಯಿತು.

ಇದು ಗಂಭೀರವಾಗಿ ಗಾಯಗೊಂಡ ಪ್ರಕರಣವಾಯಿತು. ಇನ್ನೂ ದುರಂತದ ಸಂಗತಿಯೆಂದರೆ, ಬರ್ದ್ವಾನ್‌ನ ಸಂಗಾತಿ ಸ್ವಪನ್ ಮಲಿಕ್ ಎಂಬುವವರು ಟಿಎಂಸಿ ಗೂಂಡಾಗಳು ಎಸೆದ ಬಾಂಬ್ ದಾಳಿಗೆ ಬಲಿಯಾದರು. ಇದು ಮಮತಾ 'ದೀದಿ'ಯ ಪ್ರಜಾಪ್ರಭುತ್ವದ ಶೈಲಿ!

ಈ ಹಿಂಸಾಚಾರ ರಕ್ತಪಾತ ನಿಲ್ಲಲೇ ಬೇಕು. ರೇಷನ್ ಕಾರ್ಡ್‌ಗಾಗಿ ನಡೆದ ಹೋರಾಟದಲ್ಲಿ ಮಡಿದ, ಗಾಯಗೊಂಡ ಜನರ ತ್ಯಾಗ ವಿಫಲವಾಗದು. ಮುಂಬರುವ ವಿಧಾನಸಭೆ ಚುನಾವಣೆಗಳಲ್ಲಿ ಪಶ್ಚಿಮ ಬಂಗಾಳದ ಜನರು ಟಿಎಂಸಿಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂಬ ವಿಶ್ವಾಸವನ್ನು ಎಡರಂಗ ವ್ಯಕ್ತಪಡಿಸಿದೆ.

ರಾಜ್ಯಾದ್ಯಂತ ವಿವಿ ಬಂದ್......... ಪುಟ 16 ರಿಂದ



ಕೋಲಾರ

ಸೈಯದ್‌ಮುಜೀಬ್, ಸಾಹಿತಿ ಬಂದಕುಂಟೆ ನಾಗರಾಜಯ್ಯ, ದಲಿತ ಸಂಘರ್ಷ ಸಮಿತಿಯ ಪಿ.ಎನ್.ರಾಮಯ್ಯ, ದಲಿತ ಸೇನೆಯ ಗಣೇಶ್, ವಿದ್ಯಾರ್ಥಿ ಮುಖಂಡ ರಿಯಾಜ್ ಪಾಷ, ಎಸ್.ಎಫ್.ಐ ಜಿಲ್ಲಾಧ್ಯಕ್ಷ ಇ. ಶಿವಣ್ಣ, ಮಂಗಳಮುಖಿ ಸಂಘದ ಮುಖಂಡರಾದ ದೀಪಿಕಾ, ಡಿ.ವೈ.ಎಫ್.ಐ ಜಿಲ್ಲಾಧ್ಯಕ್ಷ ಎಸ್.ರಾಘವೇಂದ್ರ, ವಿದ್ಯಾರ್ಥಿನಿ ಕಾವ್ಯ ಮಾತನಾಡಿದರು. ಪ್ರತಿಭಟನೆಯ ನೇತೃತ್ವವನ್ನು ಪಿಯುಸಿಎಲ್‌ನ ಶಶೀಕಾಂತ್, ಲಕ್ಷ್ಮೀರಂಗಯ್ಯ, ಸಿಐಟಿಯುನ ಎನ್.ಕೆ.ಸುಬ್ರಮಣ್ಯ, ಜಿ. ದರ್ಶನ್, ಡಿ.ವೈ.ಎಫ್.ಐನ ಜಿಲ್ಲಾ ಉಪಾಧ್ಯಕ್ಷ ಎಂ.ಜಿ. ಮಂಜುನಾಥ್ ಸೇರಿದಂತೆ ಮುಂತಾದವರು ನೇತೃತ್ವವಹಿಸಿದ್ದರು.

ಉಳಿದಂತೆ ರಾಜ್ಯದ ವಿವಿದೆಡೆ ಇರುವ ವಿಶ್ವವಿದ್ಯಾಲಯಗಳನ್ನು ಬಂದ್ ಮಾಡಿ ಪ್ರತಿಭಟನೆ ನಡೆದ ವರದಿಗಳು ಬರುತ್ತಿವೆ.


ತುಮಕೂರು



ಶಿವಮೊಗ್ಗ

ಅತಿಥಿ ಉಪನ್ಯಾಸಕರ..... ಪುಟ 16 ರಿಂದ

ಮಾರ್ಚ್ 1 ರಿಂದ ಸಿಇಟಿ ನಡೆಯಲಿದ್ದು ಇದನ್ನು ತಡೆಯಲು ಅತಿಥಿ ಉಪನ್ಯಾಸಕರು ಫೆಬ್ರವರಿ 17 ರಂದು ಹಮ್ಮಿಕೊಂಡಿದ್ದ ಶಾಲಾ–ಕಾಲೇಜುಗಳ ವಿಶ್ವವಿದ್ಯಾಲಯಗಳ ಬಂದ್‌ನ್ನು ಫೆ. 26ಕ್ಕೆ ಮುಂದೂಡಿದ್ದಾರೆ.

ಫೆಬ್ರವರಿ 29 ರಿಂದ ರಾಜ್ಯದ ಬಜೆಟ್ ಅಧಿವೇಶನ ಪ್ರಾರಂಭವಾಗಲಿದ್ದು, ಇದಕ್ಕೆ ಮುಂಚಿತವಾಗಿ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಲು ಅತಿಥಿ ಉಪನ್ಯಾಸಕರು ಒಳಗೊಂಡು, ಪ್ರಗತಿಪರ ಸಂಘಟನೆ, ವಿಧಾನ ಪರಿಷತ್ ಸದಸ್ಯರು, ಸಾಹಿತಿಗಳು ಸೇರಿದಂತೆ ಸಭೆ ನಡೆಸಬೇಕೆಂದು ಎಚ್ಚರಿಕೆ ನೀಡಲಾಗಿದೆ.

ಮುಂದಿನ ಹೋರಾಟದ ಹಾದಿಯ ಬಗ್ಗೆ ಅತಿಥಿ ಉಪನ್ಯಾಸಕರ ಸಂಘದ ಸಭೆ ನಡೆಸಲಾಯಿತು. ಈ ಸಂದರ್ಭದಲ್ಲಿ ಅತಿಥಿ ಉಪನ್ಯಾಸಕರ ಸಂಘದ ಗೌರವ ಅಧ್ಯಕ್ಷರಾದ ಬಿ.ರಾಜಶೇಖರ ಮೂರ್ತಿ, ಅ ಧ್ಯಕ್ಷರಾದ ಶ್ರೀನಿವಾಸಾಚಾರ್, ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಿ ಮಾನ್ಪಡೆ ಅವರು ಹೋರಾಟದಲ್ಲಿ ಒಂದು ಹೆಜ್ಜೆ ಮುಂದೆ ಹೋಗಿರುವುದಕ್ಕೆ ರಾಜ್ಯದ ಎಲ್ಲಾ ಅತಿಥಿ ಉಪನ್ಯಾಸಕರಿಗೆ ಅಭಿನಂದನೆ ಸಲ್ಲಿಸಿ, ಮುಂದಿನ ಹೊರಾಟಗಳಿಗೆ ಅಣಿಯಾಗಿರುವಂತೆ ಕರೆ ನೀಡಿದ್ದಾರೆ.



ಹುಸಿ ದೇಶಪ್ರೇಮದ ಗುರಾಣಿ......... ಪುಟ 9 ರಿಂದ

ಸಾಂವಿಧಾನಿಕ ಬೆಳವಣಿಗೆಯಾದ ಮನಸ್ಮೃತಿಯ ಸುದ್ದಿಯೇ ಇಲ್ಲ. ನಮ್ಮ ಸಂವಿಧಾನ ಪಂಡಿತರಿಗೆ ಅವೆಲ್ಲಾ ಬೇಕಾಗಿಲ್ಲ." ಎಂದು ಅದೇ ಆರೆಸ್ಸೆಸ್ ಮುಖಪತ್ರಿಕೆ ಆರ್ಗನೈಸರ್ ತನ್ನ ನವೆಂಬರ್ 30, 1949 ಸಂಚಿಕೆಯಲ್ಲಿ ಗೊಣಗಿತ್ತು. **"ನಮ್ಮ ಸಂವಿಧಾನ ಪಾಶ್ಚಿಮಾತ್ಯ ದೇಶಗಳ ವಿವಿಧ ಸಂವಿಧಾನಗಳ ವಿವಿಧ ಕಲಮುಗಳ ವಿಚಿತ್ರ ಕಲಸುಮೇಲೊಗರ"** ಎಂದು ತನ್ನ 'ಚಿಂತನಗಂಗಾ'ದಲ್ಲಿ ಗೋಲ್ವಾಲ್ಕರ್(ಪು. 238) ಹೇಳಿದ್ದರು.

ಪ್ರತ್ಯೇಕತೆಯ ವಿರುದ್ಧ ಹೋರಾಟದಲ್ಲಿ ನೂರಾರು ಸಿಪಿಐ(ಎಂ) ಹುತಾತ್ಮರು

ಭಾರತ ಸ್ವತಂತ್ರವಾದ ಮೇಲೆ ದೇಶದ ಐಕ್ಯತೆ ಮತ್ತು ಸಮಗ್ರತೆಯ ರಕ್ಷಣೆಯ ಪ್ರಶ್ನೆ ಬಂದಾಗ ಯಾವಾಗಲೂ ಎಡಪಂಥೀಯರು ಅದರಲ್ಲೂ ಸಿಪಿಐ(ಎಂ) ಮುಂದೆ ಇತ್ತು. ಎಲ್ಲಾ ಭಾಷೆ, ಧರ್ಮ, ಜನಾಂಗಗಳ ಜನರ ಅಸ್ಮಿತೆ ಆಶೋತ್ತರಗಳನ್ನು ಎತ್ತಿ ಹಿಡಿಯುತ್ತಲೇ ಆ ಬಗೆಗಿನ ಅತೃಪ್ತಿಗಳು ಪ್ರತ್ಯೇಕತೆಯ ಹಾದಿ ಹಿಡಿದಾಗ ಅದನ್ನು ಸಿಪಿಐ(ಎಂ) ದೃಢವಾಗಿ ವಿರೋಧಿಸುತ್ತಾ ಬಂದಿದೆ. ಖಲಿಸ್ತಾನ್, ಕಾಶ್ಮೀರ, ಆಸ್ಸಾಂ ಮತ್ತು ಈಶಾನ್ಯ ಭಾರತದ ಪ್ರತ್ಯೇಕತವಾದಿ ಗುಂಪುಗಳ ವಿರುದ್ಧ ಅಲ್ಲಿನ ಜನತೆಯನ್ನು ಅಣಿನೆರೆಸುತ್ತಾ ಬಂದಿದ್ದಾರೆ. ಈ ಹೋರಾಟ ಬರಿಯ ಹೇಳಿಕೆಗಳದ್ದು ಮತ್ತು ಭಾವನಾತ್ಮಕವಾದ್ದಲ್ಲ. ತಳಮಟ್ಟದಲ್ಲಿ ಪ್ರತ್ಯೇಕತಾವಾದಿಗಳ ಹಿಂಸಾಚಾರ ಎದುರಿಸಿದ ಹೋರಾಟವಾಗಿತ್ತು. ಖಲಿಸ್ತಾನಿ ಪ್ರತ್ಯೇಕತವಾದಿಗಳ ವಿರುದ್ಧ ಹೋರಾಟದಲ್ಲಿ 1980ರ ದಶಕದಲ್ಲಿ ಹಲವಾರು ವಿದ್ಯಾರ್ಥಿಗಳು ಸೇರಿದಂತೆ 200 ಕಮ್ಯುನಿಸ್ಟ್ ಕಾರ್ಯಕರ್ತರು ಹುತಾತ್ಮರಾಗಿದ್ದಾರೆ. ಹಿರಿಯ ಸಿಪಿಐ(ಎಂ) ನಾಯಕ ಹರಿಕಿಶನ್ ಸಿಂಗ್ ಸುರ್ಜಿತ್ ಅವರೇ ಖಲಿಸ್ತಾನಿಗಳ 'ಹಿಟ್ ಲಿಸ್ಟ್'ನಲ್ಲಿ ಅಗ್ರ ಸ್ಥಾನದಲ್ಲಿದ್ದರು.

ಇದೇ ರೀತಿಯಲ್ಲಿ ಕಾಶ್ಮೀರಿ ಪ್ರತ್ಯೇಕತಾವಾದಿ ಭಯೋತ್ಪಾದಕರ ಜತೆ ತಳಮಟ್ಟದ ಘರ್ಷಣೆಯಲ್ಲಿ ಹಲವಾರು ಸಿಪಿಐ(ಎಂ)ನ ಕಾರ್ಯಕರ್ತರು ಹುತಾತ್ಮರಾಗಿದ್ದಾರೆ. ಜಮ್ಮು–ಕಾಶ್ಮೀರದ ಸಿಪಿಐ(ಎಂ) ನಾಯಕ ಯುಸುಫ್ ತರಿಗಾಮಿ ಈಗಲೂ ಕಾಶ್ಮೀರಿ ಪ್ರತ್ಯೇಕತಾವಾದಿಗಳ 'ಹಿಟ್ ಲಿಸ್ಟ್'ನಲ್ಲಿದ್ದಾರೆ. ಆಸ್ಸಾಂ ಮತ್ತು ಈಶಾನ್ಯ ಭಾರತದ ಪ್ರತ್ಯೇಕತವಾದಿ ಗುಂಪುಗಳಿಗೂ ಸಿಪಿಐ(ಎಂ)ನ ನೂರಕ್ಕೂ ಹೆಚ್ಚು ಕಾರ್ಯಕರ್ತರು ಬಲಿಯಾಗಿದ್ದಾರೆ. 'ರಾಷ್ಟ್ರವಾದ' ಮತ್ತು 'ದೇಶಪ್ರೇಮ'ದ ಬಗ್ಗೆ ಮಾತನಾಡುವ ಎಷ್ಟು ಆರೆಸ್ಸೆಸ್ ಮತ್ತು ಸಂಘ ಪರಿವಾರದ 'ಕಾರ್ಯಕರ್ತರು ಇಂತಹ ಬಲಿದಾನ ಮಾಡಿದ್ದಾರೆ. ತೋರಿಸಲಿ. ಬದಲಾಗಿ ಪಂಜಾಬ್ ಮತ್ತು ಜಮ್ಮು–ಕಾಶ್ಮೀರದಲ್ಲಿ ಪ್ರತ್ಯೇಕತವಾದಿ ಗುಂಪುಗಳ ಜತೆ ಸಂಬಂಧ ಇಟ್ಟುಕೊಂಡಿರುವ ಹಲವಾರು ಬಾರಿ ಶಾಮೀಲಾಗಿರುವ ಅಕಾಲಿ ದಳ ಮತ್ತು ಪಿ.ಡಿ.ಪಿ. ಜತೆ ಜಂಟಿ ಸರಕಾರ ನಡೆಸುತ್ತಿದ್ದಾರೆ. ಮಾತ್ರವಲ್ಲ, ದೇಶದ ತುಂಬಾ ಎಲ್ಲಾ ಪ್ರಾದೇಶಿಕ ಪ್ರತ್ಯೇಕತಾವಾದಿಗಳಿಗೆ ಬೆಂಬಲವಾಗಿದ್ದಾರೆ. ಕರ್ನಾಟಕದಲ್ಲಿ ಪ್ರತ್ಯೇಕ ಕೊಡಗು, ಹೈದರಾಬಾದ್ ಕರ್ನಾಟಕ ಚಳುವಳಿಗಳನ್ನು ಬೆಂಬಲಿಸಿದ್ದಾರೆ. ಇದು ದೇಶವನ್ನು ದುರ್ಬಲಗೊಳಿಸುವ ಒಡೆಯುವ 'ದೇಶ–ದ್ರೋಹ'ವಲ್ಲವೇ? ಇದು 'ದೇಶ–ಪ್ರೇಮ'ವಂತೂ ಖಂಡಿತ ಅಲ್ಲ.

ಆರೆಸ್ಸೆಸ್ ಮತ್ತು ಸಂಘ ಪರಿವಾರದ ಕಾರ್ಯಕರ್ತರು 'ಬಲಿದಾನ' ಮಾಡಿಲ್ಲ ಅಂತಲ್ಲ! ಆದರೆ ಅದನ್ನು 'ಬೇರೆ' ಕೋಮಿನ ದೇಶಬಾಂಧವರನ್ನು ಬಲಿ ತೆಗೆದುಕೊಳ್ಳುವ ಕಾರ್ಯದಲ್ಲಿ ಮಾತ್ರ! ದೇಶದಲ್ಲಿ ಕಳೆದ ಶತಮಾನದಿಂದ ಪ್ರತಿಯೊಂದು ಪ್ರಮುಖ ಕೋಮುದಂಗೆಯಲ್ಲೂ ಆರೆಸ್ಸೆಸ್ ಮತ್ತು ಸಂಘ ಪರಿವಾರ ಅದನ್ನು ಪ್ರಚೋದಿಸಿದ್ದು ಅಥವಾ ಬೆಳೆಸಿದ್ದು ಎಂದು ಹಲವು ದಂಗೆಗಳ ಬಗ್ಗೆ ನಡೆದ ನ್ಯಾಯಾಂಗ 'ತನಿಖಾ ವರದಿಗಳು ಹೇಳಿವೆ. ಸ್ವಾತಂತ್ರ್ಯ ನಂತರದ 30ಕ್ಕೂ ಹೆಚ್ಚು ಇಂತಹ ದಂಗೆಗಳಲ್ಲಿ ಖಂಡಿತ ನೂರಾರು ಸಂಘ ಪರಿವಾರದ ಕಾರ್ಯಕರ್ತರು (ಹೆಚ್ಚಾಗಿ ಹಿಂದುಳಿದ ಅಥವಾ ದಲಿತ ಜಾತಿಗಳ ಬಡವರು) ಬಲಿಯಾಗಿದ್ದಾರೆ. ದೇಶ ಮತ್ತು ಸಮಾಜವನ್ನು ಒಡೆಯುವ ಬಲಿಗಳಲ್ಲಂತೂ ಸಂಘ ಪರಿವಾರವನ್ನು ಮೀರಿಸುವವರಿಲ್ಲ ಎಂದು ಪದೇ ಪದೇ ರುಜುವಾತಾಗಿದೆ.

ದೇಶ ಬರಿಯ ನದಿ–ಪರ್ವತ–ಧ್ವಜ ಅಲ್ಲ!

ಎಡಪಂಥೀಯರ 'ರಾಷ್ಟ್ರವಾದ' ಮತ್ತು 'ದೇಶ–ಪ್ರೇಮ'ಕ್ಕೂ ಸಂಘ ಪರಿವಾರದ ಇಂತಹ ಪರಿಕಲ್ಪನೆಗಳಿಗೂ ಬಹಳ ವ್ಯತ್ಯಾಸ ಇದೆ. ಎಡಪಂಥೀಯರ 'ರಾಷ್ಟ್ರವಾದ' ಮತ್ತು 'ದೇಶ–ಪ್ರೇಮ' ಬರಿಯ ದೇಶದ ಭೂಮಿಯ, ನದಿ–ಪರ್ವತಗಳ, ಧ್ವಜದ, ಮಿಲಿಟರಿ ಬಲದ ಬಗ್ಗೆ ಮಾತ್ರ ಪ್ರೇಮ ಅಲ್ಲ. ಇಲ್ಲಿ ಬದುಕುವ ಜನರ ಬಗ್ಗೆ ಪ್ರೀತಿ, ಅವರ ಬದುಕು ಹಸನು ಮಾಡುವ ಕಾಳಜಿ. ಜನತೆಯ ಸಮಸ್ಯೆಗಳನ್ನು ಅತೃಪ್ತಿಗೆ ಕಾರಣಗಳನ್ನು ಅರ್ಥಮಾಡಿಕೊಂಡು ಅದಕ್ಕೆ ಪರಿಹಾರಗಳನ್ನು ಹುಡುಕುವ, ಅದನ್ನು ಜಾರಿ ಮಾಡಲು ಅವರನ್ನು ಒಲಿಸಿಕೊಳ್ಳುವ ದೇಶದ ಜನತೆಯ ಐಕ್ಯತೆ ಕಾಪಾಡುವ ಧೋರಣೆ ಎಡಪಂಥೀಯ 'ರಾಷ್ಟ್ರವಾದ' ಮತ್ತು 'ದೇಶ–ಪ್ರೇಮ'. ಸಮಸ್ಯೆಗಳಲ್ಲಿ ಬೇಯುತ್ತಿರುವ ಅತೃಪ್ತ ಜನತೆಯ ಮೇಲೆ ಪೋಲಿಸ್–ಮಿಲಿಟರಿ ಹರಿಯಬಿಟ್ಟು ಅವರ ಎದೆಯ ಮೇಲೆ 'ಧ್ವಜ' ಹಾರಿಸುವ, ನೆರೆಯ ದೇಶಗಳ ಜನರನ್ನು ದ್ವೇಷಿಸುವ ಕುರುಡು ಬಲಪಂಥೀಯ 'ರಾಷ್ಟ್ರವಾದ' ಮತ್ತು 'ದೇಶ–ಪ್ರೇಮ' ನಮ್ಮದಲ್ಲ. ಬ್ರಿಟಿಷರು ಗಾಂಧಿ–ತಿಲಕ್‌ರಂತಹ ನಾಯಕರ ವಿರುದ್ಧ ಬಳಸಿದ 'ದೇಶದ್ರೋಹ'ದ ಕಾನೂನು ಬಳಸುವುದು ನಮ್ಮ 'ದೇಶ–ಪ್ರೇಮ'ದ ಮಾಡೆಲ್ ಅಲ್ಲ.

ಇಷ್ಟಕ್ಕೂ ಎಡಪಂಥೀಯತೆ ಎಂದರೆ ಏನು? ಒಂದು ದೇಶದಲ್ಲಿ ಜಾತಿ, ಧರ್ಮ, ಲಿಂಗ, ಜನಾಂಗ, ವರ್ಗ ಮುಂತಾದ ಯಾವುದೇ ತಾರತಮ್ಯಗಳಿಲ್ಲದ ಸಮೃದ್ಧ ಸಮ ಸಮಾಜ ಕಟ್ಟುವುದು ಎಡಪಂಥೀಯತೆಯ ಉದ್ದೇಶ. ಇದಕ್ಕೆ ಚಾರಿತ್ರಿಕ ಕಾರಣಗಳಿಂದಾಗಿ ರಚನೆಗೊಂಡ ಬೇರೊಂದು ರಾಷ್ಟ್ರವನ್ನು, ಅಲ್ಲಿಯ ಜನಗಳನ್ನು ವೈರಿಗಳೆಂದು ಭಾವಿಸುವ ಅಗತ್ಯವೇ ಬರುವುದಿಲ್ಲ. ಈಗಿನ ಸಮಾಜದಲ್ಲಿರುವ ಎಲ್ಲಾ ರೀತಿಯ ತಾರತಮ್ಯಗಳನ್ನು, ಅಸಮಾನತೆಗಳನ್ನು ಮೂಲಭೂತ ಸಂರಚನಾತ್ಮಕ ಬದಲಾವಣೆಗಳ ಮೂಲಕ ಹೋಗಲಾಡಿಸುವುದು, ಅದಕ್ಕೆ ಜನತೆಯನ್ನು ಅಣಿನೆರೆಸುವುದು ಎಡಪಂಥೀಯತೆ. ಇದು ತಪ್ಪಾ? ಈ ಅರ್ಥದಲ್ಲಿ ಲೋಹಿಯಾವಾದಿಗಳು, ಅಂಬೇಡ್ಕರ್‌ವಾದಿಗಳು, ಮಾರ್ಕ್ಸ್‌ವಾದಿಗಳು ಎಲ್ಲರೂ ಎಡಪಂಥೀಯರೇ. ಈ ಉದ್ದೇಶ ಹೇಗೆ ಸಾಧಿಸಬೇಕು? ಯಾವ ತಾರತಮ್ಯ ಹೋಗಲಾಡಿಸುವುದು ಆದ್ಯತೆಯದು ಇತ್ಯಾದಿ ಬಗ್ಗೆ ಭಿನ್ನಾಭಿಪ್ರಾಯ ಇರಬಹುದು. ಆದರೆ ಒಂದು ದೇಶದಲ್ಲಿ ಸಮೃದ್ಧ ಸಮ ಸಮಾಜ ಕಟ್ಟುವುದು ಸ್ವಭಾವತಃ 'ದೇಶ–ವಿರೋಧಿ' ಹೇಗಾಗುತ್ತದೆ?

ಇದಕ್ಕೆ ಬದಲಾಗಿ ಬಲಪಂಥೀಯತೆ ಎಂದರೆ ಈಗಿನ ಸಮಾಜದಲ್ಲಿ ಯಾವುದೇ ಸಮಸ್ಯೆಗಳಿಲ್ಲ. ಸಮಾಜದ ಬದಲಾವಣೆ ಅಗತ್ಯವಿಲ್ಲ. ಈಗ ಇರುವ ಎಲ್ಲಾ ತಾರತಮ್ಯಗಳು ಸ್ವಾಭಾವಿಕ. ಅದನ್ನು ಬದಲಾಯಿಸಬಾರದು. ಸಮಾಜದ ಮೂಲಭೂತ ಸಂರಚನಾತ್ಮಕ ಬದಲಾವಣೆಗಳ ಅಗತ್ಯವಿಲ್ಲ ಎನ್ನುವ ಯಥಾಸ್ಥಿತಿವಾದ. ಹೆಚ್ಚೆಂದರೆ ಹಿಂದೆ ಎಂದೋ ಇದ್ದ 'ಸ್ವರ್ಣಯುಗ'ಕ್ಕೆ ಹಿಂದಿರುಗುವಂತಹದ್ದು. ಬಿಜೆಪಿ, ಎಬಿವಿಪಿ ಸೇರಿದಂತೆ ಆರೆಸ್ಸೆಸ್ ನಾಯಕತ್ವದ ಸಂಘ ಪರಿವಾರದ್ದು ಇಂತಹ ಬಲಪಂಥೀಯತೆ. ಈ ಅರ್ಥದಲ್ಲಿ ಎಡ ಮತ್ತು ಬಲಪಂಥೀಯತೆ ನಡುವೆ ಘರ್ಷಣೆ ವಿ.ವಿ.ಗಳಲ್ಲಾಗಲಿ, ಸಮಾಜದಲ್ಲಾಗಲಿ ಸ್ವಾಭಾವಿಕ. ಅನಿವಾರ್ಯ. ಅಪೇಕ್ಷಣೀಯ.

ಜೆ.ಎನ್.ಯು. ಮೇಲೆ ದಾಳಿ ಬರಿಯ ಒಂದು ವಿ.ವಿ. ಮೇಲೆ ದಾಳಿ ಅಲ್ಲ. ನಮ್ಮ ಸಂವಿಧಾನದ ಮೇಲೆ ದಾಳಿ. ಹುಸಿ ಕುರುಡು 'ದೇಶ–ಪ್ರೇಮ', 'ರಾಷ್ಟ್ರವಾದ'ದ ಗುರಾಣಿ ಹಿಡಿದು ಸಂಘ ಪರಿವಾರ ನಮ್ಮ ಸಂವಿಧಾನದ ಎಲ್ಲಾ ಮೂಲಭೂತ ಮೌಲ್ಯಗಳ (ಪ್ರಜಾಪ್ರಭುತ್ವ, ಸೆಕ್ಯುಲರ್ ವಾದ, ಬಹುತ್ವ, ಸಮಾನತೆ) ಮೇಲೆ ದಾಳಿ ಮಾಡಲು ಹೊರಟಿದೆ.





ಫೆ. 16 : ರಾಜ್ಯಾದ್ಯಂತ ಯಶಸ್ವಿಯಾಗಿ ನಡೆದ ವಿವಿ ಬಂದ್

ರೋಹಿತ್ ವೆಮುಲ ಹತ್ಯೆಗೆ ಕಾರಣವಾದವರ ಬಂಧನಕ್ಕೆ ಒತ್ತಾಯಿಸಿ ಹಾಗೂ "ಮತೀಯವಾದ ಅಳಿಯಲಿ, ಕ್ಯಾಂಪಸ್ ಡೆಮಾಕ್ರಸಿ ಉಳಿಯಲಿ" ಎಂಬ ಬೇಡಿಕೆಯೊಂದಿಗೆ ವಿದ್ಯಾರ್ಥಿ ಸಂಘಟನೆಗಳು ಫೆಬ್ರವರಿ 16ರಂದು ರಾಜ್ಯಾದ್ಯಂತ ಕರೆ ನೀಡಿದ್ದ ಬಂದ್ ಕಾರ್ಯಕ್ರಮ ಯಶಸ್ವಿಯಾಗಿದೆ. ಬೆಂಗಳೂರು, ಮೈಸೂರು, ತುಮಕೂರು, ಧಾರವಾಡ, ಬಳ್ಳಾರಿ, ಹಂಪಿ, ಗುಲಬರ್ಗಾ, ಶಿವಮೊಗ್ಗ, ಮಂಗಳೂರು, ಬೆಳಗಾವಿ, ದಾವಣಗೆರೆ ಜಾನಪದ ವಿ.ವಿ ಜಿ.ಕೆ.ವಿ.ಕೆ ವಿ.ವಿಗಳ ವಿದ್ಯಾರ್ಥಿಗಳು ತರಗತಿಯನ್ನು ಬಹಿಷ್ಕರಿಸಿ ವಿಶ್ವವಿದ್ಯಾಲಯ ಬಂದ್ ಹೋರಾಟವನ್ನು ಬೆಂಬಲಿಸಿದರು. ಬಂದ್ ಗೆ ಕರೆ ಕೊಟ್ಟ ನಂತರ ಜೆ.ಎನ್.ಯು. ಕ್ಯಾಂಪಸ್ ಮೇಲೆ ನಡೆದ ಪೋಲಿಸ್ ದಾಳಿ ಹಾಗೂ 'ದೇಶದ್ರೋಹ'ದ ಆರೋಪದ ಮೇಲೆ ಅಲ್ಲಿನ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹಯ್ಯ ಕುಮಾರ್ ಬಂಧನವನ್ನೂ ಪ್ರತಿಭಟನಾ ಸಭೆಯಲ್ಲಿ ಖಂಡಿಸಲಾಯಿತು.

ಬೆಂಗಳೂರಿನಲ್ಲಿ ಟೌನ್ ಹಾಲ್ ನಿಂದ ಹೊರಟ ಮೆರವಣಿಗೆಯು ಫ್ರೀಡಂ ಪಾರ್ಕ್‌ನಲ್ಲಿ ಸಮಾವೇಶಗೊಂಡು ಬಹಿರಂಗ ಸಭೆ ನಡೆಯಿತು. ಬಹಿರಂಗ ಸಭೆಯಲ್ಲಿ ಸಾಹಿತಿಗಳಾದ ಕೆ.ಮರುಳುಸಿದ್ದಪ್ಪ, ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಿ.ಎನ್.ನಾಗರಾಜ್, ಜೆ.ಡಿ.ಯು ಪಕ್ಷದ ಎಂ.ಪಿ ನಾಡಗೌಡ, ದಲಿತ ಮುಖಂಡರಾದ ಮಾವಳ್ಳಿ ಶಂಕರ್, ಲಯನ್ ಬಾಲಕೃಷ್ಣ, ಎಂ.ವೆಂಕಟಸ್ವಾಮಿ, ಜಗನ್ನಾಥ್, ಬಿ.ಗೋಪಾಲ್, ಸಿ.ಎಸ್.ರಘು, ಚನ್ನಕೃಷ್ಣಪ್ಪ, ಬಿ.ರಾಜಶೇಖರಮೂರ್ತಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಇದಲ್ಲದೆ ವಿದ್ಯಾರ್ಥಿ ಸಂಘಟನೆಗಳ ಮುಖಂಡರಾದ ಎಸ್.ಎಫ್.ಐನ ವಿ.ಅಂಬರೀಷ್, ಗುರುರಾಜ್ ದೇಸಾಯಿ, ಕೆ.ಎಸ್.ಎಸ್ ನ ಟಿ. ಕುಮಾರಸ್ವಾಮಿ, ಡಾ ಈರಯ್ಯ ಹಂಪಾಪುರ, ಎನ್. ಎಸ್.ಯು.ಐ ನ ಎಚ್.ಎಸ್. ಮಂಜುನಾಥ್, ಸಿರಿಲ್ ಪ್ರಭು, ಡಿ.ಎಸ್.ಎಫ್ ನ ವಿ.ಎಂ. ಸಂಘರ್ಷ, ರಾಜ್ ಗೋಪಾಲ್ ಎಸ್.ಐ.ಒ.ದ ಲಭಿತ್ ಶಫಿ, ಅಬ್ದುಲ್ ಕಬೀರ್. ಕೆ.ವಿ.ಎಸ್ ನ ಸಂಜಯ್, ಎ.ಐ.ಎಸ್. ಎಫ್. ನ ಮಂಜುನಾಥ್, ಜಿ.ಕೆ.ವಿ.ಕೆ ಯ ಪ್ರವೀಣ್ ಮತ್ತು ವಿಜಯ ಕುಮಾರ್ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಹಾಜರಿದ್ದರು.

ಬಳ್ಳಾರಿ: ಕನ್ನಡ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿ ವಿಶ್ವವಿದ್ಯಾಲಯ ಬಂದ್ ನಡೆಸಿದರು. ವಿ.ವಿ ಆವರಣದ ತ್ರಿಪದಿ ಸರ್ಕಲ್‌ನಿಂದ ಮೆರವಣಿಗೆ ನಡೆಸಿ ಅಕ್ಷರ ಗ್ರಂಥಾಲಯದ ಮುಂದೆ ಸಮಾವೇಶಗೊಂಡಿತು. ನಂತರ ವಿ.ವಿ ಯ ಕುಲಸಚಿವರಾದ ಪ್ರೊ.ಡಿ.ಪಾಂಡುರಂಗಬಾಬುರವರ ಮೂಲಕ ರಾಜ್ಯಪಾಲರಿಗೆ ಹಕ್ಕೊತ್ತಾಯಗಳನ್ನು ಸಲ್ಲಿಸಲಾಯಿತು.

ಪ್ರತಿಭಟನಾ ಸಭೆಯನ್ನನ್ನುದ್ದೇಶಿಸಿ ಪಿಡಿಎಫ್ ಸಂಶೋಧಕರಾದ ಡಾ.ಮಲ್ಲಿಕಾಜುನ ಮಾನ್ಪಡೆ, ವಿದ್ಯಾರ್ಥಿ ಮುಖಂಡರಾದ ಸಂದೀಪ್.ಡಿ.ಡಿ, ಕುಮಾರಸ್ವಾಮಿ, ದೊಡ್ಡ ಹನುಮಂತ, ಮುನಿರಾಜ್. ಎಂ, ಕೃಷ್ಣಮೂರ್ತಿ, ಹೋರಾಟವನ್ನು ಬೆಂಬಲಿಸಿ ಎಸ್.ಎಫ್.ಐ ತಾಲೂಕು ಕಾರ್ಯದರ್ಶಿ ವಸಂತ ಕಲಾಲ್, ಡಿ.ವೈ.ಎಫ್.ಐ ರಾಜ್ಯ ಸಮಿತಿ ಸದಸ್ಯರಾದ ಹುಳ್ಳಿ ಉಮೇಶ್ ಮಾತನಾಡಿದರು. ಪ್ರತಿಭಟನೆಯಲ್ಲಿ ಗೌರಿ, ಡಾ.ರಾಧಮ್ಮ, ಷರೀಫ್, ವೀರನಗೌಡ, ದೌಲಸಾಬ್, ಪ್ರದೀಪ್, ಹರೀಶ್, ರಾಜಣ್ಣ, ಮಧು, ಎಸ್.ಎಫ್.ಐನ ನಾಗರಾಜ್, ರಜತ್ ಡಿವೈಎಫ್ಐನ ಬಸವರಾಜ್ ಕಮ್ಮಾರ್ ಸೇರಿದಂತೆ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.


ಹಾವೇರಿ : ಕರ್ನಾಟಕ ವಿಶ್ವವಿದ್ಯಾಲಯದ ರಾಜೀವಗಾಂಧಿ ಸ್ನಾತಕೋತ್ತರ ಕೇಂದ್ರವನ್ನು ಬಂದ್ ಮಾಡಿ ಎಸ್‌ಎಫ್‌ಐ ಕಾರ್ಯಕರ್ತರು ಹಾಗೂ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳು ಪ್ರತಿಭಟನೆ ನಡಸಿ ಮಾನ್ಯ ಆಡಳಿತಾಧಿಕಾರಿಗಳ ಮೂಲಕ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಸಾಮಾಜಿಕ ಜನಪರಿವರ್ತನಾ ಆಂದೋಲನದ ಮುಖ್ಯಸ್ಥರಾದ ಹಸೀನಾ ಹೆಡಿಯಾಲ, ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ರೇಣುಕಾ ಕಹಾರ, ಮುಖಂಡರಾದ ಪ್ರತಿಮಾ ಬಿಲಾನಾ, ಮಂಜು ಕಡ್ಲಿ, ಇಮಾಮ್ ನದಾಫ, ವಿನಾಯಕ ಯಳಮಲ್ಲಿ, ಲಿಂಗರಾಜ ಎಚ್, ಮಂಜುನಾಥ ಭಜಂತ್ರಿ, ಸಿದ್ದಪ್ಪ ಕುರಿ, ಶಂಭು ಮುಂಡರಗಿ, ಅರುಣಕುಮಾರ, ಬಸಪ್ಪ ಮಾದರ, ಶಂಬುಲಿಂಗ ಎಚ್, ವಿರೇಶ ಪತ್ತಾರ, ಮಹೇಶ ಛಬ್ಬಿ, ಮಹಾಂತೇಶ ಹೂಗಾರ ಹಾಗೂ ಮುಂತಾದವರು ಭಾಗವಹಿಸಿದ್ದರು.

ತುಮಕೂರು: ರಾಜ್ಯಾದ್ಯಂತ ವಿಶ್ವವಿದ್ಯಾನಿಲಯಗಳ ಬಂದ್‌ಗೆ ಕರೆ ನೀಡಿದ್ದ ಪ್ರಗತಿಪರ ವಿದ್ಯಾರ್ಥಿ–ಯುವಜನ ಸಂಘಟನೆಗಳ ನೇತೃತ್ವದಲ್ಲಿ ತುಮಕೂರು ವಿ.ವಿ. ಬಂದ್ ಮಾಡಲಾಯಿತು. ಪ್ರತಿಭಟನಾ ನಿರತರನ್ನು ಉದ್ದೇಶಿಸಿ ಪಿ.ಯು.ಸಿ.ಎಲ್ ಅಧ್ಯಕ್ಷರಾದ ಪ್ರೊ.ಕೆ. ದೊರೈರಾಜ್ ಮಾತನಾಡಿ ವಿಶ್ವವಿದ್ಯಾನಿಲಯಗಳಲ್ಲಿ ಸೌಹಾರ್ದಯುತವಾದ ವಾತವಾರಣವನ್ನು ನಿರ್ಮಾಣ ಮಾಡಬೇಕಾಗಿದ್ದು ಬೌದ್ಧಿಕವಾಗಿ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕಾದ ವಿ.ವಿ.ಗಳಲ್ಲಿ ಇಂದು ಮತೀಯವಾದ, ಕೋಮುವಾದಗಳನ್ನು ಹರಡುವ ಮೂಲಕ ವಿದ್ಯಾರ್ಥಿಗಳಲ್ಲಿ ದ್ವೇಷದ ವಾತವರಣವನ್ನು ಬಿತ್ತುತ್ತೀವೆ ಎಂದರು.

ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾಧ್ಯಕ್ಷ

ಪುಟ 15 ಕ್ಕೆ



ಅತಿಥಿ ಉಪನ್ಯಾಸಕರ ಹೋರಾಟ ನಿಂತಿಲ್ಲ



ತಮ್ಮ ಹಲವು ಬೇಡಿಕೆಗಳನ್ನು ಈಡೇರಿಸಬೇಕೆಂದು ನಿರಂತರವಾಗಿ (ಹಾಗೂ ಕಳೆದ ಒಂದು ತಿಂಗಳಿಂದ ತೀವ್ರವಾಗಿದ್ದ) ರಾಜ್ಯದ ವಿವಿದ ಕಡೆಗಳಲ್ಲಿ ಸಂಘಟಿಸಿದ ಅತಿಥಿ ಉಪನ್ಯಾಸಕರ ಹೋರಾಟ ಒಂದು ರೀತಿಯಲ್ಲಿ ಯಶಸ್ಸುಗಳಿಸಿದೆ. ಬೇಡಿಕೆ ಈಡೇರಿಸದೇ ಏಕಾಏಕಿಯಾಗಿ ಹೋರಾಟ ನಿರತ ಅತಿಥಿ ಉಪನ್ಯಾಸಕರನ್ನು ಕೈಬಿಟ್ಟು ಬದಲಿ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಶಾಲಾ–ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಿದ ಸರ್ಕಾರವು ಈಗಾಗಲೇ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿರುವವರನ್ನು ತೆಗೆದು ಹಾಕುವ ಹುನ್ನಾರ ನಡೆಸಿದರು. ಹೋರಾಟ ನಿರತರ ಜತೆ ಮಾತುಕತೆ ನಡೆಸದ ಉನ್ನತ ಶಿಕ್ಷಣ ಸಚಿವರಾದ ಟಿ.ಬಿ.ಜಯಚಂದ್ರರವರ ನಿರ್ಧಾರವನ್ನು ಅತಿಥಿ ಉಪನ್ಯಾಸಕರ ಸಂಘ ಬಲವಾಗಿ ಖಂಡಿಸಿದೆ.

ಹೊಸದಾಗಿ ಆದೇಶ ಹೊರಡಿಸಿರುವುದನ್ನು ಹಿಂಪಡೆಯಬೇಕು ಹಾಗೂ ಬೇಡಿಕೆಗಳನ್ನು ಈಡೇರಿಸಬೇಕೆಂದು ಅತಿಥಿ ಉಪನ್ಯಾಸಕರು ತಮ್ಮ ಸಂಘ ಮತ್ತು ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಫೆಬ್ರವರಿ 15 ರಂದು ಮುಖ್ಯಮಂತ್ರಿಗಳ ಮನೆ ಎದುರು ಪ್ರತಿಭಟನೆ ಹಮ್ಮಿಕೊಂಡಿದ್ದರು. ರಾಜ್ಯದ ಮೂಲೆ ಮುಲೆಗಳಿಂದ ಬಂದ ಸಾವಿರಾರು ಅತಿಥಿ ಉಪನ್ಯಾಸಕರು ದೃಢ ವಿಶ್ವಾಸದಿಂದ ಹೋರಾಟದಲ್ಲಿ ಭಾಗವಹಿಸಿದರು.

ಈ ಹೋರಾಟವನ್ನು ಬೆಂಬಲಿಸಿ ವಿಧಾನ ಪರಿಷತ್ ಸದಸ್ಯರಾದ ಬಸವರಾಜ ಹೊರಟ್ಟಿ ಸೇರಿದಂತೆ ಹಲವು ವಿಧಾನ ಪರಿಷತ್ ಸದಸ್ಯರು ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಅತಿಥಿ ಉಪನ್ಯಾಸಕರ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿದರು. ಹೋರಾಟದ ತೀವ್ರತೆಗೆ ಮಣಿದ ಸರ್ಕಾರವು ಬದಲಿ ವ್ಯವಸ್ಥೆ ಮಾಡಿಕೊಳ್ಳಬೇಕೆಂದು ಹೊರಡಿಸಿದ ಆದೇಶವನ್ನು ಹಿಂಪಡೆಯಬೇಕಾಯಿತು.

ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಸೆಮಿಸ್ಟರ್ ಪರೀಕ್ಷೆಗಳು ಹತ್ತಿರ ಇರುವುದರಿಂದ ವಿದ್ಯಾರ್ಥಿಗಳಿಗೆ ಪಾಠ ಮಾಡಲು ಅತಿಥಿ ಉಪನ್ಯಾಸಕರು ನಿರ್ಧರಿಸಿದ್ದಾರೆ. ಇದರರ್ಥ ಅವರ ಹೋರಾಟ ಹಿಂತೆಗೆಯಲಾಗಿದೆ ಎಂದಲ್ಲ. ವಿದ್ಯಾರ್ಥಿಗಳ ಹಿತದೃಷ್ಟಿಯಿಂದಷ್ಟೇ ತಾತ್ಕಾಲಿಕವಾಗಿ ನಿಲ್ಲಿಸಲಾಗಿದೆ.

ಪುಟ 15 ಕ್ಕೆ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**